# ಕೇರಳ ಪಾಠಾವಳಿ

# KERALA READER

# ಕನ್ನಡ

# KANNADA - AT

## VII

TB/VII/2015/400(AT)(K)

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

**51ಕ. ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು, ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರು ಮತ್ತು ಹದಿನಾಲ್ಕು ವರ್ಷಗಳ ನಡುವಣ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

TB/VII/2015/408(AT)(K)

# ಕೇರಳ ಪಾಠಾವಳಿ
# KERALA READER

# ಕನ್ನಡ
## KANNADA - 7 AT

### ತರಗತಿ

### VII

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ

2015

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

*Prepared by :*

**State Council of Educational Research and Training (SCERT)**
Poojappura, Thiruvananthapuram 695012, Kerala

Website : www.scertkerala.gov.in
e-mail : scertkerala@asianetindia.com
Phone : 0471 - 2341883, Fax : 0471 - 2341869
First Edition : 2014, Reprint : 2015
Typesetting : SCERT
Lay out : SCERT
Cover design : SCERT
Printed at : KBPS, Kakkanad, Kochi
© Department of Education, Government of Kerala

ಒಲವಿನ ಮುದ್ದಿನ ಮಕ್ಕಳೇ,

ಭಾಷೆಯೆಂದರೆ ಮಾತೆಯ ಮಮತೆಯ ಹಾಗೆ. ನಯ ವಿನಯದಿಂದ ಕೂಡಿದ ಮಾತು ಎಲ್ಲರನ್ನು ಸೆಳೆಯುತ್ತದೆ. ನಮ್ಮ ಮಾತು ಕೃತಿಗಳು ನಮ್ಮ ವ್ಯಕ್ತಿತ್ವ ಚಿಂತನೆಗಳನ್ನು ಹೊರಗೆಡಹುತ್ತವೆ ಅಲ್ಲವೇ? ಕನ್ನಡ ನುಡಿಯು ನಮ್ಮನ್ನೆಲ್ಲ ಬೆಸೆಯುತ್ತದೆ. ಸಂಸ್ಕೃತಿಯ ಕೈಗನ್ನಡಿಯಾಗಿರುವ ನುಡಿಯ ಹಿರಿಮೆಯನ್ನು ನೀವೆಲ್ಲರೂ ಅರಿತುಕೊಳ್ಳಬೇಕಾಗಿದೆ. ಅದಕ್ಕಾಗಿ ನಿಮ್ಮ ಮನಸೂರೆಗೊಳಿಸುವಂತಹ ಕತೆ, ಕವಿತೆ, ನಾಟಕ, ಇತ್ಯಾದಿ ಸಾಹಿತ್ಯ ಪ್ರಕಾರಗಳನ್ನು ಈ ಪಠ್ಯಪುಸ್ತಕದಲ್ಲಿ ಕೊಡಲಾಗಿದೆ. ನಿಮ್ಮ ಆಶಯಗಳನ್ನೂ, ಭಾವನೆಗಳನ್ನೂ, ಅನುಭವಗಳನ್ನೂ ಹಂಚಿಕೊಳ್ಳಲೂ ಪ್ರಕಟಿಸಲೂ ಈ ಪಾಠಪುಸ್ತಕವು ಸಹಕಾರಿಯಾಗಲಿ ಎಂದು ಆಶಿಸುತ್ತೇನೆ. ಇವುಗಳಲ್ಲಿರುವ ಉತ್ತಮ ಮೌಲ್ಯಗಳು ಚಿಂತನೆಗಳು ನಿಮ್ಮ ಬದುಕಿಗೆ ದಾರಿದೀಪವಾಗಲಿ. ಕನ್ನಡ ಕುಸುಮದ ಕಂಪನ್ನು ಪಸರಿಸಲು ನಾವೆಲ್ಲ ಒಂದಾಗಿ ಶ್ರಮಿಸೋಣ ಎಂದು ಹಾರೈಸುತ್ತಾ

ಪ್ರೀತಿಪೂರ್ವಕ ಹಾರೈಕೆಗಳೊಂದಿಗೆ,

ಡಾ। ಎಸ್. ರವೀಂದ್ರನ್ ನಾಯರ್
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ.

## TEXTBOOK DEVELOPMENT COMMITTEE

# KERALA READER - VII
# KANNADA - AT

**Participants**

Narasimha K., HM, GLPS Pathur.
Radhakrishna, Trainer, BRC Kasaragod.
Rajarama K., Asst. Teacher, AUPS Yethadka.
Shashikala K., HSA, GHSS Paivalike nagar.
Subramanya Bhat K., PD Teacher, GSBS Soorambail.
Stany Lobo, Asst. Teacher, HFASBS Kumbla.
Udayakumar M., PD Teacher, GHSS Adoor.

**Experts**

Dr. Rathnakara Mallamoole, Asst. Professor, Govt. College, Kasaragod.
Shreedhara, Asst. Professor, Govt. College, Kasaragod.
Dr. Srikrishna Bhat P., Professor (Rtd), Govt. College, Kasaragod.

**External Experts**

Dr. Radhakrishna N., Asst. Professor, Govt. College, Kasaragod.
Shivashankar, Asst. Professor, Govt. College, Manjeshwar.

**Artists**

Bala Madhurakanana, Madhurakanana, Bela.
Jyothychandran, GVHSS Karadka.
Tagore, Alappuzha

**Academic Co-ordinator**

Dr. C. Bhamini, Research Officer, SCERT, Thiruvananthapuram

---

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
ವಿದ್ಯಾಭವನ, ಪೂಜಪ್ಪುರ, ತಿರುವನಂತಪುರ 695012

# ಅನುಕ್ರಮಣಿಕೆ


| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1. | ಆದರ್ಶ ಜೀವನ | 7 |
| 2. | ಜನಪದ ಸಿರಿ | 21 |
| 3. | ಚೆಲುವು ತುಂಬಲಿ | 33 |
| 4. | ಬೇವು – ಬೆಲ್ಲ | 47 |
| 5. | ನಂಬಿಕೆಯ ನೆರಳು | 59 |
| 6. | ನಾಡು – ನುಡಿ | 73 |

# ಭಾರತದ ಸಂವಿಧಾನ

## ಭಾಗ 4(ಕ)

## ಮೂಲಭೂತ ಕರ್ತವ್ಯಗಳು

51ಕ. ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು.

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಎತ್ತಿ ಹಿಡಿಯುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ, ಹಾಗೆ ಮಾಡುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಗೆ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಸಮಾನ ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಅಭಿವೃದ್ಧಿಗೊಳಿಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಸಮರ್ಪಕವಾಗಿ ಶ್ರಮಿಸುವುದು.

(ಟ) ಆರು ಮತ್ತು ಹದಿನಾಲ್ಕು ವರ್ಷಗಳ ನಡುವಣ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಬಾಲಕರಿಗೋ, ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# 1. ಆದರ್ಶ ಜೀವನ

ಒಬ್ಬ ವ್ಯಕ್ತಿಯು ಪರಿಪೂರ್ಣನಾಗಲು ಹಿರಿಯರ ಆದರ್ಶಗಳೂ ಸದ್ಗುಣಗಳೂ ದಾರಿದೀಪವಾಗುತ್ತದೆ. ಪ್ರೀತಿ, ತ್ಯಾಗ, ಅಹಿಂಸೆ, ಪರೋಪಕಾರ ಇತ್ಯಾದಿ ಗುಣಗಳನ್ನು ಹಾಗೂ ಉತ್ತಮ ಹವ್ಯಾಸಗಳನ್ನು ಪ್ರತಿಯೊಬ್ಬ ವ್ಯಕ್ತಿಯೂ ಬೆಳೆಸಿಕೊಳ್ಳಬೇಕು. ಗಾಂಧೀಜಿ, ವಿವೇಕಾನಂದ ಮೊದಲಾದ ಮಹನೀಯರು ಹಿರಿಯರ ಆದರ್ಶಗಳನ್ನು ಮೈಗೂಡಿಸಿಕೊಂಡು ಲೋಕ ವಿಖ್ಯಾತರಾದರು. ಹಾಗೆಯೇ ನಾವು ಹಿರಿಯರ ಆದರ್ಶಗಳನ್ನೂ ಸದ್ಗುಣಗಳನ್ನೂ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾ ಉತ್ತಮ ಸಮಾಜ ನಿರ್ಮಾಣಕ್ಕೆ ಕಟಿಬದ್ಧರಾಗೋಣ.



# ತಾಯಿ

ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ. ಎಂಬ ಗಾದೆ ಮಾತನ್ನು ಕೇಳಿದ್ದೀರಲ್ಲವೇ? ಎಲ್ಲರೂ ತಾಯಿಯನ್ನು ಗೌರವಭಾವದಿಂದ ಕಾಣುತ್ತಾರೆ. ತಾಯಿಯ ಪ್ರೀತಿ, ತ್ಯಾಗಕ್ಕೆ ಸಮಾನವಾದುದು ಯಾವುದೂ ಇಲ್ಲ.

ತಾಯೆ, ಕರುಣೆಯ ಸಿರಿಯ ಕಣಜವೆ
ನಿನಗೆ ವಂದನೆ ವಂದನೆ
ನ್ಯಾಯ ನೀತಿಗಳನ್ನು ಕಲಿಸಿದ
ನಿನ್ನ ಹಿರಿಮೆಗೆ ವಂದನೆ

ಮೈಯ ಕೊಳೆಯನು ತೊಳೆದು ಬೆಳಗಿದ
ನಿನ್ನ ಪ್ರೀತಿಗೆ ವಂದನೆ
ಕಾಯಕವೆ ಗುರಿಯೆಂದು ತಿಳಿಸಿದ
ನಿನ್ನ ಗರಿಮೆಗೆ ವಂದನೆ




ನಿನ್ನ ಹೃದಯದ ಅಗಲ ಆಗಸ
ದಂತೆ ವಿಸ್ತರವಾಗಿದೆ
ನಿನ್ನ ಪ್ರೀತಿಯ ಆಳ ಸಾಗರ
ಕಿಂತ ಆಳವೆ ಆಗಿದೆ

ನಿನ್ನ ಮುದ್ದಿನ ಸವಿಯು ಸಕ್ಕರೆ
ಗಿಂತಲೂ ಸಿಹಿಯಾಗಿದೆ
ನಿನ್ನ ಸರಿಹೋಲುವರ ಕಾಣೆನು
ನಿನಗೆ ವಂದನೆ ವಂದನೆ

ತಂದೆಯನು ಗುರುವನ್ನು ಲೋಕದ
ದೇವರನು ಸಹ ತಿಳಿಸಿದ
ತಾಯೆ ನೀನೇ ಆದಿ ಶ್ರೀಗುರು
ನಿನಗೆ ವಂದನೆ ವಂದನೆ

ವೆಂಕಟರಾಜ ಪುಣಿಂಚತ್ತಾಯ

## ವೆಂಕಟರಾಜ ಪುಣಿಂಚತ್ತಾಯ



ಶ್ರೀ ವೆಂಕಟರಾಜ ಪುಣಿಂಚತ್ತಾಯರು 1936, ಅಕ್ಟೋಬರ್ 1 ರಂದು ಕಾಸರಗೋಡು ಜಿಲ್ಲೆಯ ಪುಂಡೂರು ಮನೆತನದಲ್ಲಿ ಜನಿಸಿದರು. ಅವರ ತಂದೆಯ ಹೆಸರು ದಾಮೋದರ ಪುಣಿಂಚತ್ತಾಯ. ತಾಯಿ ಸರಸ್ವತಿ ಅಮ್ಮ. ಇವರು ಎಡನೀರಿನ ಸ್ವಾಮೀಜೀಸ್ ಹೈಸ್ಕೂಲಿನಲ್ಲಿ ದೀರ್ಘಕಾಲ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಸಾಹಿತ್ಯ, ನಾಟಕ,ತಾಳಮದ್ದಳೆ.ಸಂಶೋ ಧನೆ ಮುಂತಾದ ಕ್ಷೇತ್ರಗಳಲ್ಲಿ ಇವರು ಕನ್ನಡ ಭಾಷೆಗೆ ತಮ್ಮದೇ ಆದ ಕೊಡುಗೆಯನ್ನಿತ್ತಿದ್ದಾರೆ. ಶೈಲೂಷಿ, ಸುಭಾಷಿತ ಲಹರಿ, ಜೋಕಾಲಿ, ಆಲಡೆ, ಮುಂತಾದವು ಇವರ ಕವನ ಸಂಕಲನಗಳು. ಮಲೆಯಾಳದ ಪ್ರಸಿದ್ಧ ಕಥೆಗಾರರಾದ ಬಶೀರ್‌ರ 'ಎನ್ನುಪ್ಪುಪ್ಪಾಕ್ಕೊರು ಆನಯುಂಡಾಯಿರುನ್ನು' ಕೃತಿಯನ್ನು 'ನನ್ನಜ್ಜನಿಗೊಂದಾನೆಯಿತ್ತು' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಭಾಷಾಂತರಿಸಿದ್ದಾರೆ. ತುಳು ಭಾಷೆಯ ಹಲವು ಶಾಸನಗಳ, ಗ್ರಂಥಗಳ ಸಂಶೋಧನೆ ನಡೆಸಿದ್ದಾರೆ. ಶ್ರೀ ಭಾಗವತೊ, ಕಾವೇರಿ, ಮಹಾಭಾರತೊ ಮುಂತಾದ ಪ್ರಾಚೀನ ತುಳು ಕಾವ್ಯಗಳನ್ನು ಇವರು ಸಂಪಾದಿಸಿ ಪ್ರಕಟಿಸಿದ್ದಾರೆ. ಇವರು 2012 ಜುಲೈ 13 ರಂದು ಇಹಲೋಕವನ್ನು ತ್ಯಜಿಸಿದರು.

### ಚಟುವಟಿಕೆಗಳು

- **ಹಾಡಿರಿ**

ಕವನವನ್ನು ರಾಗವಾಗಿ ಹಾಡಿರಿ.

- **ಚರ್ಚಿಸಿರಿ**

• ಕವನದಲ್ಲಿ ಬರುವ 'ತಾಯಿಯ ಪ್ರೀತಿಯು ಸಾಗರಕ್ಕಿಂತಲೂ ಆಳವಾಗಿದೆ'– ಈ ಮಾತಿನ ಬಗ್ಗೆ ನಿಮ್ಮ ಅಭಿಪ್ರಾಯವೇನು? ಚರ್ಚಿಸಿರಿ.

- **ಉತ್ತರ ಬರೆಯಿರಿ**

• ಕವಿ ತಾಯಿಯಲ್ಲಿ ಕಂಡುಕೊಂಡ ಹಿರಿಮೆ ಗರಿಮೆಗಳೇನು?

• ಕವಿ ತಾಯಿಯನ್ನು ವರ್ಣಿಸಿ ಯಾವುದರೊಂದಿಗೆಲ್ಲ ಹೋಲಿಸಿದ್ದಾರೆ?

• 'ತಾಯೆ ನೀನೇ ಆದಿ ಶ್ರೀ ಗುರು' ಎಂದಿರುವುದು ಏಕೆ?

- **ಪದ ಬಳಸಿರಿ**

• ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿರಿ. ಅಡಿಗೆರೆ ಎಳೆದ ಪದಗಳಿಗೆ ಬದಲಾಗಿ ಅದೇ ಅರ್ಥಬರುವ ಪದಗಳನ್ನು ಪದ್ಯದಿಂದ ಆಯ್ದು ಗದ್ಯಭಾಗವನ್ನು ಪುನಃ ಬರೆಯಿರಿ.

ರಾಜೀವನು ಏಳನೇ ತರಗತಿಯ ವಿದ್ಯಾರ್ಥಿ. ಅವನ ಅಮ್ಮ ದುಡಿಮೆಯೇ ದೇವರೆಂದು ತಿಳಿದವಳು. ಕಷ್ಟಪಟ್ಟು ದುಡಿದು ಮಗನನ್ನು ಸಾಕುತ್ತಿದ್ದಳು. ವಿದ್ಯೆ ಹಾಗೂ ಸದ್ಗುಣಗಳಿರುವ ವ್ಯಕ್ತಿಯೇ ನಾಡಿನ ಸಂಪತ್ತು ಎಂದು ನಂಬಿದವಳು. ತನ್ನ ಮಗನೂ ಅಂತಹ ಉತ್ತಮ ವ್ಯಕ್ತಿಯಾಗಬೇಕೆಂದು ಕನಸನ್ನು ಕಟ್ಟಿಕೊಂಡವಳು. ಅದಕ್ಕಾಗಿ ನಿತ್ಯವೂ ದೇವರಿಗೆ ಶಿರಬಾಗಿ ನಮಿಸುತ್ತಿದ್ದಳು.

- ಸಮರ್ಥಿಸಿ ಬರೆಯಿರಿ

• ಈ ಕವನದಲ್ಲಿ ನಿಮಗಿಷ್ಟವಾದ ಸಾಲುಗಳು ಯಾವುವು? ಅದಕ್ಕೆ ಕಾರಣವೇನು? ಸಮರ್ಥಿಸಿ ಬರೆಯಿರಿ.

- ಹೋಲಿಸಿ ಬರೆಯಿರಿ.

• ಕೆಳಗೆ ಕೊಡಲಾದ 'ಮಾತೆ – ಮಮತೆ' ಕವಿತೆಯನ್ನು ಓದಿ 'ತಾಯಿ' ಕವಿತೆಯೊಂದಿಗೆ ಹೋಲಿಸಿ ಟಿಪ್ಪಣಿ ಬರೆಯಿರಿ.

# ಮಾತೆ – ಮಮತೆ

ಅಮ್ಮನಿನ್ನ ಕರುಣೆಯೆನಗೆ
ನಿತ್ಯರಕ್ಷೆಯಾಗಲಿ
ಭವದ ಬನ್ನ ಮರೆಯಲೆನಗೆ
ಸತ್ಯ ಪಥವ ತೋರಲಿ ॥೧॥

'ನಾನು' ಎಂಬ ಗರ್ವ ತೊಲಗಿ
ಮಮತೆ ಭಾವ ಮೂಡಲಿ
ಜಗದಿ ಪ್ರೀತಿ ಮಾತ ನುಡಿಯೆ
ಭೇದವೆಲ್ಲ ಮರೆಯಲಿ ॥೨॥

ಲೋಕದಲ್ಲಿ ಶಾಂತಿ ನೆಲೆಸಿ
ಜನರ ಬಾಳು ಮಾಗಲಿ
ನಿನ್ನ ಪಾದ ಸೇವೆಯಲ್ಲಿ
ಬದುಕ ಬವಣೆ ನೀಗಲಿ ॥೩॥

ಮಾತೆಯೊಡಲು ಸುಖದ ಮಡಿಲು
ಅದಕೆ ಇಲ್ಲ ಸಾಟಿಯು
ಅದುವೆ ಜೀವ ಭಾವ ಕೊಡಲು
ತೊಲಗ ಬೇಕು ಮಾಯೆಯು ॥೪॥

ತಾಯ ಮಾತ ಕೇಳಿ ಜಗದಿ
ಜನರು ಧನ್ಯರಾದರು
ತಾಯಿನುಡಿಯ ಕಲಿತುಕೊಂಡು
ವಿಶ್ವಮಾನ್ಯರಾದರು ॥೫॥

ವಿ.ಬಿ. ಕುಳಮರ್ವ

## ಕವನ ರಚಿಸಿರಿ

- ನಿಮ್ಮ ಅಮ್ಮನ ಕುರಿತು ನಿಮ್ಮ ಭಾವನೆಗಳೇನು? ಅಮ್ಮನ ಕುರಿತು ಕವನವೊಂದನ್ನು ರಚಿಸಿರಿ. ಸೂಕ್ತವಾದ ಶೀರ್ಷಿಕೆಯನ್ನು ನೀಡಿರಿ.

# ಹೃದಯ ಪರಿವರ್ತನೆ

ಮಾನವರಲ್ಲಿ ಯಾರೊಬ್ಬರೂ ಪರಿಪೂರ್ಣರಲ್ಲ. ಜೀವನದಲ್ಲಿ ಒಂದಾದರೂ ತಪ್ಪನ್ನು ಮಾಡದೆ ಇರುವವರು ಯಾರೂ ಇರಲಾರರು ಆದರೆ ಮಾಡಿದ ತಪ್ಪಿನ ಅರಿವಾದಾಗ ಅದಕ್ಕಾಗಿ ಪಶ್ಚಾತಾಪಪಟ್ಟು ಮನಸ್ಸಿನ ಪರಿವರ್ತನೆ ಮಾಡಿಕೊಳ್ಳುವುದು ದೊಡ್ಡ ಗುಣ. ಮಾಡಿದ ತಪ್ಪನ್ನು ಪುನಃ ಮಾಡಬಾರದು.

(ಅಶೋಕನು ಕಳಿಂಗದ ಯುದ್ಧ ಭೂಮಿಯ ಸಮೀಪದ ಸುಸಜ್ಜಿತ ಶಿಬಿರದಲ್ಲಿ ಆಸೀನನಾಗಿರುವನು. ವಂದಿಗಳು ಜಯ ಘೋಷ ಮಾಡುವರು.)

ವಂದಿಗಳು : ಮೌರ್ಯ ಸಾಮ್ರಾಜ್ಯದ ಮಹಾಪ್ರಭುಗಳಿಗೆ ಜಯವಾಗಲಿ! ಅಶೋಕ ಸಾರ್ವಭೌಮರಿಗೆ ಜಯವಾಗಲಿ!!

ದಂಡನಾಯಕ : (ಪ್ರವೇಶಿಸಿ) ಸನ್ನಿಧಾನದಲ್ಲಿ ದಂಡನಾಯಕನ ಪ್ರಣಾಮಗಳು. ಒಡೆಯರ ಅನುಗ್ರಹದಿಂದ ಯುದ್ಧದಲ್ಲಿ ಜಯಿಸಿ ಬಂದಿದ್ದೇನೆ. ಇದೊಂದು ಅದ್ಭುತವಾದ ಹಾಗೂ ಸಾಹಸಮಯವಾದ ವಿಜಯವೆನ್ನಬೇಕು. ನಮ್ಮ ಪ್ರಜಾವರ್ಗವು ವಿಜಯೋತ್ಸವವನ್ನು ನೆರವೇರಿಸುವ ಸಿದ್ಧತೆಯಲ್ಲಿದ್ದಾರೆ. ಮಹಾಪ್ರಭುಗಳು ಆ ಕಡೆ ದಯಮಾಡಿಸಬೇಕು.

ಅಶೋಕ : ದಂಡನಾಯಕರೆ! ಇಂತಹ ಸಾಹಸ ಕಾರ್ಯದಲ್ಲಿ ಉದ್ಯುಕ್ತರಾದ ನಮ್ಮ ಸೈನಿಕರಿಗೆ ದರ್ಬಾರದ ಪರವಾದ ಮತ್ತು ನನ್ನ ವೈಯಕ್ತಿಕವಾದ ಅಭಿನಂದನೆಗಳು.

ದಂಡ : ಧನ್ಯರಾದೆವು, ಪ್ರಭೋ!

ಅಶೋಕ : ಈಗ ಶತ್ರು ಸೈನಿಕರು ಎಲ್ಲಿದ್ದಾರೆ?

ದಂಡ : ನಮ್ಮ ಸೆರೆಯಲ್ಲಿದ್ದಾರೆ.



ಅಶೋಕ : ಎಷ್ಟು ಮಂದಿಯಿದ್ದಾರೆ?

ದಂಡ : ಸುಮಾರು ಒಂದೂವರೆ ಲಕ್ಷವಾಗಬಹುದು.

ಅಶೋಕ : ಉಳಿದವರು ಎಲ್ಲಿದ್ದಾರೆ?

ದಂಡ : ಇನ್ನು ........ ಉಳಿದವರು............ ಯಾರೂ ಇಲ್ಲ – ಪ್ರಭೋ!

ಅಶೋಕ : ಅಳಿದವರು ಎಷ್ಟು ಮಂದಿಯಾಗಬಹುದು ಹಾಗಾದರೆ?

ದಂಡ : ಸುಮಾರು ಒಂದು ಲಕ್ಷವಾಗಬಹುದು.

ಅಶೋಕ : ಏನು? ಒಂದು ಲಕ್ಷ ಜನರು ಮಡಿದಿರುವರೇ?

ದಂಡ : ಹೌದು ಜೀಯ!

ಅಶೋಕ : ಎಲ್ಲಿ? ರಣರಂಗದ ಕಡೆಗೆ ದಾರಿ ತೋರಿಸಿ; ಆ ದೃಶ್ಯವನ್ನೊಮ್ಮೆ ನೋಡಬೇಕಾಗಿದೆ.

ದಂಡ : ಈ ಕಗ್ಗತ್ತಲೆಯಲ್ಲಿ ಅಲ್ಲಿಗೆ ಹೋಗುವುದು ಅಶಕ್ಯವಾಗಬಹುದು ಒಡೆಯ!

ಅಶೋಕ : ಆಗಲಾರದು; ನನಗೊಮ್ಮೆ ಅಲ್ಲಿಗೆ ಹೋಗಲೇಬೇಕು.

ದಂಡ : ಪ್ರಭುಗಳ ಚಿತ್ತ. ಹೀಗೆ ದಯಮಾಡಿಸುವಂತಾಗಲಿ.

(ದಂಡನಾಯಕನು ಮುಂದೆ ನಡೆಯುವನು. ಅಶೋಕನು ಅವನನ್ನು ಅನುಸರಿಸಿ ನಡೆಯುವನು.)

### ಎರಡನೇ ದೃಶ್ಯ

(ರಣರಂಗ)

ಅಶೋಕ : ದಂಡನಾಯಕರೆ! ಅದೇನು? ಪಂಜಿನ ಬೆಳಕು?

ದಂಡ : ಅದು.... ಕಳಿಂಗದ ಪ್ರಜಾಜನರು

ಅಶೋಕ : ಅವರೇನು ಮಾಡುತ್ತಿದ್ದಾರೆ?

ದಂಡ : ತಮ್ಮ ತಮ್ಮ ಸಂಬಂಧಿಕರ ಶವಗಳನ್ನು ಅರಸುತ್ತಿದ್ದಾರೆ ಮಹಾಪ್ರಭು!

ಅಶೋಕ : ಹೌದೇ ದಂಡನಾಯಕರೆ! ಇನ್ನು ಸ್ವಲ್ಪ ಮುಂದುವರಿಯೋಣ.

ದಂಡ : ಇನ್ನು ಮುಂದೆ ಹೋಗುವುದು ಕಷ್ಟವೇ ಆಗಬಹುದು ಪ್ರಭು!

ಅಶೋಕ : ಅದೇಕೆ?

ದಂಡ : ಅಲ್ಲೆಲ್ಲ ನೆತ್ತರಿನ ಹಳ್ಳಗಳಿವೆ. ಈ ಕತ್ತಲಲ್ಲಿ ಹೋದರೆ ಕಾಲು ಜಾರಿ ಬೀಳಬಹುದು.

(ಅಶೋಕನು ಯುದ್ಧ ಭೂಮಿಯ ಭಯಾನಕ ದೃಶ್ಯವನ್ನು ಕಂಡು ದಿಗಿಲುಗೊಳ್ಳುವನು. ಕುಸಿದು ಬಿದ್ದಿರುವ ರಥಗಳನ್ನೂ ಅಂಗಹೀನವಾದ ಆನೆ ಕುದುರೆಗಳನ್ನೂ ಅನಾಥರಾಗಿ ಮಡಿದುಬಿದ್ದಿರುವ ಸೈನಿಕರನ್ನೂ ಕಂಡಾಗ ಅವನ ಮನಸ್ಸು ಕರಗುವುದು. ಅಷ್ಟರಲ್ಲಿ ದೂರದಿಂದ "ಅಯ್ಯೋ ................. ನೀರು ............" ಎಂಬ ಆರ್ತನಾದವು ಕೇಳಿಸುವುದು.)

ಅಶೋಕ : ದಂಡನಾಯಕರೆ! ಅದಾರು ಬೊಬ್ಬಿಡುತ್ತಿದ್ದಾರೆ?

ದಂಡ : ಅದು ಶತ್ರು ಸೈನಿಕರ ಕೂಗಾಟ ಪ್ರಭೋ!

ಅಶೋಕ : ಅಲ್ಲಿಗೆ ಹೋಗೋಣ ಬನ್ನಿ.

(ಇಬ್ಬರೂ ಹೋಗುವರು)

ಸೈನಿಕ : ಅಂ ... ಉರಿ .... ತಡೆಯಲಾರೆ ... ನೀರು ... ನೀರು.... ಅಲ್ಲಿ ಯಾರೂ ಇಲ್ಲವೇ?

ಅಶೋಕ : (ಸೈನಿಕನ ಬಳಿಯಲ್ಲಿ ಕುಳಿತು) ದಂಡನಾಯಕರೆ! ಬೇಗ ಹೋಗಿ ಸ್ವಲ್ಪ ನೀರು ತನ್ನಿ.

(ದಂಡನಾಯಕನು ನೀರು ತರಲು ಓಡುವನು)

ಅಶೋಕ : (ಸೈನಿಕನನ್ನು ಉಪಚರಿಸುತ್ತಾ) ನಿನಗೆ ತಂದೆ ತಾಯಂದಿರು ಇರುವರೆ?

ಸೈನಿಕ : ಇಲ್ಲ .....

ಅಶೋಕ : ಹೆಂಡತಿ ಮಕ್ಕಳು ಇರುವರೇ?

ಸೈನಿಕ : ಇಲ್ಲ ......

ಅಶೋಕ : ನಿನ್ನ ಯೋಗಕ್ಷೇಮವನ್ನು ವಿಚಾರಿಸುವವರು ಯಾರೂ ಇಲ್ಲವೇ?

ಸೈನಿಕ : ಯಾರೂ ..... ಇಲ್ಲ ...

ಅಶೋಕ : ಅಯ್ಯೋ ಪಾಪ! (ಎಂದು ಬೆನ್ನು ಸವರುವನು)

ಸೈನಿಕ : ನೀರೂ .... ಬಾಯಾರಿಕೆ .... ತಡೆಯಲಾರೆ .....

ಅಶೋಕ : ಸ್ವಲ್ಪ ಸೈರಿಸಿಕೊ; ನೀರು ತರಲು ಆಜ್ಞಾಪಿಸಿದ್ದೇನೆ.

(ಎಂದು ಉಪಚರಿಸುತ್ತಿದ್ದಂತೆ ಸೈನಿಕನು ಕೊನೆಯುಸಿರನ್ನೆಳೆಯುವನು.)

ಅಶೋಕ : (ತಲೆಗೆ ಕೈಯಿರಿಸಿ) ಅಯ್ಯೋ ವಿಧಿಯೇ! ಎಂತಹ ಕ್ರೂರವಾದ ಯುದ್ಧ! ಎಂತಹ ದಾರುಣವಾದ ಪರಿಣಾಮ! ಈ ಕರಾಳ ದೃಶ್ಯವನ್ನು ಕಂಡಾಗ ಬದುಕೇ ಬೇಡವೆನಿಸುತ್ತದೆ. (ಅಷ್ಟರಲ್ಲಿ ದಂಡನಾಯಕನು ನೀರಿನೊಂದಿಗೆ ಬರುತ್ತಾನೆ)

ದಂಡ : ನೀರು ತಂದೆ ಒಡೆಯ!

ಅಶೋಕ : ದಂಡನಾಯಕರೆ! ನಮ್ಮ ನೀರಿಗಾಗಿ ಈತ ಕಾಯಲಿಲ್ಲ. ಹೋಗಿಯೇಬಿಟ್ಟ.

ದಂಡ : ಅದು ಹಾಗೆಯೇ ಆಗಲು ಸಾಧ್ಯ ಪ್ರಭೋ! ಅದು ವಿಧಿಯ ಇಚ್ಛೆ. ನಾನು ತಂದ ನೀರನ್ನು ಈತನು ಕುಡಿಯಲು ಸಾಧ್ಯವಿಲ್ಲ.

ಅಶೋಕ : ಅದೇಕೆ?

ದಂಡ : (ಮೌನವಾಗಿ ದುಃಖಿಸುವನು)

ಅಶೋಕ : ಏಕೆ ಚಿಂತಿಸುತ್ತೀರಿ ನಾಯಕರೇ?

ದಂಡ : ಈಗ ಮೂರು ಗಳಿಗೆಯ ಮೊದಲು ಈತನನ್ನು ಕಠಾರಿಯಿಂದ ತಿವಿದ ಪಾಪಿ ನಾನು ಒಡೆಯ!

ಅಶೋಕ : ದಂಡನಾಯಕರೆ! ನೀವಲ್ಲ ಪಾಪಿಗಳು. ನೀವು ರಾಜಾಜ್ಞೆಯನ್ನು ಪಾಲಿಸಿ ಕೃತಕೃತ್ಯರಾದವರು. ನಿಮಗೆ ಇಂತಹ ದುರಾಜ್ಞೆಯನ್ನು ನೀಡಿ ಪಾಪಿಯೆನಿಸಿದವನು ನಾನು! ನೀವು ಮಾಡಿದ ಅಪರಾಧಕ್ಕಾದರೂ ಕ್ಷಮೆಯುಂಟು. ನನಗೆ ಕ್ಷಮೆಯಿಲ್ಲ ದಂಡನಾಯಕರೇ, ನನಗೆ ಕ್ಷಮೆಯಿಲ್ಲ

ದಂಡ : ದೊರೆಗಳು ಇಲ್ಲಿ ಕುಳಿತುಕೊಂಡು ದುಃಖಿಸುವುದು ತರವಲ್ಲ; ತಾವು ಅರಮನೆಗೆ ದಯಮಾಡಿಸಬೇಕು.

ಅಶೋಕ : (ಎದ್ದುನಿಂತು) ವೀರರಂತೆ ಹೋರಾಡಿ, ಮಾತೃ ಭೂಮಿಯ ಋಣವನ್ನು ತೀರಿಸಿದ ಎಲೈ ಹುತಾತ್ಮರೇ, ನಿಮ್ಮನ್ನು ಇಂತಹ ಮಹಾ ಹಿಂಸೆಗೊಳಪಡಿಸಿದ ಅವಿವೇಕಿ ನಾನು. ನನ್ನನ್ನು ಮನ್ನಿಸಿರಿ. ನಿಮಗೆ ವೀರಸ್ವರ್ಗವು ದೊರೆಯಲಿ! ನಿಮ್ಮ ಆತ್ಮಗಳಿಗೆ ಚಿರಶಾಂತಿ ಲಭಿಸಲಿ!

ದಂಡನಾಯಕ : ಬನ್ನಿ ಒಡೆಯ, ವೇಳೆ ಬಹಳ ಮೀರಿತು. ಅಲ್ಲಿ ತಮ್ಮ ಸಂದರ್ಶನಕ್ಕಾಗಿ ಪ್ರಜಾಜನರು ಕಾಯುತ್ತಿದ್ದಾರೆ. ಜಯಭೇರಿಯ ನಿರ್ಘೋಷ ಕೇಳಿಸುತ್ತದೆ.

ಅಶೋಕ : ದಂಡನಾಯಕರೆ! ನೀವೀಗಲೇ ಹೋಗಿ ಭೇರಿಗಳ ಘೋಷವನ್ನು ನಿಲ್ಲಿಸಿರಿ. ಇದು ಸಂತೋಷದ ಸಮಯವಲ್ಲ. ಈ ದಿನವು ಪಾಟಲಿಪುತ್ರದ ಪಾಲಿಗೊಂದು ಶೋಕದ ದಿನವೆಂದೇ ನಾನು ತಿಳಿಯುತ್ತೇನೆ.

ದಂಡನಾಯಕ : ಹಾಗಾದರೆ ತಾವು ಅತ್ತಕಡೆ ಬರುವುದಿಲ್ಲವೇ?

ಅಶೋಕ : ಇಲ್ಲ. ನನ್ನ ಚಿತ್ತವಿನ್ನೂ ಸ್ವಾಸ್ಥ್ಯಕ್ಕೆ ಬಂದಿಲ್ಲ. ನಮ್ಮವರಿಗೆ ನೀವು ನನ್ನ ಪರವಾಗಿ ಅಭಿನಂದನೆಯ ಸಂದೇಶವನ್ನು ತಿಳಿಸಿರಿ.

ದಂಡ : ಅಪ್ಪಣೆ ಮಹಾಪ್ರಭು!

### ಮೂರನೇ ದೃಶ್ಯ

(ಶಿಬಿರದಲ್ಲಿ ಅಶೋಕನು ಚಿಂತಾಮಗ್ನನಾಗಿರುವನು)

ಅಶೋಕ : (ನನ್ನ ಸಾಮ್ರಾಜ್ಯ ಮೋಹಕ್ಕೆ ಧಿಕ್ಕಾರವಿರಲಿ. ತಕ್ಷಶಿಲೆಯಿಂದ ಕಾಮರೂಪದ ತನಕ, ಹಿಮಾಲಯ ದಿಂದ ಕೃಷ್ಣಾನದಿಯ ವರೆಗೆ ಹಬ್ಬಿರುವ ಭಾರತ ವರ್ಷ ನನ್ನ ಅಧೀನವಿದೆ. ಅದರಿಂದ ತೃಪ್ತನಾಗದೆ ಪೂರ್ವ ಕರಾವಳಿಯ ಮಹಾನದಿ ಮತ್ತು ಗೋದಾವರಿ ನದಿಯ ಮಧ್ಯದಲ್ಲಿರುವ ಕಳಿಂಗರ ನೆಲವೂ ನನ್ನದಾಗಬೇಕೆಂಬ

ದುರ್ಮೋಹದಿಂದ ನಾನು ಯುದ್ಧ ಹೂಡಿದೆ. ಸ್ವಾತಂತ್ರ್ಯದ ಹಂಬಲವು ಹೃದಯದಲ್ಲಿ ತುಂಬಿರುವ ಕಳಿಂಗದ ಜನರು ಹೋರಾಡಿದರು. ಜನರು ನನ್ನ ಸೈನ್ಯಕ್ಕೆ ಬಾಗದೆ ಕೊನೆಯ ತನಕವೂ ಹೋರಾಡಿದರು. ಪರಿಣಾಮವಾಗಿ ಸಾವಿರಾರು ಸಾವುನೋವುಗಳು ಸಂಭವಿಸಿದುವು. ಸಾವಿರಾರು ಕುಟುಂಬಗಳು ಅನಾಥವಾದುವು. ಇನ್ನಿದರ ಫಲವಾಗಿ ಕಾಣಿಸಿಕೊಳ್ಳ ಬಹುದಾದ ಕ್ಷಾಮಡಾಮರಗಳಿಗೂ ರೋಗರುಜಿನಗಳಿಗೂ ನಾನೇ ಹೊಣೆಗಾರನಾಗಬೇಕಲ್ಲವೇ? ಈ ಯುದ್ಧಧರ್ಮಕ್ಕೆ ಧಿಕ್ಕಾರವಿರಲಿ!

ದೂತ : ಪ್ರಭೋ! ಉಪಗುಪ್ತರೆಂಬ ಬೌದ್ಧ ಸನ್ಯಾಸಿಗಳು ದ್ವಾರದ ಬಳಿ ನಿಂತಿದ್ದಾರೆ. ಒಳಗೆ ಬರಲು ತಮ್ಮ ಆಜ್ಞೆಯನ್ನು ನಿರೀಕ್ಷಿಸುತ್ತಿದ್ದಾರೆ.

ಅಶೋಕ : ಒಳಗೆ ಬರಹೇಳು.

ದೂತ : ಅಪ್ಪಣೆ. ಮಹಾಪ್ರಭೋ.
(ಉಪಗುಪ್ತರು ಒಳಗೆ ಪ್ರವೇಶಿಸುವರು)

ಅಶೋಕ : ಪೂಜ್ಯರೆ! ಹೀಗೆ ದಯಮಾಡಬೇಕು. ಈ ಆಸನವನ್ನು ಅಲಂಕರಿಸಬೇಕು.

ಉಪಗುಪ್ತ : ತಥಾಸ್ತು.

ಅಶೋಕ : ಹುಡುಕುವ ಬಳ್ಳಿಯೇ ಕಾಲಿಗೆ ತೊಡರಿದಂತೆ ತಾವು ನನ್ನ ಶಿಬಿರಕ್ಕೆ ಆಗಮಿಸಿದಿರಿ!

ಉಪಗುಪ್ತ : ಮಹಾರಾಜ! ನಿನ್ನ ಮುಖವೇಕೆ ಕಂದಿರುವುದು?

ಅಶೋಕ : ಯಾಕೋ ಮನಸ್ಸಿಗೆ ನೆಮ್ಮದಿಯಿಲ್ಲ ದಂತಾಗಿದೆ.

ಉಪಗುಪ್ತ : ಅಶೋಕನೆಂಬ ಹೆಸರಿಗೆ ಪಾತ್ರನಾದ ನಿನಗೂ ಶೋಕವೇ?

ಅಶೋಕ : ಇದು ನನ್ನ ಅಹಂಕಾರದಿಂದ ಉದ್ಭವಿಸಿದ ಶೋಕ. ನನ್ನ ಅಪರಿಮಿತವಾದ ರಾಜ್ಯಲಾಲಸೆಯಿಂದ ಹುಟ್ಟಿದ ಶೋಕ.

ಉಪಗುಪ್ತ : ಧೀರರು ಯಾವಾಗಲೂ ಶೋಕಿಸ ಬಾರದು.

ಅಶೋಕ : ಆದರೆ ಈ ಶೋಕವು ನನ್ನನ್ನು ಅಧೀರನನ್ನಾಗಿ ಮಾಡಿಬಿಟ್ಟಿದೆ.

ಉಪ : ಅಯ್ಯಾ ಮಹಾರಾಜಾ, ನಿನ್ನ ಅಂತರಂಗದಲ್ಲಿ ಏನಿದೆಯೆಂಬುದು ನನಗೆ ಅರ್ಥವಾಗಿದೆ. ನಿನ್ನ ರಾಜ್ಯದಲ್ಲಿ ನಡೆದ ಸಮಸ್ತ ಘಟನೆಗಳನ್ನು ನಾನು ಅರಿತಿದ್ದೇನೆ. ನೋಡು; ಈ ಜಗತ್ತಿನಲ್ಲಿ ಎಲ್ಲ ದುಃಖಗಳಿಗೂ ಲೋಭವೇ ಮೂಲ ಕಾರಣ. ರಾಜ್ಯ ಲೋಭವು ನಿನ್ನ ಹಿಂಸಾವೃತ್ತಿಗೆ ಪ್ರೇರಣೆ ನೀಡಿತು. ಪರಿಣಾಮವು ನಿನ್ನನ್ನು ಇಂತಹ ಮಹಾದುಃಖಕ್ಕೆ ಈಡುಮಾಡಿದೆ.

ಅಶೋಕ : ಸತ್ಯ, ಸತ್ಯ; ಈ ಮಾತು ಅಕ್ಷರಶಃ ಸತ್ಯವಾದುದು.

ಉಪ : ಮಹಾರಾಜ, ವಿವೇಕವೆಂಬುದು ದೇವರು ಮಾನವನಿಗೆ ಇತ್ತ ಒಂದು ವರದಾನ. ಆ ವಿವೇಕದ ಬೆಳಕಿನಲ್ಲಿಯೇ ನಾವು ನಡೆಯಬೇಕಲ್ಲದೆ ಅವಿವೇಕದ ಕತ್ತಲಲ್ಲಿ ಕಾಲಿರಿಸಿ, ಮುಗ್ಗರಿಸಿ ಬೀಳಬಾರದು.

ಅಶೋಕ : ತಮ್ಮ ಮಾತುಗಳನ್ನು ನಾನು ಮನಃಪೂರ್ವಕವಾಗಿ ಅನುಮೋದಿಸು ತ್ತೇನೆ. ನನಗೆ ಸದ್ಬೋಧೆಯನ್ನು ನೀಡಿ ಉದ್ಧರಿಸಬೇಕು. ಇನ್ನು ಮುಂದೆ ಇಂತಹ ಹಿಂಸಾ ಯುದ್ಧಕ್ಕೆ ನಾನು ಇಳಿಯಲಾರೆ.

ಉಪ : ಮಹಾರಾಜಾ, ನಿನ್ನ ಈ ಹೃದಯ ಪರಿವರ್ತನೆಯು ಲೋಕಕ್ಷೇಮಕ್ಕೆ ನಾಂದಿಯಾಗಲಿ.

ಅಶೋಕ : ತಮ್ಮ ಆಶೀರ್ವಾದವನ್ನು ಶಿರಸಾ ವಹಿಸುತ್ತೇನೆ. ಪೂಜ್ಯರೇ ನನಗೆ ಮುಂದಿನ ಕರ್ತವ್ಯವನ್ನು ಆಜ್ಞಾಪಿಸಿರಿ.

ಉಪ : ಈಗ ನೀನು ಸಾಧಿಸಿದ ವಿಜಯವು ಕೇವಲ ಕ್ಷಣಿಕವಾದುದು. ಇಂತಹ

ವಿಜಯಕ್ಕಿಂತ ನೂರು ಪಾಲು ಮಿಗಿಲಾದ ವಿಜಯವೇ ಧರ್ಮ ವಿಜಯ. ಅಂತಹ ಧರ್ಮವಿಜಯ ವನ್ನು ಸಾಧಿಸಬೇಕು ನೀನು! ಧರ್ಮಸಾಮ್ರಾಜ್ಯದ ಪ್ರವರ್ತಕ ನಾಗಬೇಕು ನೀನು!

ಅಶೋಕ : ಇಂದಿನಿಂದಲೇ ಅದಕ್ಕೆ ದೀಕ್ಷೆವಹಿಸುತ್ತೇನೆ. ಇಂದಿನಿಂದ ಅಹಿಂಸಾಧರ್ಮವೇ ನನ್ನ ಧರ್ಮ. ನೀವೇ ನನ್ನ ಗುರು.

ಉಪಗುಪ್ತ : ನಿನಗೆ ಶುಭವಾಗಲಿ! ಧರ್ಮಕ್ಕೆ ಜಯವಾಗಲಿ!

**ಚಟುವಟಿಕೆಗಳು**

**❑ ಚರ್ಚಿಸಿರಿ**

- ಸಾಮ್ರಾಟ ಅಶೋಕನು ಯುದ್ಧವನ್ನು ಕೈಬಿಟ್ಟು ಅಹಿಂಸಾ ಮಾರ್ಗವನ್ನು ಅನುಸರಿಸುವ ತೀರ್ಮಾನವನ್ನು ಕೈಗೊಂಡದ್ದು ಸರಿಯೇ? ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು? ಚರ್ಚಿಸಿರಿ.

**❑ ಪದಗಳ ಅರ್ಥ ತಿಳಿಯಿರಿ**

- ಪಾಠದಲ್ಲಿ ಬರುವ ನವೀನ ಪದಗಳನ್ನು ಪಟ್ಟಿಮಾಡಿರಿ. ಅರ್ಥಕೋಶದ ಸಹಾಯದಿಂದ ಅರ್ಥವನ್ನು ಕಂಡುಹಿಡಿಯಿರಿ.

**❑ ಉತ್ತರಿಸಿರಿ**

- ಅಶೋಕನು ರಣರಂಗದಲ್ಲಿ ಕಂಡ ದೃಶ್ಯವೇನು?
- ಭೇರಿಗಳ ಘೋಷವನ್ನು ನಿಲ್ಲಿಸಲು ಅಶೋಕನು ಏಕೆ ಅಪ್ಪಣೆ ಮಾಡಿದನು?
- ಉಪಗುಪ್ತನು ಅಶೋಕನಿಗೆ ನೀಡಿದ ಉಪದೇಶ ವೇನು?

**❑ ಕಥೆ ಬರೆಯಿರಿ.**

- ಈ ನಾಟಕವನ್ನು ಕಥಾರೂಪದಲ್ಲಿ ಬರೆಯಿರಿ.

**❑ ವಾರ್ತೆ ತಯಾರಿಸಿರಿ**

- 'ಹೃದಯ ಪರಿವರ್ತನೆ' ಎಂಬ ನಾಟಕವು ನಿಮ್ಮ ಶಾಲೆಯಲ್ಲಿ ಪ್ರದರ್ಶನಗೊಳ್ಳಲಿದೆ. ಈ ವಿಚಾರವನ್ನು ಊರಿನ ಜನರಿಗೆ ತಿಳಿಸಬೇಕಾಗಿದೆ. ಇದಕ್ಕಾಗಿ ಸ್ಥಳೀಯ ವಾರ್ತಾ ಪತ್ರಿಕೆಯಲ್ಲಿ ಪ್ರಕಟಿಸಲು ವಾರ್ತೆಯೊಂದನ್ನು ತಯಾರಿಸಿರಿ.

**❑ ನಾಟಕವನ್ನು ಶಾಲಾ ಸಾಹಿತ್ಯಸಭೆಯಲ್ಲಿ ಅಭಿನಯಿಸಿರಿ.**

**❑ ಬಿಟ್ಟ ಸ್ಥಳ ತುಂಬಿಸಿರಿ**

ಕೊಟ್ಟಿರುವ ಟಿಪ್ಪಣಿಯಲ್ಲಿ ಕೆಲವು ಪದಗಳಿಗೆ ಅಡಿಗೆರೆ ಎಳೆಯಲಾಗಿದೆ. ಅವುಗಳ ವಿರೋಧಾರ್ಥ ಪದಗಳನ್ನು ಬಿಟ್ಟ ಸ್ಥಳಗಳಲ್ಲಿ ತುಂಬಿಸಿ ಪುನಃ ಬರೆಯಿರಿ.

ನಾವು ಸದಾ ಸತ್ಯವನ್ನೇ ನುಡಿಯಬೇಕೆಂಬುದು ಗಾಂಧೀಜಿಯವರ ನಿಲುವಾಗಿತ್ತು. ಅವರೆಂದೂ ................ ನುಡಿಯುತ್ತಿರಲಿಲ್ಲ. ಒಂದು ಸುಳ್ಳು ಹೇಳಿದರೆ ಅದನ್ನು ಸಮರ್ಥಿಸಲು ಸಾವಿರ ಸುಳ್ಳು ಹೇಳಬೇಕಾಗುತ್ತದೆ. ಇದು ಸಾಧ್ಯವಿಲ್ಲ. ಇಂತಹ ..... ಕೆಲಸಕ್ಕೆ ತೊಡಗಬಾರದು. ಕೆಲವರಿಗೆ ಸತ್ಯವನ್ನು ನುಡಿದರೆ ಏನಾಗಬಹುದೋ ಎಂಬ ಭಯವಿರುತ್ತದೆ. ಸತ್ಯವನ್ನು ........ ದಿಂದ ನುಡಿಯಬಹುದು. ಇದೇ ರೀತಿ ಅಹಿಂಸೆಯನ್ನೂ ಗಾಂಧೀಜಿಯವರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ................ ಯಿಂದ ವೈರವು ಬೆಳೆಯುತ್ತದೆ. ಸತ್ಯ ಮತ್ತು ಅಹಿಂಸೆಗಳು ಮಾನವನನ್ನು ಸನ್ಮಾರ್ಗದತ್ತ ಒಯ್ಯುತ್ತವೆ.

**❑ ಕೆಳಗಿನ ವಾಕ್ಯಗಳನ್ನು ಸೂಚಿಸಿದಂತೆ ಪರಿವರ್ತಿಸಿರಿ**

- ನಿನ್ನ ಅಂತರಂಗದಲ್ಲಿ ಏನಿದೆಯೆಂದು ನನಗೆ ಅರ್ಥವಾಗಿದೆ.
  (ನಾನು ಎಂದು ವಾಕ್ಯ ಪ್ರಾರಂಭಿಸಿರಿ)
- ನಿಮ್ಮ ನೀರಿಗಾಗಿ ಈತ ಕಾಯಲಿಲ್ಲ. ಹೋಗಿಯೇ ಬಿಟ್ಟ
  (ಒಂದು ವಾಕ್ಯವಾಗಿ ಬದಲಾಯಿಸಿರಿ)
- ನನ್ನ ಅಪರಿಮಿತವಾದ ರಾಜ್ಯಲಾಲಸೆಯಿಂದ ಹುಟ್ಟಿದ ಶೋಕವಿದು.
  (ಈ ಶೋಕ ಎಂದು ವಾಕ್ಯ ಆರಂಭಿಸಿರಿ)

# ಸೌಂದರ್ಯಕ್ಕೆ ಗರಿಮೂಡಿದಾಗ

ಪ್ರತಿಯೊಬ್ಬ ವ್ಯಕ್ತಿಯೂ ಜೀವನದಲ್ಲಿ ಸೋಮಾರಿಯಾಗದೆ ಸದಾ ಕ್ರಿಯಾಶೀಲನಾಗಿರಬೇಕು. ನಿರಂತರವಾಗಿ ಯಾವುದಾದರೂ ಒಂದು ಚಟುವಟಿಕೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ತಮಗಿಷ್ಟವಾದ ಹವ್ಯಾಸದಲ್ಲಿ ತೊಡಗಿಸಿಕೊಳ್ಳುವುದು ಅವರನ್ನು ಉತ್ಸಾಹದಿಂದಿರುವಂತೆ ಪ್ರೇರೇಪಿಸುತ್ತದೆ ಮತ್ತು ಅಭಿವೃದ್ಧಿಯತ್ತ ಕೊಂಡೊಯ್ಯುತ್ತದೆ. ನಾವು ಆಯ್ಕೆ ಮಾಡುವ ಹವ್ಯಾಸಗಳು ಪ್ರಕೃತಿ ಮತ್ತು ಸಮಾಜದ ಸಂಬಂಧವನ್ನು ಬಲಪಡಿಸುವಂತೆ ಎಚ್ಚರವಹಿಸಬೇಕಾದುದು ಅತಿ ಅಗತ್ಯ.



ಸಲೀಂ ಅಲಿ ಮುಂಬೈಯ ಕೇತ್ವಾಡಿ ಪ್ರದೇಶದ ಮಧ್ಯಮ ವರ್ಗದ ಕುಟುಂಬಕ್ಕೆ ಸೇರಿದವರು. ತಮ್ಮ ಮೂರನೇ ವಯಸ್ಸಿನ ಹೊತ್ತಿಗೆ ಅವರು ತಂದೆ ತಾಯಿಗಳಿಬ್ಬರನ್ನೂ ಕಳೆದುಕೊಂಡಿದ್ದರು. ಹಾಗಾಗಿ ಸೋದರ ಮಾವನ ಮನೆಯಲ್ಲಿ ಬೆಳೆದರು. ಗಣಿತವನ್ನು ಇಷ್ಟಪಡದ ಅವರು ಗಣಿತದ ತರಗತಿಗೆ ಚಕ್ಕರ್ ಹಾಕಿ, ಹಾರಾಡುತ್ತಿದ್ದ ಹಕ್ಕಿಗಳನ್ನು ಎಣಿಸುತ್ತಿದ್ದರು! ಮುಂಬಯಿಯ ನ್ಯಾಚುರಲ್ ಹಿಸ್ಟರಿ ಸೊಸೈಟಿಯೇ ಅವರ ಮನೆ ಶಾಲೆ, ಮಸೀದಿ ಎಲ್ಲವೂ ಆಯಿತು. ಭಾರತದ ಉಪಖಂಡವನ್ನೆಲ್ಲ ಅವರು ಸುತ್ತಿದರು. ಅಲ್ಲಿನ ಹಕ್ಕಿಗಳನ್ನೆಲ್ಲ ವೀಕ್ಷಿಸಿದರು. ಅವರು 'ಭಾರತದ ಹಕ್ಕಿ ಮನುಷ್ಯ' ಎಂದು ಹೆಸರು ಪಡೆದರು ತಮ್ಮ ಅಧ್ಯಯನದಿಂದ, ಕ್ಷೇತ್ರ ಕಾರ್ಯದಿಂದ, ಬರವಣಿಗೆಗಳಿಂದ ಅವರು ರಾಷ್ಟ್ರದಲ್ಲಿ ಪಕ್ಷಿ ಮನಸ್ಸೊಂದನ್ನು ಸೃಷ್ಟಿಸಲು ಸತತವಾಗಿ ಶ್ರಮಿಸಿದರು.

ಪಕ್ಷಿಗಳ ಕುರಿತು ತಮ್ಮ ಆಸಕ್ತಿಯೆಲ್ಲ ಸಲೀಂ ಅಲಿಯವರಿಂದ ಬಂದದ್ದು ಎಂದು ಇಂದಿರಾಗಾಂಧಿ ಹೇಳುತ್ತಿದ್ದರು. ರಾಜೇಶ್ವರ ಪ್ರಸಾದ್, ನಾರಾಯಣ ಸಿನ್ಹ ಎಂಬವರು ಮಕ್ಕಳಿಗಾಗಿ ಬರೆದ 'ನಮ್ಮ ಹಕ್ಕಿಗಳು' ಎಂಬ ಪುಸ್ತಕಕ್ಕೆ ಬರೆದ ಮುನ್ನುಡಿಯಲ್ಲಿ ಇಂದಿರಾ ಗಾಂಧಿ ಹೇಳುತ್ತಾರೆ:



"ಡೆಹರಾಡೂನಿನ ಜೈಲಿನಿಂದ ನನ್ನ ತಂದೆಯವರು ಸಲೀಂ ಅಲಿಯವರ ಆನಂದದಾಯಕವಾದ ಪುಸ್ತಕ ವನ್ನು ನನಗೆ ಕಳಿಸುವವರೆಗೂ, ಬಹುಪಾಲು ಭಾರತೀಯರಂತೆ ನಾನೂ ಹಕ್ಕಿಗಳ ಬಗೆಗೆ ಯೋಚಿಸಿಯೇ ಇರಲಿಲ್ಲ. ಈ ಪುಸ್ತಕ ಒಂದು ಹೊಸ ಪ್ರಪಂಚಕ್ಕೆ ನನ್ನ ಕಣ್ಣು ತೆರೆಸಿತು. ನಾನು ಎಷ್ಟೊಂದನ್ನು ಕಳೆದುಕೊಳ್ಳುತ್ತಿದ್ದೆನೆಂಬುದು ನನಗೆ ಆಗಲೇ ಗೊತ್ತಾದದ್ದು'



,ಸಲೀಂ ಅಲಿಯವರ ಪುಸ್ತಕಗಳ ನೆರವಿನಿಂದಲೇ ತಾವು ಹಕ್ಕಿಗಳನ್ನು ಗುರುತಿಸುವುದು ಸಾಧ್ಯವಾಯಿತೆಂದೂ ಅವರು ಇನ್ನೊಂದು ಸಂದರ್ಭದಲ್ಲಿ ಹೇಳಿದ್ದಾರೆ.

ಜವಾಹರಲಾಲ್ ನೆಹರೂರವರು ಸಲೀಂ ಅಲಿಯವರ ಬರವಣಿಗೆಯ ಆರಾಧಕರಾಗಿದ್ದರು. ಅಹಮದ್ ನಗರದ ಜೈಲಿನಲ್ಲಿದ್ದಾಗ ಮೌಲಾನ ಅಬ್ದುಲ್ ಕಲಾಮ್ ಅಜಾದ್ ಅವರು ತಮ್ಮ ಕೋಣೆಯಲ್ಲಿ ಸೇರಿಕೊಂಡಿದ್ದ ಒಂದು ಜೊತೆ ಗುಬ್ಬಿಗಳ . ಬಗೆಗೆ ಹೆಚ್ಚಾಗಿ ತಿಳಿದುಕೊಳ್ಳಲು ಇನ್ನೊಂದು ಕೋಣೆಯಲ್ಲಿ ಬಂಧಿಯಾಗಿದ್ದ ನೆಹರೂರವರಿಂದ ಸಲೀಂ ಅಲಿಯವರ ಪುಸ್ತಕವನ್ನು ಎರವಲು ಪಡೆದಿದ್ದರಂತೆ.

ಭಾರತೀಯ ಪಕ್ಷಿಗಳನ್ನು ಕುರಿತು ಸಲೀಂ ಅಲಿಯವರ ಪುಸ್ತಕ (ದಿ ಬುಕ್ ಆಫ್ ಇಂಡಿಯನ್ ಬರ್ಡ್ಸ್) ತುಂಬ ಪ್ರಸಿದ್ಧವಾದದ್ದು. 1941ರಲ್ಲಿ ಅದು ಮೊದಲ ಸಲ ಪ್ರಕಟವಾಯಿತು. ಆಗ ಅದರ ಬೆಲೆ ಹದಿನಾಲ್ಕು ರೂಪಾಯಿ ಅದರಲ್ಲಿ ಭಾರತದ 141 ಜಾತಿಯ ಸಾಮಾನ್ಯ ಹಕ್ಕಿಗಳ



ಪರಿಚಯವಿತ್ತು. ಮುಂದಿನ ಆವೃತ್ತಿಗಳಲ್ಲಿ ಈ ಸಂಖ್ಯೆ ಬೆಳೆಯುತ್ತ ಹೋಯಿತು. "ಹಾಗೆಯೇ ಪುಸ್ತಕದ ಬೆಲೆಯೂ ಬೆಳೆಯಿತು" ಎಂದು ಸಲೀಂ ಅಲಿ ತಮಾಷೆ ಮಾಡುತ್ತಾರೆ. 1940ರಲ್ಲಿ ಪುಸ್ತಕದ ಹನ್ನೊಂದನೇ ಮುದ್ರಣ ಹೊರಬಂತು. ಅದರಲ್ಲಿ 280 ಜಾತಿಯ ಹಕ್ಕಿಗಳ ಪರಿಚಯ ವಿದೆ. ಬೆಲೆ ಅರುವತ್ತು ರೂಪಾಯಿ. ಈವರೆಗೆ ಈ ಪುಸ್ತಕ ಸುಮಾರು ಅರ್ಧಲಕ್ಷ ಪ್ರತಿಗಳು ಮಾರಾಟವಾಗಿವೆ. ಸಿ.ಪಿ. ರಾಮಸ್ವಾಮಿ ಅಯ್ಯರ್ ಕೇರಳ ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದಾಗ ವಿಶ್ವವಿದ್ಯಾನಿಲಯದಲ್ಲಿ ಹಂಚಿಕೆಗಾಗಿ ಈ ಪುಸ್ತಕದ ಐದುನೂರು ಪ್ರತಿಗಳನ್ನು ಖರೀದಿಸಿದ್ದರಂತೆ.

ಮೊದಲ ಪುಸ್ತಕದ ಈ ಯಶಸ್ಸು ಸಲೀಂ ಅಲಿಯವರು ಮುಂದೆ ಎಷ್ಟೋ ಪುಸ್ತಕಗಳನ್ನು ಬರೆಯಲು ಪ್ರಚೋದಿಸಿತು. ಬಗೆಬಗೆಯ ಧ್ಯೇಯೋದ್ದೇಶಗಳ ನಾನಾ ರೀತಿಯ ಅನೇಕ ಪುಸ್ತಕಗಳನ್ನು ಅವರು ಪ್ರಕಟಿಸಿದ್ದಾರೆ. 'ಕೇರಳದ ಹಕ್ಕಿಗಳು', 'ಸಿಕ್ಕಿಂನ ಹಕ್ಕಿಗಳು', 'ಭಾರತದ ಬೆಟ್ಟಪ್ರದೇಶದ ಹಕ್ಕಿಗಳು', 'ಭಾರತ ಪಾಕಿಸ್ತಾನಗಳ ಪಕ್ಷಿಗಳ ಕೈಪಿಡಿ' – ಮೊದಲಾದವುಗಳು ಅವರ ಪುಸ್ತಕಗಳ ಪಟ್ಟಿಯಲ್ಲಿವೆ. ಡಿಲ್ಲೋನ್ ರಿಪೆಲೆಯ್ ಎನ್ನುವವರೊಡನೆ ಕೂಡಿ ಸಲೀಂ ಅಲಿ ಆ ಕೆಲಸ ಮಾಡಿದ್ದಾರೆ. ಅವರ ಕೆಲವು ಪುಸ್ತಕಗಳು ಭಾರತದ ನಾನಾ ಭಾಷೆಗಳಿಗೆ ಭಾಷಾಂತರಗೊಂಡಿವೆ.

ಮುಂಬೈನ ನ್ಯಾಚರಲ್ ಹಿಸ್ಟರಿ ಸೊಸೈಟಿಯೊಡನೆ ಸಲೀಂ ಅಲಿಯವರ ಸಂಬಂಧ ತೀರ ನಿಕಟವಾದದ್ದು. ಕೆಲವು ಇಂಗ್ಲಿಷ್ ಜನರ ಆಸಕ್ತಿಯಿಂದ ಅಸ್ತಿತ್ವಕ್ಕೆ ಬಂದ (1553) ಈ ಸಂಸ್ಥೆ ಈಗ ಇಡೀ ಏಷಿಯಾ ದಲ್ಲಿಯೇ ಪ್ರಸಿದ್ಧವೆನಿಸಿದೆ. ಇದರ ಈ ಕೀರ್ತಿಗೆ ಸಲೀಂ ಅಲಿಯವರು ಬಹುಮಟ್ಟಿಗೆ ಕಾರಣರಾಗಿದ್ದಾರೆ ಎಂದರೆ ತಪ್ಪಾಗುವುದಿಲ್ಲ. 1927ರಷ್ಟು ಹಿಂದೆಯೇ ಅಲರು ಸಂಸ್ಥೆಯ ಪತ್ರಿಕೆಗೆ ಸಂಪಾದಕರಾಗಿದ್ದರು. 1950 ರಲ್ಲಿ ಕಾರ್ಯದರ್ಶಿಯಾದರು. ಕಳೆದ ಹತ್ತು ವರ್ಷಗಳಿಂದಲೂ ಸಲೀಂ ಅಲಿ ಸಂಸ್ಥೆಯ ಅಧ್ಯಕ್ಷರಾಗಿದ್ದರು. ಅವರು ಸಂಪರ್ಕ ಪಡೆದಿದ್ದ ಸಂಘಸಂಸ್ಥೆಗಳು ಒಂದೆರಡಲ್ಲ. ಎಲ್ಲೆಲ್ಲಿ ಅವರು ಕೆಲಸ ಮಾಡಿದರೋ ಅಲ್ಲೆಲ್ಲ ಅವರು ತಮ್ಮ ಪ್ರಭಾವವನ್ನು ಉಳಿಸಿದರು.



ಅವರ ಸಂಶೋಧನೆ ಹಾಗೂ ಬರವಣಿಗೆಯ ಕೆಲಸದಲ್ಲಿ ಅವರ ಹೆಂಡತಿ ತೆಹೆಮಿನ ವಹಿಸಿದ ಪಾತ್ರ ದೊಡ್ಡದು. ಅದನ್ನು ಸಲೀಂ ಅಲಿ ತಮ್ಮ ಆತ್ಮಕಥೆಯಲ್ಲಿ ನಿರೂಪಿಸಿದ್ದಾರೆ. 1929ರಲ್ಲಿ ಅವರು (ತೆಹೆಮಿನ) ತೀರಿಕೊಂಡ ಮೇಲೆ, ಸಲೀಂ ಅಲಿ ಡೆಹರಾಡೂನಿನ ತಮ್ಮ ವಾಸಸ್ಥಳವನ್ನು ಮುಂಬಯಿಗೆ ಬದಲಾಯಿಸಿದರು. ಮುಂಬೈನಂಥ ನಗರ ಜೀವನವನ್ನು ಅವರು ಅಷ್ಟಾಗಿ ಇಷ್ಟಪಟ್ಟವರಲ್ಲ. ಆದರೆ ತಹೆಮಿನರಿಲ್ಲದ ಡೆಹರಾಡೂನಿನಲ್ಲಿ ಅವರು ಸಹಜವಾಗಿ ಶೂನ್ಯವನ್ನ ನುಭವಿಸಿದರು. ಮುಂಬಯಿಯಲ್ಲಿ ಹತ್ತಿರದ ಬಂಧುಗಳಿದ್ದರು; ವಿಶ್ವಾಸದ ಆಹ್ವಾನವಿತ್ತು: ಮೇಲಾಗಿ ನ್ಯಾಚುರಲ್ ಹಿಸ್ಟರಿ ಸೊಸೈಟಿಯಿತ್ತು. ಮನಸ್ಸಿಲ್ಲದ ಮನಸ್ಸಿನಿಂದಲೇ ಅವರು ಡೆಹರಾಡೂನ ನ್ನು ಬಿಟ್ಟರು.

ಬರ್ಲಿನ್ ವಿಶ್ವವಿದ್ಯಾನಿಲಯದಲ್ಲಿ ಹೆಚ್ಚಿನ ಶಿಕ್ಷಣ ಪಡಿದಿದ್ದ ಸಲೀಂ ಅಲಿ ಜಗತ್ತಿನ ಪ್ರಖ್ಯಾತ ಪಕ್ಷಿ ಶಾಸ್ತ್ರಜ್ಞರಲ್ಲಿ ಒಬ್ಬರಾಗಿದ್ದರು. ಅವರು ಮುಂದಿನ ಜನಾಂಗಕ್ಕಾಗಿ ಎಷ್ಟೋ ಪಕ್ಷಿ ಸಂತತಿಗಳ ನೆನಪನ್ನು ಉಳಿಸಿಕೊಟ್ಟಿದ್ದಾರೆ. ತಮ್ಮ ಕಾಲದ ಜನರಿಗೇ ಗೊತ್ತಿಲ್ಲದ ಎಷ್ಟೋ ಪಕ್ಷಿ ಸಂತತಿಗಳನ್ನು ಪರಿಚಯಿಸಿಕೊಟ್ಟಿದ್ದಾರೆ. ಅವರಿಗೆ ಸಂದ ಗೌರವಗಳಿಗೆ ಲೆಕ್ಕವಿಲ್ಲ. ಪದ್ಮಭೂಷಣ (1958), ಪದ್ಮವಿಭೂಷಣ (1976) ಪ್ರಶಸ್ತಿಗಳೆರಡೂ ಅವರಿಗೆ ದೊರಕಿದ್ದವು. ಆಲಿಘರ್ (1958), ದಿಲ್ಲಿ (1973), ಆಂಧ್ರ (1978) ವಿಶ್ವವಿದ್ಯಾನಿಲಯಗಳು ಅವರಿಗೆ ಗೌರವ ಪದವಿಗಳನ್ನು ನೀಡಿದ್ದವು. ಪದಕಗಳು, ಬಹುಮಾನಗಳು, ಫೆಲೋಷಿಪ್ಪುಗಳು, ಸದಸ್ಯತ್ವಗಳು ಹಲವಾರು ಬಂದಿದ್ದವು.

ಇವುಗಳಲ್ಲೆಲ್ಲ ಮುಖ್ಯವಾದುದೆಂದರೆ ಪಾಲ್‌ಗೆಟ್ಟಿ



ಅಂತರ್‌ರಾಷ್ಟ್ರೀಯ ಪ್ರಶಸ್ತಿ (1976). ಇದನ್ನು ಪಡೆದವರಲ್ಲಿ ಸಲೀಂ ಅಲಿ ಎರಡನೆಯವರು. ಈ ಪ್ರಶಸ್ತಿಯ ಐವತ್ತು ಸಾವಿರ ಡಾಲರುಗಳ ಮೊತ್ತವನ್ನು ಅವರು ತಮ್ಮ ಮಾತೃಸಂಸ್ಥೆಯ ಬೆಳವಣಿಗೆಗೆಂದು ನೀಡಿದರು. ಸಲೀಂ ಅಲಿಯವರನ್ನು ಈ ದೊಡ್ಡ ಪ್ರಶಸ್ತಿಗೆ ಶಿಫಾರಸು ಮಾಡಿದ ಅಮೆರಿಕೆಯ ಸೆನೆಟರ್ ಮಥಿಯಾಸ್ "ಸಲೀಂ ಅಲಿ ಪರಿಸರ ಬ್ರಹ್ಮ" ಎಂದು ವರ್ಣಿಸಿದ್ದಾರೆ. ಸೆನೆಟರ್ ಮಥಿಯಾಸ್ ಒಮ್ಮೆ ಭಾರತಕ್ಕೆ ಬಂದಿದ್ದಾಗ ಮಾತಿನ ನಡುವೆ ಇಂದಿರಾಗಾಂಧಿ ಕೇಳಿದರಂತೆ "ನೀವು ಸಲೀಂ ಅಲಿಯವರನ್ನು ಬಲ್ಲಿರಾ?" "ಇಲ್ಲ" ಎಂದರು ಮಥಿಯಾಸ್. ಒಡನೆಯೇ ಇಂದಿರಾಗಾಂಧಿ, ಅವರ ಭೇಟಿಗೆ ವ್ಯವಸ್ಥೆ ಮಾಡಿದರು. ಮಥಿಯಾಸ್ ಸಲೀಂ ಅಲಿಯವರೊಡನೆ ಮುಂಬೈ ಸಮೀಪದ ಒಂದು ಉದ್ಯಾನದಲ್ಲಿ ಒಂದು ದಿನವನ್ನು ಕಳೆದರು. ಆ ಸಂದರ್ಭವನ್ನು ನೆನಪಿಸಿಕೊಂಡು ಸೆನೆಟರ್ ಮಥಿಯಾಸ್ ಹೇಳುತ್ತಾರೆ: "ಸಲೀಂ ಅಲಿ ಆ ದಿನ ಅರಣ್ಯಗಳ ಸೌಂದರ್ಯಕ್ಕೆ ನನ್ನ ಕಣ್ಣು ತೆರೆಸಿದರು .... ಭಾರತದ ಪಕ್ಷಿಗಳನ್ನು ಕುರಿತು ನಾನು ಎಷ್ಟೋ ಕಲಿತೆ. ಮೇಲಾಗಿ ಎಲ್ಲ ಕಡೆಯೂ ಇರುವ ಎಲ್ಲರೂ ಹಂಚಿಕೊಂಡ ಮಾನವ ಗುಣಗಳನ್ನೂ ತಿಳಿದುಕೊಂಡೆ."

ಸಲೀಂ ಅಲಿ ರಾಜ್ಯಸಭೆಗೆ ನಾಮಕರಣಗೊಂಡಾಗ ಯಾರೋ ಕೇಳಿದರಂತೆ "ಇದುವರೆಗೂ ನೀವು ಹಕ್ಕಿಗಳನ್ನು ವೀಕ್ಷಿಸುತ್ತಿದ್ದಿರಿ. ಈಗೇನು ಮಾಡುತ್ತೀರಿ?"

ಸಲೀಂ ಅಲಿ ಹೇಳಿದರಂತೆ: "ಈಗ ಒಂದು ತರಹ ಜನರನ್ನು ವೀಕ್ಷಿಸುತ್ತೇನೆ!"



ಹಕ್ಕಿಗಳದ್ದೇ ಒಂದು ಲೋಕ ಅದರಲ್ಲಿ ಸೌಂದರ್ಯಕ್ಕೆ ರೆಕ್ಕೆ ಕಟ್ಟಿ ಇರುತ್ತದೆ. ಸೌಂದರ್ಯವೇ ರೂಪಗೊಂಡ ಹಕ್ಕಿಗಳು ಹಾಡುತ್ತವೆ. ಹಾರುತ್ತವೆ, ಕುಣಿಯುತ್ತವೆ, ಕುಪ್ಪಳಿಸುತ್ತವೆ. ಆದರೆ ಅದನ್ನು ನೋಡಿ ಸಂತೋಷಿಸುವವರು. ಸಂಭ್ರಮಿಸುವವರು ಬಹಳ ಕಡಿಮೆ. ನಾಗರಿಕತೆಯ ಗಡಿಬಿಡಿ ಗಲಿಬಿಲಿಗಳಿಂದ ದೂರವಾಗಿ ನೆಮ್ಮದಿಯನ್ನು ಪಡೆಯಲು ಪಕ್ಷಿ ಪ್ರಪಂಚ ನಮಗೆ ಸಹಾಯ ಮಾಡುತ್ತದೆ. ಪಕ್ಷಿ ಪರಿವೀಕ್ಷಣೆಯ ರೋಮಾಂಚನವನ್ನು ಯಾರಾದರೂ 'ಪರಾರಿವಾದ' ಎನ್ನುಬಹುದು ಇರಬಹುದು, ಆದರೆ ಸಲೀಂ ಅಲಿ ಹೇಳುತ್ತಾರೆ. "ಅದಕ್ಕೆ ಸಮರ್ಥನೆಯ ಅಗತ್ಯವಿಲ್ಲ."

ಜೀವನದಲ್ಲಿ ಒಬ್ಬೊಬ್ಬರಿಗೆ ಒಂದೊಂದು ರೀತಿಯ ಹವ್ಯಾಸ ಇರುವುದುಂಟು. ಕೆಲವರು ಅಂಚೆ ಚೀಟಿಗಳನ್ನು, ನಾಣ್ಯಗಳನ್ನು ಸಂಗ್ರಹಿಸುವ ಹವ್ಯಾಸವನ್ನು ಬೆಳೆಸಿಕೊಂಡಿದ್ದರೆ., ವರ್ಷದ ಪ್ರಮುಖ ಘಟನೆಗಳನ್ನು ಸಂಗ್ರಹಿಸುವವರು, ಉತ್ತಮ ಪುಸ್ತಕಗಳನ್ನು ಸಂಗ್ರಹಿಸುವವರೂ ಇರುವುದುಂಟು. ಆದರೆ ಡಾ। ಸಲೀಂ ಅಲಿಯವರು ಹಕ್ಕಿಗಳ ಬಗ್ಗೆ ಆಸಕ್ತಿವಹಿಸಿದವರು. ಹೀಗೆ ಸಲೀಂ ಅಲಿಯವರು ಹಕ್ಕಿಗಳನ್ನು ಕುರಿತು ಅಧ್ಯಯನ ನಡೆಸಿ 'ಭಾರತದ ಹಕ್ಕಿ ಮನುಷ್ಯ' ರಾದರು.

ಹಾ.ಮಾ. ನಾಯಕ

### ಡಾ। ಹಾರೋಗದ್ದೆ ಮಾನಪ್ಪ ನಾಯಕ



ಡಾ। ಹಾರೋಗದ್ದೆ ಮಾನಪ್ಪ ನಾಯಕ ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನವರು. ಇವರು 1931ರ ಫೆಬ್ರವರಿ 5ರಂದು ಜನಿಸಿದರು. ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿ, ಗುಲ್ಬರ್ಗ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ಸೇವೆಸಲ್ಲಿಸಿದ್ದಾರೆ. ಬಾಳ್ನೋಟ, ಸೂಲಂಗಿ, ಸಮೀಕ್ಷೆ, ಸಂಕೀರ್ಣ, ರವೀಂದ್ರನಾಥ, ಹಾವು ಮತ್ತು ಹೆಣ್ಣು ಇವರು ರಚಿಸಿದ ಗದ್ಯ ಕೃತಿಗಳು. ಶಾಂತಿ ಸ್ವರೂಪ ಭಾಟ್ನಾಗರ್, ಭಾರತದ ಹಳ್ಳಿಗಳು, ರೂಪಾರಾಧಕ ಮತ್ತು ನಿಸರ್ಗದಡಿಯಲ್ಲಿ ಎಂಬುದು ಇವರ ಸಂಪಾದಿತ ಕೃತಿಗಳು. ಪ್ರಜಾವಾಣಿ ಪತ್ರಿಕೆಯ ವಾರದ ವಿಭಾಗದ ಸಂಪ್ರತಿ ಅಂಕಣಕಾರರು. ಈ ಲೇಖನವನ್ನು ಪ್ರಜಾವಾಣಿ ಪತ್ರಿಕೆಯಿಂದ ಆಯ್ದುಕೊಳ್ಳಲಾಗಿದೆ.

## ಚಟುವಟಿಕೆಗಳು

### ❑ ಉತ್ತರಿಸಿರಿ

- ಡಾ। ಸಲೀಂ ಅಲಿಯವರನ್ನು 'ಭಾರತದ ಹಕ್ಕಿ ಮನುಷ್ಯ' ಎಂದು ಕರೆಯಲು ಕಾರಣವೇನು?
- 'ನಮ್ಮ ಹಕ್ಕಿಗಳು' ಪುಸ್ತಕದ ಮುನ್ನುಡಿಯಲ್ಲಿ ಇಂದಿರಾಗಾಂಧಿ ಏನೆಂದು ಹೇಳಿದ್ದಾರೆ?
- ಡಾ। ಸಲೀಂ ಅಲಿಯವರಿಗೆ ಲಭಿಸಿದ ಪ್ರಶಸ್ತಿಗಳು ಯಾವುವು?

### ❑ ಘಟನೆಗಳನ್ನು ಕ್ರಮೀಕರಿಸಿ ಬರೆಯಿರಿ

- 'ದಿ ಬುಕ್ ಆಫ್ ಇಂಡಿಯನ್ ಬರ್ಡ್ಸ್' 1941ರಲ್ಲಿ ಮೊದಲ ಸಲ ಪ್ರಕಟವಾಯಿತು.
- ಸಲೀಂ ಅಲಿ ಮುಂಬೈನ ಕೇತ್ವಾಡಿ ಪ್ರದೇಶದ ಮಧ್ಯಮ ವರ್ಗದ ಕುಟುಂಬಕ್ಕೆ ಸೇರಿದವರು.
- ಸಲೀಂ ಅಲಿಯವರು 1976 ರಲ್ಲಿ ಪದ್ಮವಿಭೂಷಣ ಪ್ರಶಸ್ತಿ ಪಡೆದರು.
- ಪತ್ನಿ ತೆಹಮಿನರು ಇಲ್ಲದೆ ಡೆಹರಾಡೂನಿನಲ್ಲಿ ಅವರು ಸಹಜ ಶೂನ್ಯವನ್ನನುಭವಿಸಿದರು.
- ಅಮೇರಿಕೆಯ ಸೆನೆಟರ್ ಮಥಿಯಾಸ್ 'ಸಲೀಂ ಅಲಿ ಪರಿಸರ ಬ್ರಹ್ಮ' ಎಂದು ವರ್ಣಿಸಿದ್ದಾರೆ.
- ಸಿ.ಪಿ. ರಾಮಸ್ವಾಮಿ ಕೇರಳ ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದಾಗ ವಿಶ್ವವಿದ್ಯಾನಿಲಯದಲ್ಲಿ ಹಂಚಿಕೆಗಾಗಿ ಈ ಪುಸ್ತಕದ ಐದು ನೂರು ಪ್ರತಿಗಳನ್ನು ಖರೀದಿಸಿದ್ದರು.

### ❑ ಬಿಟ್ಟಸ್ಥಳ ತುಂಬಿಸಿರಿ


ಕೆಳಗೆ ಕೊಡಲಾದ ಟಿಪ್ಪಣಿಯಲ್ಲಿ ಕೆಲವು ಪದಗಳು ಬಿಟ್ಟುಹೋಗಿವೆ. ಆವರಣದಲ್ಲಿ ಕೊಟ್ಟಿರುವ ಪದಗಳನ್ನು ಸರಿಯಾದ ರೂಪದಲ್ಲಿ ಯೋಗ್ಯವಾದ ಸ್ಥಳದಲ್ಲಿ ಭರ್ತಿಮಾಡಿ ಟಿಪ್ಪಣಿಯನ್ನು ಬರೆಯಿರಿ.

(ಸತತ, ಪ್ರಚೋದಿಸು, ನಿಕಟ, ಪ್ರಭಾವ, ನಿರೂಪಿಸು, ಸಂತತಿ, ಆಶ್ರಯ, ಸಂಪರ್ಕ, ಸಹಜ)

ಹಕ್ಕಿಗಳಿಗೂ ಮರಗಳಿಗೂ ...................... ಸಂಬಂಧವಿದೆ. ಕೆಲವು ಸಸ್ಯಗಳ ಹುಟ್ಟಿಗೆ ಪಕ್ಷಿಗಳು ಕಾರಣವಾಗುತ್ತವೆ ಎಂಬುದನ್ನು ವಿಜ್ಞಾನಿಗಳು ................ ಸಸ್ಯಗಳು ಹೂ, ಹಣ್ಣುಗಳತ್ತ ಹಕ್ಕಿಗಳು ಬರುವಂತೆ ...................... ಹಕ್ಕಿಗಳ ................ ಕೆಲವು ಸಸ್ಯಗಳು ಹೂಗಳು ಹಣ್ಣುಗಳಾಗಿ ಬಲಿತರೆ ಇನ್ನು ಕೆಲವು ಸಸ್ಯಗಳ ಹಣ್ಣುಗಳ ಬೀಜಗಳು ಬೇರೆಡೆಗೆ ಸಾಗಿ ಹೊಸ ಗಿಡಗಳಾಗಿ ಮೊಳೆಯುತ್ತವೆ. ಈ ರೀತಿ ...................... ಬೆಳೆದ ವೃಕ್ಷಗಳು ಪಕ್ಷಿಗಳಿಗೆ ...................... ನೀಡುತ್ತವೆ. ಇಂದು ...................... ಅರಣ್ಯನಾಶ ವಾಗುತ್ತಿರುವುದರಿಂದ ಹಕ್ಕಿಗಳ ...................... ಅಳಿಯುತ್ತಿದೆ. ಇದು ಕೆಲವು ವೃಕ್ಷಗಳ ಮೇಲೂ ...................... ಬೀರಬಹುದು.

### ❑ ಪದಸೂರ್ಯ ರಚಿಸಿರಿ


ಪಾಠಭಾಗದ ಸಹಾಯದಿಂದ ಪದಸೂರ್ಯವನ್ನು ಪೂರ್ತಿಗೊಳಿಸಿರಿ.




### ❑ ವಿವರಣೆ ತಯಾರಿಸಿರಿ

## ಗುಬ್ಬಚ್ಚಿ

"ಚೀಂವ್ ಚೀಂವ್ ಚೀಂವ್" ಎಂದು ಕೂಗುವ, ಚಿಕ್ಕಗಾತ್ರದ ಬೂದು ಮಿಶ್ರಿತ ತಿಳಿಕಂದು ಬಣ್ಣದ ಹಕ್ಕಿಯೇ ಗುಬ್ಬಚ್ಚಿ. ಇದು ಸುಮಾರು 15 ಸೆಂ.ಮೀ. ಉದ್ದ ವಿದ್ದು ಸರಾಸರಿ 25 ರಿಂದ 40 ಗ್ರಾಂಗಳಷ್ಟು ತೂಕವಿರುತ್ತದೆ. ದಪ್ಪನಾದ, ಚೂಪಾದ ಪುಟ್ಟ ಕೊಕ್ಕನ್ನು ಹೊಂದಿದೆ. ಗಂಡು ಗುಬ್ಬಚ್ಚಿ ಹೆಣ್ಣಿಗಿಂತ ಹೆಚ್ಚು ಲಕ್ಷಣವಾಗಿದೆ. ಕಣ್ಣಿನ ಸುತ್ತ, ಕುತ್ತಿಗೆ ಹಾಗೂ ಎದೆಯ ಮುಂಭಾಗ ದಲ್ಲಿ ಕಪ್ಪು ಬಣ್ಣವಿದ್ದರೆ ಅದನ್ನು ಗಂಡು ಗುಬ್ಬಚ್ಚಿ ಎಂದು ತಿಳಿಯ ಬಹುದು.



ದವಸ-ಧಾನ್ಯ, ಹಣ್ಣು-ಹಂಪಲು, ಹುಳು-ಹುಪ್ಪಟೆಗಳು, ಕ್ರಿಮಿ-ಕೀಟಗಳು ಇದರ ಆಹಾರ. ಇದು ಸಾಮಾನ್ಯವಾಗಿ ಧಾನ್ಯದ ಉಗ್ರಾಣ, ದಿನಸಿ ಅಂಗಡಿ, ಗಿರಣಿ ಮೊದಲಾದ ಕಡೆಗಳಲ್ಲೂ, ಮನೆಗಳಲ್ಲೂ ನಾರುಗಳಿಂದ ಗೂಡು ರಚಿಸುತ್ತದೆ. ಮಾನವನ ವಾಸಸ್ಥಾನದೊಂದಿಗೆ ನಿಕಟ ಸಂಬಂಧ ವಿರುವ ಕಾರಣ ಇದನ್ನು 'ಮನೆಹಕ್ಕಿ' ಎಂದೂ ಕರೆಯುವುದಿದೆ. ಇಂಗ್ಲೀಷ್‌ನಲ್ಲಿ 'ಹೌಸ್ ಸ್ಪೇರೋ' ಎಂದೂ ಮಲೆಯಾಳಂನಲ್ಲಿ 'ಕುರುವಿ' ಎಂದೂ ಕರೆಯುತ್ತಾರೆ.

ಹಿಂದೆ ಇವುಗಳ ಸಂಖ್ಯೆ ಧಾರಾಳವಾಗಿತ್ತು. ಮಕ್ಕಳ ಹಾಡುಗಳಲ್ಲಿ, ಕತೆಗಳಲ್ಲಿ ಗುಬ್ಬಿಗೆ ಪ್ರಮುಖ ಸ್ಥಾನವಿತ್ತು. ಆದರೆ ಇಂದು ನಗರೀಕರಣದ ಹಾವಳಿಯಿಂದಾಗಿ ವಾಸಯೋಗ್ಯ ಪರಿಸರ ದೊರಕದೆ ಇವುಗಳ ಸಂತತಿ ದಿನೇ ದಿನೇ ಕ್ಷೀಣಿಸುತ್ತಿದೆ. ವಂಶನಾಶದೆಡೆಗೆ ಸರಿಯುತ್ತಿದೆ.

- ಗುಬ್ಬಚ್ಚಿಯ ಕುರಿತಾದ ವಿವರಣೆಯನ್ನು ಓದಿದಿರಲ್ಲವೇ? ನಿಮ್ಮ ಪರಿಸರದಲ್ಲಿ ಕಂಡುಬರುವ ಹಕ್ಕಿಗಳಲ್ಲಿ ಯಾವುದಾದರೂ ಒಂದರ ಕುರಿತು ವಿವರಣೆ ತಯಾರಿಸಿರಿ. ಸಹಪಾಠಿಗಳು ತಯಾರಿಸಿದ ವಿವರಣೆಗಳನ್ನೆಲ್ಲ ಸಂಗ್ರಹಿಸಿ 'ಪಕ್ಷಿ ವಿಶೇಷಾಂಕ'ವೊಂದನ್ನು ತಯಾರಿಸಿರಿ.

## ಕಲಿಕಾ ಸಾಧನೆಗಳು

- ಕಥೆ, ಕವಿತೆಗಳನ್ನು ಸೂಕ್ತವಾದ ಭಾವಾಭಿವ್ಯಕ್ತಿಯೊಂದಿಗೆ ಮಂಡಿಸುವುದು.
- ಕಥೆ, ಕವಿತೆ, ನಾಟಕ ಮೊದಲಾದ ಸೃಜನಾತ್ಮಕ ರಚನೆಗಳ ರಚನಾ ರೀತಿ, ಔಚಿತ್ಯ, ವೈವಿಧ್ಯ ಮೊದಲಾದವುಗಳನ್ನು ಪರಿಗಣಿಸಿಕೊಂಡು ಸ್ವಂತ ದೃಷ್ಟಿಕೋನಕ್ಕನುಸಾರವಾಗಿ ಆಸ್ವಾದಿಸಿ, ವಾಚಿಕವಾಗಿ ಮಂಡಿಸುವುದು ಮತ್ತು ಬರೆದು ಮಂಡಿಸುವುದು.
- ಓದಿದ ಸೃಜನಾತ್ಮಕ ರಚನೆಗಳನ್ನು ವಿಭಿನ್ನ ಮತ್ತು ಸೂಕ್ತ ರೀತಿಯಲ್ಲಿ ಪುನರಾವಿಷ್ಕರಿಸುವುದು.
- ಕಥೆಗಳನ್ನು ಮತ್ತು ಪರಿಚಿತವಾದ ವಸ್ತು/ಸಂದರ್ಭಗಳನ್ನು ಆಧಾರವಾಗಿರಿಸಿಕೊಂಡು ನಾಟಕ ರಚನೆ ಮಾಡುವುದು.
- ವಿಷಯ ಮತ್ತು ಸಂದರ್ಭಕ್ಕೆ ಸೂಕ್ತವಾದ ಪದಗಳು, ಪ್ರಯೋಗಗಳು, ಶೈಲಿಗಳು ಎಂಬಿತ್ಯಾದಿಗಳನ್ನು ಸಂಭಾಷಣೆಯಲ್ಲಿ ಮತ್ತು ಬರವಣಿಗೆಯಲ್ಲಿ ಅಳವಡಿಸುವುದು.
- ಸ್ವಂತ ಅಭಿಪ್ರಾಯಗಳನ್ನು ಶಿಷ್ಟಭಾಷೆಯಲ್ಲಿ ಮಂಡಿಸುವುದು.
- ಸಾಮಾಜಿಕ ಮಹತ್ವವುಳ್ಳ ವಿಷಯಗಳನ್ನು ಆಧಾರವಾಗಿರಿಸಿ ಪ್ರಬಂಧ, ಮನವಿ, ಭಾಷಣ ಇತ್ಯಾದಿಗಳನ್ನು ರಚಿಸುವುದು.
- ಪರಿಚಿತವಾದ ಕವಿತೆಗಳಲ್ಲಿರುವ ಚಮತ್ಕಾರ, ಬಿಂಬಕಲ್ಪನೆ, ವರ್ಣನೆ ಎಂಬಿವುಗಳನ್ನು ಗುರುತಿಸಿ, ವಿಶ್ಲೇಷಿಸಿ, ಆಸ್ವಾದನ ಟಿಪ್ಪಣಿ, ತೌಲನಿಕ ಟಿಪ್ಪಣಿ, ವರ್ಣನೆ ಎಂಬಿತ್ಯಾದಿಗಳನ್ನು ರಚಿಸುವುದು.
- ಪಾಠಭಾಗಗಳಿಂದ ಆರ್ಜಿಸಿದ ಭಾಷಾಪರವೂ ಆಶಯಪರವೂ ಆದ ಸಾಮರ್ಥ್ಯಗಳನ್ನು ಉಪಯೋಗಿಸಿಕೊಂಡು ಸ್ವತಂತ್ರವಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.

# 2. ಜನಪದ ಸಿರಿ

ನಮ್ಮ ನಾಡು ವೈವಿಧ್ಯಮಯ ಸಂಸ್ಕೃತಿಗಳ ತವರೂರು. ಆಧುನಿಕತೆಯ ಪ್ರಭಾವದಿಂದ ಇಂದು ನಮ್ಮ ಜೀವನ ಶೈಲಿ ಸಂಪೂರ್ಣ ಬದಲಾಗಿದೆ. ನಾವೆಲ್ಲಾ ನಮ್ಮ ಅಪೂರ್ವವಾದ ಕಲೆ, ಸಂಸ್ಕೃತಿ,ಸಾಹಿತ್ಯ. ಜನಪದ ಆಚರಣೆಗಳು, ಹಾಡುಗಳು ಮುಂತಾದುವುಗಳನ್ನು ಮರೆಯುತ್ತಿದ್ದೇವೆ. ವಿದ್ಯುನ್ಮಾನ ಮಾಧ್ಯಮಗಳು ಶುದ್ಧ ಕಲಾ ಪ್ರಕಾರಗಳ ಆಸ್ವಾದನೆಗೆ ತೊಡಕಾಗಿವೆಯೇ ಎಂಬ ಸಂಶಯ ಮೂಡುತ್ತಿದೆ. ಮನಸ್ಸನ್ನು ಮುದಗೊಳಿಸಲು, ಮಾನವೀಯ ಸಂಬಂಧಗಳನ್ನು ದೃಢಗೊಳಿಸಲು ನಮ್ಮ ಸಂಸ್ಕೃತಿ, ಜನಪದ ಆಚರಣೆಗಳು ಸಹಕರಿಸುತ್ತವೆ. ಅವುಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿ ನಮ್ಮದು.



# ಸುಗ್ಗಿಕಾಲ

"ಸುಗ್ಗಿ ಬರೆ ಹಿಗ್ಗಿತಿರೆ ಸಗ್ಗಸುಖವ ತರುತಿದೆ"
ಮೇಲಿನ ಕವಿವಾಣಿಯಂತೆ ಸುಗ್ಗಿಕಾಲದಲ್ಲಿ ಭೂಮಿಯು ಸ್ವರ್ಗಸಮಾನವಾಗುತ್ತದೆ. ಎಂದೂ ಕಾಣದ ಸಂಭ್ರಮ, ಸಡಗರ ಸರ್ವ ಚರಾಚರಗಳಲ್ಲೂ ಕಂಡುಬರುತ್ತದೆ.





ಸುಗ್ಗಿಕಾಲ ಹಿಗ್ಗಿ ಬಂದಿತೋ ನಮ್ಮ
ಬಾಳಿನಲ್ಲಿ ಭಾಗ್ಯತಂದಿತೋ
ಧಾನ್ಯದಾ ರಾಶಿಯ ಎಲ್ಲೆಡೆ ಚೆಲ್ಲುತ
ಭೂಮಿ ತಾಯಿ ಕಾಳು ಕೊಟ್ಟಳು ನಮ್ಮ
ಹೊಟ್ಟೆ ತುಂಬ ಅನ್ನವಿಟ್ಟಳು ॥ಸುಗ್ಗಿ॥



ರಾಗಿಯ ಜೋಳದ ಭತ್ತದ ನವಣೆಯ
ತೊಗರಿ ಅವರೆಯ ರಾಶಿ ಹಾಕ್ಯಾವ್ರೆ ನೋಡಿ
ಉದ್ದು ಹೆಸರಿನ ರಾಶಿ ಮಾಡ್ಯವ್ರೆ
ಮುತ್ತು ಮುತ್ತು ಹೆಣೆದಂತ ತೆನೆಚಂದ
ಕಂತೆ ಕಂತೆ ಕಟ್ಟಿದಂತ ಬಣವೆ ಚಂದ
ಕಾಳುಕಾಳು ರಾಶಿ ಇವು ಎಂತ ಚಂದ
ಆಳು ಉದ್ದ ರಾಶಿ ಇವು ನೋಡಲಂದ
ಬಳ್ಳ ತುಂಬಿ ಕೊಡುವ ಆ ಪಡಿದಾನ ಚಂದ ॥ಸುಗ್ಗಿ॥

ಹಳ್ಳಿಯ ಹೈಕ್ಳಲ್ಲ ಹೊಳ್ಳಿಯ ಹೊರ್ಕೊಂಡು
ಕೊಳ್ಳಿಯ ಬೆಳಕಿನಲ್ಲಿ ಉಣ್ಣುತಾರೆ ನಮ್ಮ
ಹಳ್ಳಿಗೆ ಅನ್ನದಾನ ಮಾಡುತಾರೆ
ಘಲ್ಲುಘಲ್ಲು ಗೆಜ್ಜೆಗೆ ತಕ್ಕತಯ್ಯ ಹೆಜ್ಜೆಗೆ
ಮುತ್ತಿನ ಕೋಲುಗಳ ಹೊಯ್ಯುತಾರೆ
ತಿಂಗಳ ಬೆಳಕಲಿ ತಂಪಿನ ಹೊತ್ತಲಿ
ಹಂತಿಯ ಪದಗಳ ಹಾಡ್ಯಾವ್ರೆ
ಹಳ್ಳಿಗೆ ಸಂತಸ ತುಂಬುತಾರೆ ನಮ್ಮ
ಹಳ್ಳಿಗೆ ಆನಂದ ನೀಡುತಾರೆ ॥ಸುಗ್ಗಿ॥





ಹಾಲಕ್ಕಿ ಹಾಡ್ಯಾವೆ ಬೆಳ್ಳಕ್ಕಿ ಹಾರ್ಯಾವೆ
ಗೊರವಂಕ ಗೂಡಬಿಟ್ಟು ಬಂದ್ಯಾವೆ ನೋಡಿ
ಬಿದ್ದ ಕಾಳನ್ನು ಹುಡುಕಿ ತಿಂದ್ಯಾವೆ
ಹಕ್ಕಿಗೆ ಪಿಕ್ಕಿಗೆ ಕಾಳ ಕೊಡುವ ಸುಗ್ಗಿಯು
ಮಕ್ಕಳು ಮರಿಗೆ ಬೆಲ್ಲದ ಹುಗ್ಗಿಯು
ಒಕ್ಕಲಜನಕೆ ಚಿನ್ನ ಕೊಡುವ ಸುಗ್ಗಿಯು
ನಾಡಿನ ಜನಕೆ ಅನ್ನ ಕೊಡುವ ಸುಗ್ಗಿಯು
ಬಾಳು ಬಂಗಾರವಾಯ್ತೆ ಭೂತಾಯಿ ನಮ್ಮ
ಬಾಳು ಬಂಗಾರವಾಯ್ತೆ ಮಾತಾಯಿ ॥ಸುಗ್ಗಿ॥



– ಜನಪದಗೀತೆ

## ಚಟುವಟಿಕೆಗಳು

- ಈ ಪದ್ಯವನ್ನು ರಾಗವಾಗಿ ಹಾಡಿರಿ.

### ಉತ್ತರಿಸಿರಿ

- ಈ ಜನಪದ ಹಾಡಿನಲ್ಲಿ ಸುಗ್ಗಿಕಾಲದ ಆಗಮನವನ್ನು ಹೇಗೆ ವರ್ಣಿಸಲಾಗಿದೆ?
- ಈ ಸುಗ್ಗಿಕಾಲವನ್ನು ಸಮೃದ್ಧಗೊಳಿಸುವ ಧಾನ್ಯಗಳಾವುವು?
- ಈ ಹಾಡಿನಲ್ಲಿ ಯಾವುದನ್ನೆಲ್ಲ 'ಚಂದ' ಎಂದು ಹೇಳಿದ್ದಾರೆ?
- ಸುಗ್ಗಿಕಾಲದಲ್ಲಿ ಹಳ್ಳಿಯ ಹುಡುಗರು ಹಳ್ಳಿಗೆ ಹೇಗೆ ಆನಂದ ನೀಡುತ್ತಾರೆ?
- ಈ ಹಾಡಲ್ಲಿ ಸೂಚಿಸಿದಂತೆ ಸುಗ್ಗಿಕಾಲದಲ್ಲಿ ವಿವಿಧ ಪಕ್ಷಿಗಳು ನಡೆಸುವ ವಿವಿಧ ಚಟುವಟಿಕೆಗಳು ಯಾವುವು?
- ಪದ್ಯದ ಆಧಾರದಲ್ಲಿ ಸುಗ್ಗಿ ಕಾಲವು ಯಾರಿಗೆ, ಏನನ್ನು ಕೊಡುತ್ತದೆ ಎಂದು ಬರೆಯಿರಿ.

### ಕೇಳಿ ಬರೆಯಿರಿ

- 'ಬಳ್ಳ' ಎಂಬ ಹಿಂದಿನ ಕಾಲದ ಅಳತೆಮಾನದ ಬಗ್ಗೆ ಈ ಹಾಡಿನಲ್ಲಿ ಪ್ರಸ್ತಾಪವಿದೆ. 'ಬಳ್ಳ'ದಂತೆ ಕೃಷಿಯ ಸಂದರ್ಭದಲ್ಲಿ ಉಪಯೋಗಿಸುತ್ತಿದ್ದ ಹಿಂದಿನ ಕಾಲದ ಅಳತೆಮಾನದ ಹೆಸರುಗಳನ್ನು ಸಂಗ್ರಹಿಸಿ ಬರೆಯಿರಿ. ಅವುಗಳ ಉಪಯೋಗವನ್ನು ಹಿರಿಯರಿಂದ ಕೇಳಿ ಬರೆಯಿರಿ.

### ಹೋಲಿಕೆಯ ಟಿಪ್ಪಣಿ ತಯಾರಿಸಿರಿ

- 'ಸುಗ್ಗಿಕಾಲ' ಜನಪದ ಹಾಡನ್ನು ಕೆಳಗಿನ ಹಾಡಿನೊಂದಿಗೆ ಹೋಲಿಸಿ ಟಿಪ್ಪಣಿ ತಯಾರಿಸಿರಿ.

ಸುಗ್ಗಿ ವ್ಯಾಳೇಗೆ
ಸೊಬಗೇ ಸುತ್ತಕಂಡು
ಭೂಮಿ ಬೀಗ್ಯೈತೆ
ಬವಣೆ ನೀಗ್ಯೆತೆ ।।ಸುಗ್ಗಿ।।

ರಾಗಿ ಹೊಲಗಳು ತೂಗುವ ಒನಪಿಗೆ
ಬೆಳಗೇ ಮಿಂಚೈತೆ
ಹುಚ್ಚೆಳ್ಳು, ಸಾಸಿವೆ ಅವರೆ ಸೊಗಡು
ಕಂಪು ಹರಡ್ಯೆತೆ
    ಕಡಲೆ ಕಬ್ಬು ಮೋಹದಿ ಬೆಳೆದು
    ರಾಶಿ ಬಿದ್ದೈತೆ
    ಜೋಳ ನವಣೆ ಹುರುಳಿ ತೊಗರಿ
    ಕಣ್ಣು ಕುಕ್ಕೈತೆ ।।ಸುಗ್ಗಿ।।
ವರುಷಪೂರಾ ದುಡಿದ ಜನಕೆ
ಫಸಲು ದಕ್ಕೈತೆ
ಕೇಕೆ ಹಾಕೊ ರೈತರ ರಂಗಿಗೆ
ರಾಗ ಉಕ್ಕೈತೆ
ಹಸಿರು ಬಯಸೊ ರಾಸುಗಳಿಗೆ
ಮೇವು ಸಿಕ್ಕೈತೆ
ಕಾಳುಕಡ್ಡಿ ಹುಡುಕೊ ಹಕ್ಕಿಗೆ
ಹಸಿವು ತಣಿದ್ಯೆತೆ ।।ಸುಗ್ಗಿ।।

(ಸಂಗ್ರಹ)

### ಪದ ಬಳಸಿರಿ

- ಈ ಕೊಟ್ಟಿರುವ ಗದ್ಯ ಭಾಗವನ್ನು ಓದಿ ಅಡಿಗೆರೆ ಎಳೆದ ಪದಗಳ ಬದಲು, ಪದ್ಯದಲ್ಲಿ ಬಂದಿರುವ ಗ್ರಾಮ್ಯ ಪದಗಳನ್ನು ಉಪಯೋಗಿಸಿ ಬರೆಯಿರಿ.

ರಾಮಪ್ಪ ಮತ್ತು ಆತನ ಮಗ ಭತ್ತದ ಕೃಷಿ ಮಾಡಿದರು. ಪಾರಿವಾಳಗಳ ಹಾವಳಿಯಿಂದ ಬೆಳೆಯನ್ನು ರಕ್ಷಿಸಲು ದೊಡ್ಡದಾದ ಬಲೆಯನ್ನು ಹೊತ್ತುಕೊಂಡು ಗದ್ದೆಗೆ ತಂದರು. ಬಲೆಯನ್ನು ಹಾಕಿದರು. ಸ್ವಲ್ಪ ಹೊತ್ತಿನಲ್ಲೇ ಪಾರಿವಾಳಗಳು ಹಾರುತ್ತಾ ಬಂದವು. ಕೆಳಗಿಳಿದು ಬಲೆಯ ಮೇಲೆ ಕುಳಿತವು. ಕಾಳುಗಳನ್ನು ಹೊಟ್ಟೆ ತುಂಬ ತಿಂದವು. ಸಂತೋಷದಿಂದ ಹಾಡಿದವು. ಅನಂತರ ಬಲೆಯ ಸಹಿತ ದೂರಕ್ಕೆ ಹಾರಿದವು.

# ಡಬ್ಬಿಯ ರಹಸ್ಯ

ಕತೆಗಳನ್ನು ಬಾಲಕರಿಂದ ತೊಡಗಿ ವೃದ್ಧರವರೆಗೆ ಎಲ್ಲರೂ ಇಷ್ಟಪಡುತ್ತಾರೆ. ಜನಪದದಲ್ಲಿ ಕತೆಗಳಿಗೆ ವಿಶಿಷ್ಟ ಸ್ಥಾನವಿದೆ. ಅಲ್ಲಿ ಹರಿಯುತ್ತಿರುವ ಕತೆಗಳ ಸೊಗಸೇ ಬೇರೆ. ನಿಜ ಜೀವನದಲ್ಲಿ ಅಸಂಭವವೆನಿಸುವ ಅನೇಕ ವಿಚಾರಗಳು ಇಲ್ಲಿ ಸಂಭಾವ್ಯವೆನಿಸುತ್ತವೆ.

ಬಹಳ ವರ್ಷಗಳ ಹಿಂದೆ ಜೇನಾದ ಉತ್ತರದ ಕಡೆ ಮಿದುನೋ ಎಂಬ ಒಂದು ಚಿಕ್ಕ ಹಳ್ಳಿಯಲ್ಲಿ ಬೆಸ್ತರ ಪರಿವಾರವೊಂದು ವಾಸವಾಗಿತ್ತು. ಆ ಪರಿವಾರದಲ್ಲಿ ಉರೋಷಿಮಾ ಎಂಬ ಹೆಸರಿನ ಯುವಕನಿದ್ದ. ಒಂದು ದಿನ ಅವನು ಬಲೆಯನ್ನು ಹೆಗಲ ಮೇಲೆ ಹಾಕಿಕೊಂಡು ಸಮುದ್ರದಿಂದ ಮನೆಗೆ ಹಿಂದಿರುಗುತ್ತಿದ್ದ. ರಸ್ತೆಯ ಒಂದು ಬದಿಯಲ್ಲಿ ಕೆಲವು ಹುಡುಗರು ಆಮೆಯೊಂದನ್ನು ಹಿಡಿದು ಅದಕ್ಕೆ ಹಿಂಸೆ ಕೊಡುತ್ತಿದ್ದರು. ತುಂಟ ಹುಡುಗನೊಬ್ಬ ಒಂದು ದಪ್ಪ ಕಡ್ಡಿಯಿಂದ ಅದರ ಬೆನ್ನಿನ ಮೇಲೆ ಹೊಡೆಯುತ್ತಿದ್ದನು. ಇನ್ನೊಬ್ಬ ಕಲ್ಲಿನಿಂದ ಚುಚ್ಚುತ್ತಿದ್ದ. ಉರೋಷಿಮಾಗೆ ಅದನ್ನು ಕಂಡು ತುಂಬ ಕನಿಕರವಾಯಿತು. ಅವನು ಆ ಹುಡುಗರಿದ್ದಲ್ಲಿಗೆ ಬಂದು 'ರೂಪಾಯಿ ಕೊಡುತ್ತೇನೆ. ಏನಾದರೂ ತಿಂಡಿ ಖರೀದಿಸಿ ತಿನ್ನಬಹುದು'ಎಂದು ಹೇಳಿದ. ಹುಡುಗರು ರೂಪಾಯಿ ಪಡೆದು ಖುಷಿಯಿಂದ ಹೊರಟುಹೋದರು. ಉರೋಷಿಮ ಆಮೆಯನ್ನು ಎತ್ತಿಕೊಂಡು ಮತ್ತೆ ಸಮುದ್ರ ಬಳಿ ಬಂದ. 'ನೀನು ಮತ್ತೆ ನಮ್ಮ ಹಳ್ಳಿಗೆ ಬರಬೇಡ. ಇಲ್ಲಿನ ಹುಡುಗರು ತುಂಬ ಕೆಟ್ಟವರು' ಎಂದು ಹೇಳಿ ಅದನ್ನು ನೀರಿನಲ್ಲಿ ಬಿಟ್ಟುಬಿಟ್ಟ.

ಆಮೆಗೆ ತುಂಬಾ ದಣಿವಾಗಿತ್ತು. ಇಡೀ ದೇಹ ನೋಯುತ್ತಿತ್ತು. ಹೀಗಾಗಿ ಏನೊಂದೂ ಮಾತನಾಡದೆ ನೀರಿನಲ್ಲಿ ತೇಲಿಹೋಯಿತು. ಆದರೆ ಮಾರನೆಯ ದಿನ ಉರೋಷಿಮಾ ದೋಣಿಯ ಹಗ್ಗ ಬಿಚ್ಚುತ್ತಿದ್ದಾಗ ಆಮೆ ಅವನಿದ್ದಲ್ಲಿಗೆ ಬಂತು. 'ನೀನು ನಿನ್ನೆ ನನ್ನ ಪ್ರಾಣ ಉಳಿಸಿದೆ. ಆ ಸಮಯದಲ್ಲಿ ಅಲ್ಲಿಗೆ ನೀನು ಬರದಿದ್ದರೆ ಹುಡುಗರು ನನ್ನನ್ನು ಸಾಯಿಸಿಬಿಡುತ್ತಿದ್ದರು. ನಿನಗೆ ಧನ್ಯವಾದಗಳು' ಎಂದು ಕೃತಜ್ಞತೆ ಹೇಳಿತು.

'ಅದೇನು ದೊಡ್ಡ ವಿಷಯ. ಆಪತ್ತಿನಲ್ಲಿರುವವರನ್ನು ರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯ. ನಾನು ನನ್ನ ಕರ್ತವ್ಯವನ್ನು ಮಾಡಿದ್ದೇನೆ, ಅಷ್ಟೇ' ಎಂದು ಉರೋಷಿಮಾ ವಿನಯದಿಂದ ಹೇಳಿದ. ಆಮೆಗೆ ಅವನ ವಿನಯ ಸ್ವಭಾವ ತುಂಬ ಮೆಚ್ಚುಗೆಯಾಯಿತು. ಆ ಕ್ಷಣ ಅದಕ್ಕೆ ಉರೋಷಿಮಾನಿಗೆ ಏನಾದರೂ ಉಪಕಾರ ಮಾಡಬೇಕು ಎನಿಸಿತು. "ಸಮುದ್ರ ರಾಜನ ಮಗಳು ಮಿಸಾಕಿ ಹೆಸರನ್ನು ಕೇಳಿದ್ದೀಯಾ?" ಎಂದು ಅವನನ್ನು ಕೇಳಿತು.

'ಕೇಳಿದ್ದೇನೆ. ಅವಳು ತುಂಬ ಚೆಲುವೆ ಎನ್ನುತ್ತಾರೆ. ಆದರೆ ಇದುವರೆಗೆ ಯಾರೂ ಅವಳನ್ನು ಕಂಡಿಲ್ಲ. ಸಮುದ್ರ ತಳದಲ್ಲಿ ಆಕೆ ವಾಸಿಸುತ್ತಾಳೆ. ಹೀಗಾಗಿ ನೋಡುವುದಾದರೂ ಹೇಗೆ?' ಉರೋಷಿಮಾ ಉತ್ತರಿಸಿದ.

'ನಾನು ನಿನಗೆ ಅವಳನ್ನು ಭೇಟಿ ಮಾಡಿಸುತ್ತೇನೆ. ನೀನು ನನಗೆ ನಿನ್ನೆ ಮಾಡಿದ ಉಪಕಾರವನ್ನು ಅವಳಿಗೆ ತಿಳಿಸಿದ್ದೇನೆ. ಅದನ್ನು ಕೇಳಿ ಅವಳು ಸಂತೋಷಗೊಂಡಳು. ನಿನ್ನನ್ನು ಕರೆದುಕೊಂಡು ಬರುವಂತೆ ಹೇಳಿದ್ದಾಳೆ.' ಆಮೆ ಹೇಳಿತು.



'ಆದರೆ ನೀನು ಒಂದು ಸಾಮಾನ್ಯ ಆಮೆ, ಅವಳ ವಿಷಯ ನಿನಗೆ ಹೇಗೆ ಗೊತ್ತು?' ಉರೋಷಿಮಾ ಆಶ್ಚರಿಯಿಂದ ಕೇಳಿದ.

'ನಾನು ಅವಳ ಲೋಕದಲ್ಲೇ ಇದ್ದೇನೆ. ನಾನು ಮಿಸಾಕಿಯ ಅಂಗರಕ್ಷಕನೂ ಹೌದು. ಚಿಂತೆ ಮಾಡಬೇಡ. ನನ್ನ ಜೊತೆ ಬಾ' ಆಮೆ ಅವನಿಗೆ ಧೈರ್ಯ ಹೇಳಿತು.

ಉರೋಷಿಮಾ ಸಮುದ್ರ ರಾಜನ ಮಗಳು ಮಿಸಾಕಿಯ ಬಗ್ಗೆ ಬಹಳಷ್ಟು ಕೇಳಿದ್ದ. ಅವಳನ್ನು ನೋಡುವ ಆಸೆಯಿತ್ತು. ಆಮೆಯ ಕರೆಯನ್ನು ಮನ್ನಿಸಿ ಅದರೊಡನೆ ಹೊರಡಲು ಒಪ್ಪಿದ. ಆಮೆ ಅವನನ್ನು ತನ್ನ ಬೆನ್ನಿನ ಮೇಲೆ ಕೂರಿಸಿಕೊಂಡು ನೀರಿನಲ್ಲಿ ಮುಳುಗಿತು. ಉರೋಷಿಮಾಗೆ ಸಮುದ್ರದ ಒಳಗಿನ ಜಗತ್ತನ್ನು ಕಂಡು ತುಂಬ ಬೆರಗು ಉಂಟಾಯಿತು. ದೊಡ್ಡ ದೊಡ್ಡ ಮೀನು – ಮೊಸಳೆಗಳು, ತಿಮಿಂಗಿಲ ಮತ್ತಿತರ ಜಲಚರ ಪ್ರಾಣಿಗಳು ರಸ್ತೆಯಲ್ಲಿ ಕಂಡುಬಂದವು. ನೀರಿನ ಮಧ್ಯೆ ಅನೇಕ ಬೆಟ್ಟ ಗುಡ್ಡಗಳಿದ್ದವು. ಉರೋಷಿಮಾ ಅರಮನೆಯ ವೈಭವವನ್ನು ಕಂಡು ಬೆರಗಾದ.

ಅರಮನೆಯ ಸುಸಜ್ಜಿತ ಸುಂದರ ಕೊಠಡಿಯೊಂದರಲ್ಲಿ ಸಮುದ್ರರಾಜನ ಮಗಳು ಮಿಸಾಕಿ ಕುಳಿತಿದ್ದಳು. ಉರೋಷಿಮಾ ಒಳಗೆ ಬರುತ್ತಲೇ ಮೇಲೆದ್ದು ಮುಗುಳ್ನಕ್ಕು ಅವನನ್ನು ಸ್ವಾಗತಿಸಿದಳು. ಅಪೂರ್ವ ಲಾವಣ್ಯದಿಂದ ಕಂಗೊಳಿಸುತ್ತಿದ್ದ ಮಿಸಾಕಿಯನ್ನು ಕಂಡು ಉರೋಷಿಮಾ ನಮ್ರನಾಗಿ ಕೈಜೋಡಿಸಿ ನಮಸ್ಕರಿಸಿದ.

ಮಿಸಾಕಿ ಅವನನ್ನು ಕೈ ಹಿಡಿದು ಊಟಕ್ಕೆ ಕರೆದುಕೊಂಡು ಹೋದಳು. ಸೊಗಸಾದ ಭೋಜನವಾದ ಮೇಲೆ ತನ್ನ ಅರಮನೆಯ ವಿಶೇಷಗಳನ್ನು ತೋರಿಸಿದಳು. 'ಈ ಕೊಠಡಿಯಲ್ಲಿ ಎಲ್ಲಾ ಋತುಗಳ ಹವಾಮಾನವನ್ನು ಒಮ್ಮೆಲೇ ನೋಡಬಹುದು' ಎಂದು ಹೇಳಿ ಕೊಠಡಿಯ ಒಂದು ಕಿಟಿಕಿಯನ್ನು ತೆರೆದಳು. ಹೊರಗೆ ಇಬ್ಬನಿ ಸುರಿಯುತ್ತಿತ್ತು. ಸುತ್ತಲೂ ಮಂಜು ದಟ್ಟವಾಗಿತ್ತು. ಹೊರಗೆ ಭಯಂಕರ ಚಳಿ ಇತ್ತು. ಇನ್ನೊಂದು ಕಿಟಕಿಯನ್ನು ತೆರೆದಳು. ನೀರಿನ ಬೀಳುಗಳು ಕಾಣಿಸಿದವು. ಮರಗಿಡಗಳಿಗೆ ನೀರು ಹರಿದು ಅವು ಸುಂದರವಾಗಿ ಕಂಗೊಳಿಸುತ್ತಿದ್ದವು. ಹೊರಗೆ ಬಿಸಿಲು ಇತ್ತು. ಮಿಸಾಕಿ ಮೂರನೆಯ ಕಿಟಿಕಿ ತೆರೆದಳು. ಒಂದೇ ಸಮನೆ ಮಳೆ ಸುರಿಯುತ್ತಿತ್ತು. ಉರೋಷಿಮಾ ಈ ಎಲ್ಲ ವಿಚಿತ್ರಗಳನ್ನು ಕಣ್ಣರಳಿಸಿ ನೋಡಿದ.

ಮಿಸಾಕಿ ಅವನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಳು. ಅವನಿಗೆ ಬೇಕಾದ ವಸ್ತುಗಳನ್ನು ತಕ್ಷಣ ಕೊಡುತ್ತಿದ್ದಳು. ಉರೋಷಿಮಾನಿಗೆ ಒಂದಿಷ್ಟೂ ಬೇಸರವಾಗದಂತೆ ಸದಾ ಸಂತೋಷವಾಗಿರುವಂತೆ ನೋಡಿಕೊಳ್ಳುತ್ತಿದ್ದಳು. ಒಂದು ದಿನ ಆಮೆ ಅವನಲ್ಲಿ ಹೇಳಿತು 'ನೀನು ತುಂಬ ಅದೃಷ್ಟವಂತ ಉರೋಷಿಮಾ. ಮಿಸಾಕಿ ನಿನ್ನನ್ನು ತುಂಬ ಮೆಚ್ಚಿಕೊಂಡಿದ್ದಾಳೆ. ನಿನ್ನ ಗುಣ ಅವಳಿಗೆ ಹಿಡಿಸಿದೆ. ನಮ್ಮ ಲೋಕಕ್ಕೆ ಬಂದಿರುವವರಲ್ಲಿ ನೀನೇ ಮೊದಲ ಮಾನವ.'

ಉರೋಷಿಮಾನ ಬದುಕು ಸುಖ ಸಂತೋಷದಿಂದ ಕಳೆಯುತ್ತಿತ್ತು. ಅವನಿಗೆ ತನ್ನ ತಂದೆ–ತಾಯಿಯನ್ನು ನೋಡಬೇಕೆಂಬ ಆಸೆ ಉಂಟಾಗತೊಡಗಿತು. ಒಂದು ದಿನ ಮಿಸಾಕಿಯ ಬಳಿ ಬಂದು 'ನನಗೆ ನನ್ನ ಹಳ್ಳಿಗೆ ಹೋಗುವ ಆಸೆಯಾಗಿದೆ, ನನ್ನ ತಾಯಿ – ತಂದೆಯನ್ನು ನೋಡಬೇಕು. ಈಗ ಅವರು ಅಲ್ಲಿ ಹೇಗಿದ್ದಾರೋ ತಿಳಿಯದು' ತನ್ನ ಮನಸ್ಸಿನ ಮಾತನ್ನು ಹೇಳಿದ.

ಇದರಿಂದ ಮಿಸಾಕಿಗೆ ದುಃಖವಾಯಿತು. ಉರೋಷಿಮಾ ಹಳ್ಳಿಗೆ ಹೊರಡಲು ಸಿದ್ಧನಾದ. ಆಮೆ ಅವನಲ್ಲಿಗೆ ಬಂದು 'ಉರೋಷಿಮಾ! ನೀನೇನು ಹೆದರಬೇಡ, ನಾನು ನಿನ್ನನ್ನು ನಿನ್ನ ಹಳ್ಳಿಗೆ ಕರೆದುಕೊಂಡು ಹೋಗಿ ಬಿಡುತ್ತೇನೆ' ಎಂದು ಹೇಳಿತು.

ಉರೋಷಿಮಾ ಹೊರಟು ನಿಂತಾಗ ಮಿಸಾಕಿ ಅವನ ಕೈಗೆ ಒಂದು ಡಬ್ಬಿಯನ್ನು ಕೊಟ್ಟು 'ಇದು ನನ್ನ ಕೊಡುಗೆ. ತುಂಬ ಬೆಲೆ ಬಾಳುವಂತಹ ಈ ಡಬ್ಬಿಯನ್ನು ಎಂಥದೇ ಪರಿಸ್ಥಿತಿಯಲ್ಲೂ ತೆರೆದು ನೋಡಬಾರದು. ನಿನಗೆ ಒಳ್ಳೆಯದಾಗಲಿ' ಎಂದು ಅವನನ್ನು ಬೀಳ್ಕೊಟ್ಟಳು. ಆಮೆ ಅವನನ್ನು ತನ್ನ ಹೆಗಲ ಮೇಲೆ ಕೂಡಿಸಿಕೊಂಡು ಸಮುದ್ರದ ದಂಡೆಗೆ ಕರೆತಂದು ಬಿಟ್ಟಿತು. ಉರೋಷಿಮಾ ಆಮೆಗೆ ವಂದನೆ ಸಲ್ಲಿಸಿ ಹಳ್ಳಿಯ ಕಡೆ ನಡೆದನು.

ಉರೋಷಿಮಾ ಮಿದುನೋ ಹಳ್ಳಿಯನ್ನು ಪ್ರವೇಶಿಸಿದ. ಹಳ್ಳಿ ಅವನು ಊಹಿಸದಷ್ಟು ಬದಲಾವಣೆ ಹೊಂದಿತ್ತು. ಅವನಿಗೆ ತನ್ನ ಮನೆಯನ್ನು ಹುಡುಕುವುದೇ ಕಷ್ಟವಾಯಿತು. ಪ್ರಯಾಸದಿಂದ ತನ್ನ ಮನೆಯನ್ನು ಗುರುತಿಸಿ ಬಾಗಿಲ ಬಳಿ ನಿಂತು ತನ್ನ ತಂದೆ ತಾಯಿಯನ್ನು ಕೂಗಿದ. ಆದರೆ ಏನೊಂದೂ

ಉತ್ತರ ಬರಲಿಲ್ಲ. ಸ್ವಲ್ಪ ಸಮಯ ಕಳೆದ ಮೇಲೆ ಒಳಗಿನಿಂದ ಮುದುಕಿಯೊಬ್ಬಳು ಹೊರಗೆ ಬಂದಳು. ಅವಳ ಮೈ ಸುಕ್ಕುಗಟ್ಟಿ ಬೆನ್ನು ಬಾಗಿತ್ತು. ಕಣ್ಣು ಸರಿಯಾಗಿ ಕಾಣಿಸುತ್ತಿರಲಿಲ್ಲ.

'ನನ್ನ ಹೆಸರು ಉರೋಷಿಮಾ. ಇಲ್ಲಿ ನನ್ನ ತಾಯಿ ತಂದೆ ಇದ್ದರು. ಅವರೆಲ್ಲಿ? ನಾನು ಅವರನ್ನು ನೋಡಬೇಕು' ಎಂದು ಹೇಳಿದ.

'ಇದೇ ಮೊದಲು ಈ ಹಳ್ಳಿಯಲ್ಲಿ ನಾನು ಉರೋಷಿಮಾ ಹೆಸರನ್ನು ಕೇಳುತ್ತಿರುವುದು. ಇಲ್ಲಿ ನಿನ್ನವರು ಯಾರೂ ಇಲ್ಲ' ಮುದುಕಿ ತಲೆಯಾಡಿಸಿದಳು. ಉರೋಷಿಮಾನಿಗೆ ಇದರಿಂದ ನಿರಾಸೆ ಆಯಿತು. 'ಇದು ನನ್ನ ಮನೆ, ಚೆನ್ನಾಗಿ ನೆನಪಿದೆ. ನಾವೆಲ್ಲರೂ ವಾಸಿಸುತ್ತಿದ್ದುದು ಇಲ್ಲೇ.' ಅವನು ಆತಂಕದಿಂದ ಹೇಳಿದ.

ಅದನ್ನು ಕೇಳಿ ಮುದುಕಿ ಒಂದು ಕ್ಷಣ ಯೋಚಿಸಿದಳು. 'ಹೌದು ಈಗ ಉರೋಷಿಮಾನ ಕಥೆ ನೆನಪಾಗುತ್ತಿದೆ. ಹಳ್ಳಿ ಹಿರಿಯರು ಅವನ ಕಥೆಯನ್ನು ತುಂಬಾ ಸ್ವಾರಸ್ಯವಾಗಿ ಹೇಳುತ್ತಾರೆ. ಉರೋಷಿಮಾ ಎಂಬ ಹುಡುಗನನ್ನು ಸಮುದ್ರರಾಜನ ಮಗಳು ಮಂಕುಬೂದಿ ಎರಚಿ ತನ್ನ ಲೋಕಕ್ಕೆ ಕರೆದುಕೊಂಡು ಹೋದಳೆಂದು ಇಲ್ಲಿಯ ಜನರು ಮಾತನಾಡಿಕೊಳ್ಳುತ್ತಾರೆ. ಆದರೆ ಆ ಕಥೆ ನಡೆದು ಮೂರು ತಲೆಮಾರು ಕಳೆದಿದೆ. ಈಗ ನೀನು ಮುನ್ನೂರು ವರ್ಷಗಳ ನಂತರ ಉರೋಷಿಮಾ ನಾನು ಎಂದು ಹೇಳಿಕೊಂಡು ಬಂದಿದ್ದೀಯೆ, ತುಂಬ ಆಶ್ಚರ್ಯ ಎಂದಳು.

ಉರೋಷಿಮಾಗೆ ಅವಳ ಮಾತು ಕೇಳಿ ಅಚ್ಚರಿಯಾಯಿತು. ತಾನಿನ್ನೂ ಯುವಕ. ಮುದುಕಿ ಆಗಲೆ ಮುನ್ನೂರು ವರ್ಷ ಕಳೆದಿದೆ ಎನ್ನುತ್ತಾಳೆ. ಎಂಥ ವಿಚಿತ್ರ! ಎಂದು ಯೋಚಿಸಿದ.

ಆವನಿಗೆ ಮಿಸಾಕಿ ಕೊಟ್ಟಿದ್ದ ಡಬ್ಬಿಯ ನೆನಪಾಯಿತು. ಡಬ್ಬಿ ತೆರೆಯ ಕೂಡದು ಎಂದು ಎಚ್ಚರಿಕೆ ನೀಡಿದ್ದಾಳೆ ಮಿಸಾಕಿ. ಆದರೂ, ತೆರೆದರೆ ಏನಾದರೂ ಸಹಾಯವಾಗಬಹುದು ಎಂದು ಉರೋಷಿಮಾ ಡಬ್ಬಿಯ ಮುಚ್ಚಳವನ್ನು ತೆರೆದನು. ಅದನ್ನು ತೆರೆದುದೇ ತಡ ಉರೋಷಿಮಾ ವೃದ್ಧನಾಗಿ ಬಿಟ್ಟಿದ್ದ.

ತಲೆಗೂದಲು ಬಿಳುಪಾಗಿ, ಹಲ್ಲುಗಳು ಮಾಯವಾಗಿದ್ದುವು. ಸೊಂಟ ಬಗ್ಗಿ ಮುಖ ಸುಕ್ಕುಗಟ್ಟಿತ್ತು. ಏಳಲು ಆಗದಂಥ ನಿತ್ರಾಣ ಅವನನ್ನು ಕಾಡುತ್ತಿತ್ತು.

ಸಮುದ್ರರಾಜನ ಮಗಳು ಮುನ್ನೂರು ವರ್ಷಗಳನ್ನು ಆ ಡಬ್ಬಿಯಲ್ಲಿ ಅಡಗಿಸಿದ್ದಳೆಂದು ಈಗ ಅವನಿಗೆ ತಿಳಿಯಿತು. ಅದನ್ನು ತೆರೆಯುತ್ತಲೇ ಅವನು ಮುದುಕನಾಗಿದ್ದ. ಅವನಿಗೆ ತಾನು ಮಾಡಿದ ಒಂದು ಉಪಕಾರದಿಂದಾಗಿ ಮುನ್ನೂರು ವರ್ಷಗಳ ಕಾಲ ಯುವಕನಾಗಿ ಬಾಳುವಂತಾಯಿತಲ್ಲ ಎಂಬ ತೃಪ್ತಿಯಾಯಿತು. ಅವನು ಸಂತೋಷದಿಂದ ಮರಣ ಹೊಂದಿದ.

ಎಷ್ಟೋ ರಾತ್ರಿಗಳು ಆಮೆ ಸಮುದ್ರದ ಹೊರಗೆ ಬಂದು ದಂಡೆಯ ಮೇಲೆ ಕುಳಿತು ಉರೋಷಿಮನಿಗಾಗಿ ಕಣ್ಣೀರು ಸುರಿಸುತ್ತಿರುತ್ತದೆಂದು ಅಲ್ಲಿಯ ಜನರು ಈಗಲೂ ಹೇಳುತ್ತಾರೆ. ಪಾಪ, ಉರೋಷಿಮಾ ಸಮುದ್ರರಾಜನ ಮಗಳ ಎಚ್ಚರಿಕೆಯ ಮಾತು ಕೇಳದೆ ಅಸುನೀಗಿದ.

## ಚಟುವಟಿಕೆಗಳು

### ❑ ಚರ್ಚಿಸಿರಿ

'ಆಪತ್ತಿನಲ್ಲಿರುವವರನ್ನು ರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯ. ನಾನು ನನ್ನ ಕರ್ತವ್ಯವನ್ನು ಮಾಡಿದ್ದೇನೆ ಅಷ್ಟೇ' ಉರೋಷಿಮಾನ ಈ ಮಾತುಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?

### ❑ ಉತ್ತರಿಸಿರಿ

- ಸಮುದ್ರದಿಂದ ಮನೆಗೆ ಹಿಂತಿರುಗುತ್ತಿದ್ದ ಉರೋಷಿಮಾ ಕಂಡ ದೃಶ್ಯವೇನು?
- ಉರೋಷಿಮಾ ಮಿಸಾಕಿಯ ಲೋಕಕ್ಕೆ ತಲುಪಿದ್ದು ಹೇಗೆ?
- ಮಿಸಾಕಿ ಉರೋಷಿಮಾನಿಗೆ ತೋರಿಸಿದ ಕೊಠಡಿಯ ವಿಶೇಷತೆ ಏನು?
- ಮಿದುನೋ ಹಳ್ಳಿಗೆ ಹಿಂತಿರುಗಿ ಬಂದ ಉರೋಷಿಮಾನಿಗೆ ಆದ ಅನುಭವವೇನು?
- ಉರೋಷಿಮಾ ಮಿಸಾಕಿ ಕೊಟ್ಟ ಡಬ್ಬಿಯನ್ನು ತೆರೆದ ಕೂಡಲೇ ವೃದ್ಧನಾಗಲು ಕಾರಣವೇನು?

## ❑ ಸರಳ ವಾಕ್ಯಗಳಾಗಿ ಬರೆಯಿರಿ

ಉರೋಷಿಮಾ ಹೊರಟು ನಿಂತಾಗ ಮಿಸಾಕಿ ಅವನ ಕೈಗೆ ಒಂದು ಡಬ್ಬಿಯನ್ನು ಕೊಟ್ಟಳು.

ಇದೊಂದು 'ಸಂಯುಕ್ತವಾಕ್ಯ'ವಾಗಿದೆ. ಈ ವಾಕ್ಯವನ್ನು 'ಸರಳವಾಕ್ಯ'ಗಳಾಗಿ ಈ ರೀತಿ ಬರೆಯಬಹುದು.

ಉರೋಷಿಮಾ ಹೊರಟು ನಿಂತನು. ಆಗ ಮಿಸಾಕಿ ಅವನ ಕೈಗೆ ಒಂದು ಡಬ್ಬಿಯನ್ನು ಕೊಟ್ಟಳು.

**ಇದೇ ರೀತಿಯಲ್ಲಿ ಕೆಳಗಿನ ವಾಕ್ಯಗಳನ್ನು 'ಸರಳವಾಕ್ಯ'ಗಳಾಗಿ ಬರೆಯಿರಿ.**

- ಉರೋಷಿಮಾ ಅಪೂರ್ವ ಲಾವಣ್ಯದಿಂದ ಕಂಗೊಳಿಸುತ್ತಿದ್ದ ಮಿಸಾಕಿಯನ್ನು ಕಂಡು ನಮ್ರನಾಗಿ ಕೈಜೋಡಿಸಿ ನಮಸ್ಕರಿಸಿದನು.
- ಮರಗಿಡಗಳಿಗೆ ನೀರು ಹರಿದು ಅವು ಸುಂದರವಾಗಿ ಕಂಗೊಳಿಸುತ್ತಿದ್ದವು.
- ಉರೋಷಿಮಾ ಪ್ರಯಾಸದಿಂದ ತನ್ನ ಮನೆಯನ್ನು ಗುರುತಿಸಿ ಬಾಗಿಲ ಬಳಿ ನಿಂತು ತನ್ನ ತಂದೆ ತಾಯಿಯನ್ನು ಕೂಗಿದನು.

## ❑ ಕಥೆ ಮುಂದುವರಿಸಿರಿ

ರಾಜಕುಮಾರಿಯ ಮಾತಿನಂತೆ ಉರೋಷಿಮಾ ಡಬ್ಬಿಯ ಮುಚ್ಚಳ ತೆರೆಯದೇ ಇರುತ್ತಿದ್ದರೆ ಏನಾಗುತ್ತಿತ್ತು?

ಊಹಿಸಿ ಕಥೆಯನ್ನು ಮುಂದುವರಿಸಿ.

## ❑ ಪದ ಹುಡುಕಿರಿ

- ಉದಾಹರಣೆಗಳನ್ನು ಗಮನಿಸಿರಿ. ಕೊಟ್ಟಿರುವ ಸೂಚನೆಗಳಿಗೆ ಹೊಂದಿಕೆಯಾಗುವ ಪದಗಳನ್ನು ಪಾಠಭಾಗದಿಂದ ಹುಡುಕಿ ಬರೆಯಿರಿ.

  ಉದಾ:○ ನಯವಾದ ನಮ್ರತೆ – ವಿನಯ

  ○ ಬದಲಾದ ವ್ಯತ್ಯಾಸ – ಬದಲಾವಣೆ
- ಹಸ್ತವಿರುವ ಈತ ಮೀನುಹಿಡಿದು ಜೀವಿಸುವನು.
- ಆತನು ಪಕ್ಷಿಯನ್ನು ಹೇಗೆ ಕಾಪಾಡಿದ ನೋಡಿ
- ಬೇಟೆಯಲ್ಲ; ಸಂದರ್ಶನ.
- ಲೋಕಕ್ಕೆ ಯಾಕಿಷ್ಟು ಗತ್ತು.
- ಆ ಪೂರ್ವದಿಕ್ಕನ್ನು ಹಿಂದೆಂದೂ ಕಂಡಿಲ್ಲವೇ?
- ಬಹಳಷ್ಟು ಜನರಿದ್ದರೂ ಊಟಮಾತ್ರ ಸೊಗಸಾಗಿತ್ತು.
- ಈ ಚಿತ್ರವನ್ನು ನೋಡಿ ಬಹಳ ಆಶ್ಚರ್ಯಕರವಾಗಿದೆ!
- ಸೂಕ್ಷ್ಮದೃಷ್ಟಿಯಿರುವ ಆತ ಭಾಗ್ಯವಂತನೇ ಸರಿ.
- ಪ್ರವಾಸ ಮಾಡಲೂ ಯಾಕಿಷ್ಟು ಕಷ್ಟ?
- ನೂರು ಮೂರು ಸಲ
- ಜೀವವಂಬ ಹಕ್ಕಿಯೇ?
- ಬರಿದೆ ಹೆದರ ಬೇಡ.

# ಕಥಕಳಿ

'ಕಲೆ'ಯ 'ಬಲೆ'ಗೆ ಬೀಳದವರು ಯಾರು? ಪ್ರತಿಯೊಬ್ಬರೂ ಒಂದಲ್ಲ ಒಂದು ಕಲೆಗೆ ಮಾರು ಹೋಗುವವರೇ. ಕಲೆಗಳು ನಮ್ಮ ಸಂಸ್ಕೃತಿಯನ್ನು ಶ್ರೀಮಂತಗೊಳಿಸುತ್ತವೆ. ಅವನ್ನು ಗೌರವಿಸಿ ಪೋಷಿಸುವುದು ನಮ್ಮೆಲ್ಲರ ಜವಾಬ್ದಾರಿ.



'ಕಥಕಳಿ'ಯು ಕೇರಳದ ಅತಿ ಪ್ರಸಿದ್ಧವಾದ ಒಂದು ಕಲೆಯಾಗಿದೆ. ಇದು ಕೇರಳದ ಇತರ ಜನಪದ ಕಲೆಗಳಾದ ಮೋಹಿನಿಯಾಟ್ಟಂ, ಚಾಕ್ಯಾರ್‌ಕೂತ್ತ್, ಕೂಡಿಯಾಟ್ಟಂ ಮುಂತಾದುವುಗಳಿಂದ ಸಾಕಷ್ಟು ಪ್ರಭಾವಿತವಾಗಿದೆ. ಕಥಕಳಿಯು ಅಭಿನಯ ಪ್ರಧಾನವಾದ ಕಲೆ. ಪ್ರಸಿದ್ಧವಾದ ಪುರಾಣ ಕಥೆಗಳೇ ಇಲ್ಲಿನ ವಸ್ತು. ಸಮಗ್ರ ಕಥೆಯು ಶ್ಲೋಕ ಮತ್ತು ಹಾಡುಗಳ ರೂಪದಲ್ಲಿರುತ್ತದೆ. ಹಾಡುಗಳ ಅರ್ಥವನ್ನು ಕೇವಲ ಅಭಿನಯದಿಂದಲೇ ವ್ಯಕ್ತಪಡಿಸುವುದು ಕಥಕಳಿಯ ವೈಶಿಷ್ಟ್ಯವಾಗಿದೆ. ಕಥಕಳಿಯಲ್ಲಿ ಸಂಭಾಷಣೆ ಇಲ್ಲ, ಮಾತುಗಾರಿಕೆಯೂ ಇಲ್ಲ.

ಕಥಕಳಿಯ ಪ್ರಾರಂಭದ ರೂಪವನ್ನು ರಾಮನಾಟ್ಟಂ ಎಂದು ಕರೆಯುತ್ತಿದ್ದರು. ಅದಕ್ಕಿಂತ ಮೊದಲು ಕೃಷ್ಣನಾಟ್ಟಂ ಎಂಬ ಒಂದು ಕಲಾಪ್ರಕಾರ ಇದ್ದಿತು. ಅದನ್ನು ಕೇರಳದ ಕೋಝಿಕ್ಕೋಡಿನ ಸಾಮೂದಿರಿ ರಾಜ ಮಾನದೇವನು ರೂಪಿಸಿದನು. ಈ ಕಲೆಯನ್ನು ದೇವಸ್ಥಾನಗಳ ಕೂತ್ತಂಬಲಗಳಲ್ಲಿ ಪ್ರದರ್ಶಿಸುತ್ತಿದ್ದರು. ಇದಕ್ಕೆ ಸಮಾನಾಂತರವಾಗಿ ಕೊಟ್ಟಾರಕ್ಕರ ರಾಜನು ರೂಪಿಸಿದ ರಾಮನಾಟ್ಟಂ ಎಂಬುದೇ ಪರಿಷ್ಕೃತಗೊಂಡು ಮುಂದೆ ಕಥಕಳಿ ಎಂಬ ಹೊಸ ಹೆಸರಿನಿಂದ ಶೋಭಿಸತೊಡಗಿತು.



ರಾಮನಾಟ್ಟದ ಪರಿಷ್ಕರಣ ಕಾರ್ಯವು ಮುಖ್ಯವಾಗಿ ಮೂವರು ಕಲಾಭಿಜ್ಞರಿಂದ ನಡೆಯಿತು. ವೆಟ್ಟತ್ತುರಾಜ, ಕಪ್ಲಿಂಗಾಟು ನಂಬೂದಿರಿ ಮತ್ತು ಕಲ್ಲಡಿಕೋಟ್ಟು ನಂಬೂದಿರಿ – ಇವರೇ ಆ ಮಹನೀಯರು. ಕಥಕಳಿ ಪ್ರದರ್ಶನದ

ಆರಂಭಕಾಲದಲ್ಲಿ ನಟರೇ ಹಾಡುತ್ತಿದ್ದರು. ಅದನ್ನು ನಿಲ್ಲಿಸಿ ಭಾಗವತರು ಹಾಡುವಂತೆ ಮಾಡಿದವನು ವೆಟ್ಟತ್ತುರಾಜ. ಬಣ್ಣಗಾರಿಕೆ, ಸೂಕ್ತವಾದ ವೇಷವಿಧಾನ ಮತ್ತು ಕಿರೀಟಗಳನ್ನು ರೂಪಿಸಿದವನು ಅವನೇ. ಹಾಡುಗಳಿಗೆ ತಕ್ಕುದಾದ ಹಸ್ತಮುದ್ರೆಗಳನ್ನು ಸಂಕೇತಿಸಿದವನು ಕಪ್ಲಿಂಗಾಟು ನಂಬೂದಿರಿ. ಕಿರೀಟದ ಹಿಂಬದಿಯ ಇಳಿಗೂದಲು, ಮುಖಕ್ಕೆ ಚುಟ್ಟಿ ಅಂಟಿಸುವುದು, ಕಾಲಿಗೆ ಗೆಜ್ಜೆ ಕಟ್ಟುವುದು – ಇವೆಲ್ಲವೂ ಅವನೇ ಮಾಡಿದ ಸುಧಾರಣೆಗಳಾಗಿವೆ.

ಕಲ್ಲಡಿಕೋಟ್ಟು ನಂಬೂದಿರಿಯು ಅಭಿನಯದ ರೀತಿ ನಿಯಮಗಳನ್ನು ನಾಟ್ಯಶಾಸ್ತ್ರಕ್ಕೆ ಅನುಗುಣವಾಗಿ ತಿದ್ದಿದನು. ಹಾಡಲು ಇಬ್ಬರು ಭಾಗವತರು ಎಂಬ ಕ್ರಮವನ್ನು ಅವನು ರೂಪಿಸಿದನಲ್ಲದೆ, ಪ್ರಧಾನ ಭಾಗವತನಿಗೆ 'ಪೊನ್ನಾನಿ' ಎಂದೂ ಉಪಭಾಗವತನಿಗೆ 'ಶಂಗಿಡಿ' ಎಂದೂ ಹೆಸರಿಟ್ಟನು.



ರಾಮನಾಟ್ಟಕ್ಕೆ ಕಥಕಳಿಯೆಂಬ ಹೆಸರು ಬರುವ ಮೊದಲೇ ಈ ಪರಿಷ್ಕಾರಗಳು ಆಗಿದ್ದುವು. ಕಾಲಾನು ಕ್ರಮದಲ್ಲಿ ಕಥಕಳಿಗೆ ಮತ್ತಷ್ಟು ಪರಿಷ್ಕಾರಗಳು ಸೇರಿಕೊಂಡುವು. ಅವುಗಳಲ್ಲಿ ಮುಖ್ಯವಾದುದು ಕಥಕಳಿಯ 'ಪೂರ್ವರಂಗ' ಸಂಪ್ರದಾಯ. ಇದನ್ನು ರೂಪಿಸಿದವನು ಕೋಟ್ಟಯತ್ತು ತಂಬುರಾನ್. ಕಥಕಳಿಯ ಪೂರ್ವರಂಗದಲ್ಲಿ ಅನುಕ್ರಮವಾಗಿ ಶುದ್ಧ ಮದ್ದಳಂ, ತೋಡಯಂ, ಮಂಗಳಶ್ಲೋಕಂ, ಪುರಪ್ಪಾಡು, ನಿಲಪ್ಪದಂ, ಮೇಳಪ್ಪದಂ ಎಂಬ ಆರು ಹಂತಗಳಿವೆ.

ಕಥಕಳಿಯ ಪ್ರದರ್ಶನದ ಅಂಗವಾಗಿ, ಮೊದಲು ರಂಗಭೂಮಿಯಲ್ಲಿ ದೊಡ್ಡದಾದ ಒಂದು ಎಣ್ಣೆ ದೀಪವನ್ನು ಉರಿಸಿಡುತ್ತಾರೆ. ಇದಕ್ಕೆ ಆಟ್ಟವಿಳಕ್ಕು ಎಂದು ಹೆಸರು. ಅಟ್ಟವಿಳಕ್ಕು ಹಚ್ಚಿ ಇಟ್ಟಿತೆಂದರೆ ಕಾರ್ಯಕ್ರಮ ಆರಂಭವಾಯಿತು ಎಂದು ಅರ್ಥ. ತರುವಾಯ ಮದ್ದಳೆ ಚಕ್ರತಾಳ, ಜಾಗಟೆಗಳನ್ನು ಸುಶ್ರಾವ್ಯವಾಗಿ ಬಾರಿಸುತ್ತಾರೆ. ಇದಕ್ಕೆ 'ಶುದ್ಧಮದ್ದಳಂ' ಎಂದು ಹೆಸರಾಯಿತು.

ಮುಂದಿನ ಕಾರ್ಯಕ್ರಮಕ್ಕೆ 'ತೋಡಯಂ' ಎಂದು ಹೆಸರು. ಇದು ಕಾರ್ಯಕ್ರಮಕ್ಕೆ ಶುಭವನ್ನು ಹಾರೈಸಿ ನಡೆಸುವ ನಾಂದಿಯಾಗಿದೆ. ತೋಡಯಂ ಗಾನ ಆರಂಭವಾದೊಡನೆಯೆ ಇಬ್ಬರು ಬಾಲಕರು ಬಂದು ತೆರೆಯ ಹಿಂದೆ



ನಿಂತು ಕುಣಿಯುತ್ತಾರೆ. ಅನಂತರ 'ಮಂಗಳಶ್ಲೋಕಂ' ಹಾಡುತ್ತಾರೆ ಬಳಿಕ ಪುರಪ್ಪಾಡು ಕಾರ್ಯಕ್ರಮ ಆರಂಭವಾಗುತ್ತದೆ. ಇಲ್ಲಿ ಪ್ರಧಾನವೇಷದ ರಂಗಪವೇಶ ನಡೆಯುತ್ತದೆ. ಚೆಂಡೆವಾದನ ಪ್ರಾರಂಭವಾಗುವುದೂ ಇದೇ ಸಂದರ್ಭದಲ್ಲಿ. ಇಲ್ಲಿ ವೇಷದ ನೇತ್ರಾಭಿನಯಕ್ಕೆ ಮಾತ್ರ ಪ್ರಾಧಾನ್ಯ.

ಮುಂದಿನ ಹಂತವೇ ನಿಲಪ್ಪದಂ. ಈ ಹಂತದಲ್ಲಿ 'ದೇವ ದೇವ ಹರೇ ಕೃಪಾಲಯ' ಎಂಬ ಹಾಡನ್ನು ಹಾಡುತ್ತಾರೆ. ಈ ಸಂದರ್ಭದಲ್ಲಿ ಪಾತ್ರಧಾರಿಗಳು ನೇತ್ರಾಭಿನಯದೊಂದಿಗೆ

ಹಸ್ತಮುದ್ರೆಗಳನ್ನು ಪ್ರದರ್ಶಿಸಿ ಕುಣಿಯುತ್ತಾರೆ.



ಕಥಕಳಿಯ ಪೂರ್ವರಂಗದ ಕೊನೆಯ ಘಟ್ಟವೇ 'ಮೇಳಪ್ಪದಂ'. ಜಯದೇವ ಕವಿಯ 'ಮಂಜುತರ ಕುಂಜಲತಾ ಕೇಳೀಸದನೇ' ಎಂಬ ಗೀತಗೋವಿಂದದ ಹಾಡನ್ನು ಹಾಡುತ್ತಾರೆ. ಈ ಹಾಡಿನ ಪಲ್ಲವಿ ಮುಗಿದೊಡನೆ ಪುರಪ್ಪಾಡು ವೇಷಗಳು ಮರೆಯಾಗುತ್ತವೆ. ಮುಂದೆ ಚೆಂಡೆ ಮದ್ದಳೆ, ಚಕ್ರತಾಳ, ಜಾಗಟೆಗಳ ಅಬ್ಬರದ ಸನ್ನಿವೇಶ.

ಇದಾದ ಮೇಲೆ ಕಥೆ ಪ್ರಾರಂಭವಾಗುತ್ತದೆ. ಕಥೆಯನ್ನು ವಿವರಿಸುವ ಹಾಡುಗಳಿಗೆ 'ಆಟ್ಟಕಥಾ ಸಹಿತ್ಯ' ಎಂದು ಹೆಸರು. ರಾಮಾಯಣ ಮಹಾಭಾರತ ಭಾಗವತಗಳ ವಿವಿಧ ಸನ್ನಿವೇಶಗಳನ್ನು ಆಟ್ಟಕಥಾ ಸಾಹಿತ್ಯವು ಒಳಗೊಂಡಿರುತ್ತದೆ.

ಕಥಕಳಿಯ ವೇಷಗಳನ್ನು ಪಚ್ಚ, ಕತ್ತಿ, ತಾಡಿ, ಕರಿ, ಮಿನುಕ್ಕು ಎಂದು ಐದು ವಿಧವಾಗಿ ವಿಂಗಡಿಸಲಾಗುತ್ತದೆ. ಸಾತ್ವಿಕ ಗುಣವುಳ್ಳ ಪಾತ್ರಗಳು ಪಚ್ಚವೇಷ ವರ್ಗಕ್ಕೆ ಸೇರಿದವುಗಳು. ಈ ವೇಷಗಳ ಮುಖಕ್ಕೆ ಹಸುರು ಬಣ್ಣವನ್ನು ಬಳಿಯುತ್ತಾರೆ. ಇಬ್ಬದಿಯ ಕಪೋಲಗಳ ಅಂಚಿನಲ್ಲಿಯೂ ಅರ್ಧಚಂದ್ರಾಕೃತಿಯಲ್ಲಿ ಚುಟ್ಟಿಯನ್ನು ಇಡುತ್ತಾರೆ. ಅಕ್ಕಿಹುಡಿ ಮತ್ತು ಸುಣ್ಣವನ್ನು ಮಿಶ್ರಮಾಡಿ ಕಲಸಿ ಈ ಚುಟ್ಟಿಯನ್ನು ತಯಾರಿಸುತ್ತಾರೆ.

ರಾವಣ, ನರಕಾಸುರ, ಕೌರವರಂತಹ ಪಾತ್ರಗಳು ಕತ್ತಿವೇಷದ ಸಾಲಿಗೆ ಸೇರುತ್ತವೆ. ಮೂಗಿನ ಇಬ್ಬದಿಗಳಲ್ಲಿಯೂ ಕತ್ತಿಯ ಆಕಾರದಲ್ಲಿ ಬಳಿಯುವ ಒಂದು ರೀತಿಯ ಬಣ್ಣಗಾರಿಕೆಯೇ ಆ ವೇಷಗಳ ವೈಶಿಷ್ಟ್ಯ.

ತಾಡಿವೇಷ ಎಂದರೆ ಗಡ್ಡವನ್ನು ಇಟ್ಟು ರೂಪಿಸಿದ ವೇಷ ಎಂದು ಅರ್ಥ. ತಾಡಿ ವೇಷದಲ್ಲಿ ಚುವನ್ನ (ಕೆಂಪು) ತಾಡಿ, ಕರುತ್ತ (ಕಪ್ಪು) ತಾಡಿ, ವೆಳ್ಳ (ಬಿಳಿ) ತಾಡಿ ಎಂಬ ಮೂರು ವಿಧಗಳಿವೆ. ವಾಲಿ, ಸುಗ್ರೀವ, ವೀರಭದ್ರ ಮುಂತಾದ ಪಾತ್ರಗಳು ಚುವನ್ನ ತಾಡಿ ಗುಂಪಿಗೆ ಸೇರುತ್ತವೆ. ಈ ವೇಷಗಳ ಕಣ್ಣಿನ ಸುತ್ತಲೂ ಕಪ್ಪು ಬಣ್ಣವನ್ನು ಹಾಗೂ ಅದರ ಕೆಳಗೆ ಕೆಂಪು ಬಣ್ಣವನ್ನು ಹಚ್ಚುತ್ತಾರೆ. ಕಲಿ, ಶಕುನಿ ಮುಂತಾದುವುಗಳು. ಕರುತ್ತ ತಾಡಿ ವರ್ಗಕ್ಕೆ ಸೇರಿದವುಗಳು ವನಪಾಲಕ, ಹನುಮಂತ ಮುಂತಾದ ಪಾತ್ರಗಳು ವೆಳ್ಳತ್ತಾಡಿ ಗುಂಪಿಗೆ ಸೇರುತ್ತವೆ. ಇವು ಧರಿಸುವ ಕಿರೀಟಗಳು ಉರುಟಾಗಿರುತ್ತವೆ.



ರಕ್ಕಸಿಯರ ವೇಷಗಳನ್ನು ಕರಿವೇಷ ಎನ್ನುತ್ತಾರೆ. ಶೂರ್ಪಣಖಿ, ಪೂತನಿ ಇತ್ಯಾದಿ ವೇಷಗಳು ಈ ಗುಂಪಿಗೆ ಸೇರುತ್ತವೆ. ಆ ಪಾತ್ರಗಳ ಮುಖವರ್ಣಿಕೆ ಮತ್ತು ಪೋಷಾಕುಗಳು ಕಪ್ಪು ಬಣ್ಣದಿಂದ ಕೂಡಿರುತ್ತವೆ. ಈ ಸ್ತ್ರೀವೇಷಗಳ ಕುಣಿತಕ್ಕೆ ಚೆಂಡೆ ಬಾರಿಸಲಾಗುತ್ತದೆ.

ನಸುಗೆಂಪು ಮತ್ತು ಹಳದಿ ಮಿಶ್ರಿತ ಅರದಾಳ ವನ್ನು ಮುಖಕ್ಕೆ ಹಚ್ಚಿದ ವೇಷಗಳಿಗೆ 'ಮಿನುಕ್ಕು ವೇಷ' ಗಳೆಂದು ಹೆಸರು. ನಾರದ, ಬ್ರಾಹ್ಮಣ, ಋಷಿ, ದೂತ ಹಾಗೂ ಸಾಮಾನ್ಯ ಸ್ತ್ರೀವೇಷಗಳು ಈ ವಿಭಾಗಕ್ಕೆ ಒಳಪಡುತ್ತವೆ. ಮಿನುಕ್ಕು ವೇಷಗಳ ಮುಖಕ್ಕೆ 'ಜಿಗ್ ಜಿಗ್ ಪುಡಿ' ಯನ್ನು ಚೆಲ್ಲಿ, ಮುಖವು ಪಳಪಳನೆ ಹೊಳೆಯುವಂತೆ ಮಾಡುತ್ತಾರೆ.

ಹೀಗೆ ಬಣ್ಣಗಾರಿಕೆ, ವೇಷವಿಧಾನ, ಹಾಡುಗಾರಿಕೆ, ಹಿಮ್ಮೇಳ, ಹಸ್ತಮುದ್ರೆ ಮುಂತಾದ ವಿವಿಧ ಅಂಶಗಳಲ್ಲಿ ಹೊಸತನವನ್ನೂ, ಸ್ವಂತಿಕೆಯನ್ನೂ ಒಳಗೊಂಡ ಕಥಕಳಿಯು ಕೇರಳದ ಒಂದು ಹೆಮ್ಮೆಯ ಕಲೆಯಾಗಿದೆ.

**ಚಟುವಟಿಕೆಗಳು**

- ಉತ್ತರಿಸಿರಿ
  - ಕಥಕಳಿಯ ಪ್ರಧಾನ ವಿಶೇಷತೆಗಳೇನು?
  - 'ಆಟ್ಟವಿಳಕ್ಕು' ಎಂದರೇನು?
  - ಕಥಕಳಿ ವೇಷದ ಐದು ವಿಧಗಳು ಯಾವುವು?
  - 'ತಾಡಿವೇಷ'ದ ವಿಶೇಷತೆಗಳೇನು?
  - ಮಿನುಕ್ಕುವೇಷ ಮತ್ತು ಕರಿ ವೇಷಗಳೊಳಗಿನ ವ್ಯತ್ಯಾಸಗಳೇನು?
  - ಆಟ್ಟಕಥಾ ಸಾಹಿತ್ಯ ಎಂದರೇನು?

- ಪದ ಹುಡುಕಿರಿ

ಕೆಳಗೆ ಅಸ್ತವ್ಯಸ್ತ ಅಕ್ಷರಗಳಿಂದ ಕೂಡಿದ ಪದಗಳಿವೆ. ಪಾಠಭಾಗದ ಸಹಾಯದಿಂದ ಅಕ್ಷರಗಳನ್ನು ಕ್ರಮೀಕರಿಸಿ ಪದಗಳನ್ನು ಸರಿಪಡಿಸಿ ಬರೆಯಿರಿ.

  - ರಂಮಿಭೂಗ
  - ಕಾಕ್ರಮರ್ಯ
  - ಮದ್ಧದ್ದಳುಳಂ
  - ಚಳತಾಕ್ರ
  - ಅಕ್ಕಚಂತಿರ್ಥದ್ರಾ
  - ಖಕೆವರ್ಣಿಮು
  - ಗೆಂನಪುಸು
  - ಸ್ತದ್ರೆಮುಹ
  - ಗೋಗೀದವಿಂತ
  - ಗಳಮಂಕಂಶ್ಲೋ

- ಕಥೆ ಬರೆಯಿರಿ

ನೀವು ಯಾವುದಾದರೊಂದು ಕಥಕಳಿಯ ಪ್ರಸಂಗವನ್ನು ದೃಶ್ಯಶ್ರಾವ್ಯ ಮಾಧ್ಯಮದ ಮೂಲಕ ನೋಡಿ ಆಸ್ವಾದಿಸಿರಿ. ಬಳಿಕ ಆ ಪ್ರಸಂಗದ ಕತೆಯನ್ನು ಬರೆದು ಮಂಡಿಸಿರಿ.

- ಯಕ್ಷಗಾನ ಮತ್ತು ಕಥಕಳಿಗೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿರಿ.

- ಸಂಯುಕ್ತ ವಾಕ್ಯಗಳಾಗಿ ಬರೆಯಿರಿ
  - ಸರಳವಾಕ್ಯ ಮತ್ತು ಸಂಯುಕ್ತ ವಾಕ್ಯಗಳ ಬಗ್ಗೆ ನಿಮಗೆ ತಿಳಿದಿದೆ. ಉದಾಹರಣೆಯಲ್ಲಿ ನೀಡಿದಂತೆ ಕೆಳಗಿನ ವಾಕ್ಯಗಳನ್ನು ಸಂಯುಕ್ತ ವಾಕ್ಯಗಳಾಗಿ ಬರೆಯಿರಿ. ಕಥಕಳಿಯು ಕೇರಳದ ಪ್ರಸಿದ್ಧ ಕಲೆಯಾಗಿದೆ. ಇದು ಕೇರಳದ ಇತರ ಕಲೆಗಳಿಂದ ಸಾಕಷ್ಟು ಪ್ರಭಾವಿತವಾಗಿದೆ.
  - ಉದಾ: ಕಥಕಳಿಯು ಕೇರಳದ ಪ್ರಸಿದ್ಧವಾದ ಕಲೆಯಾಗಿದ್ದು, ಕೇರಳದ ಇತರ ಕಲೆಗಳಿಂದ ಸಾಕಷ್ಟು ಪ್ರಭಾವಿತವಾಗಿದೆ.
  - ಕಥಕಳಿಯ ಪ್ರಧಾನ ಭಾಗವತನನ್ನು ಪೊನ್ನಾನಿ ಎಂದು ಕರೆಯುತ್ತಾರೆ. ಕಥಕಳಿಯ ಉಪಭಾಗವತನನ್ನು ಶಂಗಿಡಿ ಎಂದು ಕರೆಯುತ್ತಾರೆ.
  - ರಾಮನಾಟ್ಟಂ ಕಥಕಳಿಯ ಪ್ರಾರಂಭದ ರೂಪವಾಗಿದೆ. ರಾಮನಾಟ್ಟಂ ಪರಿಷ್ಕೃತಗೊಂಡು ಕಥಕಳಿ ಎಂಬ ಹೊಸ ಹೆಸರನ್ನು ಪಡೆದುಕೊಂಡಿತು.
  - ಯಕ್ಷಗಾನ ಮತ್ತು ಕಥಕಳಿಗಳು ದೃಶ್ಯಕಲಾ ಪ್ರಕಾರಗಳಾಗಿವೆ. ಇವು ಜನಪದ ಕಲೆಯಿಂದ ಹುಟ್ಟಿ ವಿಕಾಸಗೊಂಡವುಗಳಾಗಿವೆ.
  - ಯಕ್ಷಗಾನ ಬಯಲಾಟವು ಒಂದು ರಾತ್ರಿ ಪೂರ್ತಿ ನಡೆಯುತ್ತದೆ. ಕಥಕಳಿಯು ಎರಡು ಅಥವಾ ಮೂರು ಗಂಟೆಯ ಅವಧಿಯಲ್ಲಿ ನಡೆಯುತ್ತದೆ.

- ಟಿಪ್ಪಣಿ ಬರೆಯಿರಿ

ಹಾಡುಗಾರಿಕೆ, ವೇಷಭೂಷಣ, ಅಭಿನಯ, ಹಿಮ್ಮೇಳಗಳಲ್ಲಿ ಕಥಕಳಿ ಮತ್ತು ಯಕ್ಷಗಾನಗಳಲ್ಲಿ ಸಾಮ್ಯವಿದೆಯಲ್ಲವೇ? ಹಾಗೆಯೇ ಕೆಲವು ವ್ಯತ್ಯಾಸಗಳೂ ಇವೆಯೆಂಬುದನ್ನು ನೀವು ಗಮನಿಸಿರಬಹುದು. ಇವುಗಳೊಳಗಿನ ಸಾಮ್ಯ ವ್ಯತ್ಯಾಸಗಳ ಬಗ್ಗೆ ಒಂದು ಹೋಲಿಕೆಯ ಟಿಪ್ಪಣಿ ಬರೆಯಿರಿ.

## ಕಲಿಕಾ ಸಾಧನೆಗಳು

- ಕಥೆ, ಕವಿತೆಗಳನ್ನು ಸೂಕ್ತವಾದ ಭಾವಾಭಿವ್ಯಕ್ತಿಯೊಂದಿಗೆ ಮಂಡಿಸುವುದು.
- ಕಥೆ, ಕವಿತೆ, ನಾಟಕ ಮೊದಲಾದ ಸೃಜನಾತ್ಮಕ ರಚನೆಗಳ ರಚನಾ ರೀತಿ, ಔಚಿತ್ಯ, ವೈವಿಧ್ಯ ಮೊದಲಾದವುಗಳನ್ನು ಪರಿಗಣಿಸಿಕೊಂಡು ಸ್ವಂತ ದೃಷ್ಟಿಕೋನಕ್ಕನುಸಾರವಾಗಿ ಆಸ್ವಾದಿಸಿ, ವಾಚಿಕವಾಗಿ ಮಂಡಿಸುವುದು ಮತ್ತು ಬರೆದು ಮಂಡಿಸುವುದು.
- ಓದಿದ ಸೃಜನಾತ್ಮಕ ರಚನೆಗಳನ್ನು ವಿಭಿನ್ನ ಮತ್ತು ಸೂಕ್ತ ರೀತಿಯಲ್ಲಿ ಪುನರಾವಿಷ್ಕರಿಸುವುದು.
- ಜನಪದ ಗೀತೆ, ಕವಿತೆಗಳಲ್ಲಿರುವ ತಾಳವೈವಿಧ್ಯಗಳನ್ನು ಗುರುತಿಸಿ, ಕಂಠಪಾಠಮಾಡಿ ಸೂಕ್ತ ತಾಳದೊಂದಿಗೆ ಹಾಡುವುದು.
- ಪದ ಶುದ್ಧಿ, ವಾಕ್ಯ ಶುದ್ಧಿ, ಲೇಖನ ಚಿಹ್ನೆ, ಪಾರಾ ಮೊದಲಾದ ಭಾಷಾ ನಿಯಮಗಳನ್ನು ಪಾಲಿಸಿಕೊಂಡು ರಚನೆಗಳನ್ನು ಉತ್ತಮಪಡಿಸುವುದು.
- ಸ್ವಂತ ಅಭಿಪ್ರಾಯಗಳನ್ನು ಶಿಷ್ಟಭಾಷೆಯಲ್ಲಿ ಮಂಡಿಸುವುದು.
- ಪರಿಚಿತವಾದ ಕವಿತೆಗಳಲ್ಲಿರುವ ಚಮತ್ಕಾರ, ಬಿಂಬಕಲ್ಪನೆ, ವರ್ಣನೆ ಎಂಬಿವುಗಳನ್ನು ಗುರುತಿಸಿ, ವಿಶ್ಲೇಷಿಸಿ, ಆಸ್ವಾದನ ಟಿಪ್ಪಣಿ, ತೌಲನಿಕ ಟಿಪ್ಪಣಿ, ವರ್ಣನೆ ಎಂಬಿತ್ಯಾದಿಗಳನ್ನು ರಚಿಸುವುದು.
- ಪಾಠಭಾಗಗಳಿಂದ ಆರ್ಜಿಸಿದ ಭಾಷಾಪರವೂ ಆಶಯಪರವೂ ಆದ ಸಾಮರ್ಥ್ಯಗಳನ್ನು ಉಪಯೋಗಿಸಿಕೊಂಡು ಸ್ವತಂತ್ರವಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.


# 3. ಚೆಲುವು ತುಂಬಲಿ

ಗುಡ್ಡ, ಬೆಟ್ಟ, ಕಾಡು, ಕಣಿವೆ, ನದಿ, ಶರಧಿಗಳಿಂದ ಕೂಡಿದ ಈ ಭೂಮಿಯು ಅದೆಷ್ಟು ರಮ್ಯವಾಗಿದೆ! ಸಹಜ ಸೌಂದರ್ಯವನ್ನು ಮೈಗೂಡಿಸಿಕೊಂಡಿರುವ ಈ ಇಳೆಯು ಎಲ್ಲ ಜೀವರಾಶಿಗಳ ಆಶ್ರಯತಾಣ. ಆದರೆ ಭೂಮಿಯನ್ನು ಬಳಸುವವರಲ್ಲಿ ಮಾನವನಿಗೇ ಅಗ್ರಸ್ಥಾನ. ಇಂದು ಮನುಷ್ಯನ ವ್ಯಾಮೋಹಕ್ಕೆ ಪ್ರಕೃತಿಯು ಬಲಿಯಾಗುತ್ತಿದೆ. ಅರಣ್ಯಗಳು, ಬೆಟ್ಟಗಳು ಮಾಯವಾಗುತ್ತಿವೆ. ನದೀ ಮೂಲಗಳು ಬತ್ತುತ್ತಿವೆ. ಪರಿಸರವು ಮಲಿನವಾಗುತ್ತಿದೆ. ನಮಗೆ ಇಂದು ಧರಣಿಯಲ್ಲಿರುವ ಸಂಪನ್ಮೂಲಗಳನ್ನು ಪರಿಸರಕ್ಕೆ ಹಾನಿಯಾಗದಂತೆ ಬಳಸಬೇಕಾದ ಅನಿವಾರ್ಯತೆ ಇದೆ.



# ಮುಂಜಾನೆಯ ಮೋಡಿ

ಈ ಪ್ರಕೃತಿ ಅದೆಷ್ಟು ಸುಂದರ! ಪ್ರಕೃತಿಯ ಸೊಬಗನ್ನು ಹಲವು ರೀತಿಯಲ್ಲಿ ಕವಿಗಳು ವರ್ಣಿಸಿದ್ದಾರೆ. ನಾವು ಪ್ರತಿನಿತ್ಯ ಕಾಣುವ ಸೂರ್ಯೋದಯದ ಸೌಂದರ್ಯ ಬಣ್ಣಿಸಲಸದಳ.



ಮೈ ಮುರಿದೆದ್ದಿರೆ ಮೂಡಣದಲ್ಲಿ ಹೊಂಬಿಸಿಲಿನ ನಗೆ ಸೂರ್ಯ,
ಬಣ್ಣಗಳೊಂದಿಗೆ ದಿಬ್ಬಣ ಹೊರಟಿದೆ ಪ್ರಕೃತಿಯ ಸೌಂದರ್ಯ.

ತೇಲಿದೆ ತಂಬೆಲರಲಿ ಮರ ಗಿಡಗಳ ಮಂಜುಳ ಮಂಗಳ ವಾದ್ಯ;
ಪಾಳ್ನೆಲ ನಂದನವಾಗಿದೆ ಅಹ! ಚಣದೊಳಗೆಂತಹ ಚೋದ್ಯ.

ಅಂಬರದಲ್ಲಿ ತೇಲಾಡುವ ಮೇಘಗಳಂಚಿಗೆ ಕಂಚಿನ ಹೊಳಪು;
ಮಂಜಿಗು ಸಹ ಅಪರಂಜಿಯ ಲೇಪ, ತಲೆ ಮರೆಸಿರುವುದು ಬಿಳುಪು.

ನವಿಲಿನ ಹೀಲಿಯ ಹೋಲಿದ ಬಾನಿನ ನೀಲಿಗೆ ಅನುಪಮ ಮೆರುಗು
ಹಚ್ಚನೆ ಸೀರೆಯ ಚೆಲು ಗಿರಿ ಕನ್ಯೆಗೆ ಝುರಿ ಸಮ್ಮೋಹಕ ಸೆರಗು.

ಹಕ್ಕಿಯ ಚಿಲಿಪಿಲಿ ಜೊತೆ ಹೊರಟಿದೆ ಸುಮ ಸೌರಭ ಗಾಳಿ ಸವಾರಿ
ಚಿಟ್ಟೆಗೆ, ದುಂಬಿಗೆ ಉಪವನವಾಗಿದೆ ಭೋಜನ ಶಾಲೆಯ ದಾರಿ.

ಸಿರಿವಂತರನೂ ದರಿದ್ರರೆನಿಸುವ ಪರಿ ಮುಂಜಾನೆಯ ಮೋಡಿ
ಮನುಜರ ಆತ್ಮದ ಪಾಲಿಗೆ ದೇವರ ಬಳುವಳಿ; ಶಾಲಿನ ಜೋಡಿ.

ಕಿವಿ ಕಣ್ಣೆರಡೇ ಸಾಲದು ಸವಿಯಲು ಈ ಸುರ ಸುಂದರ ದೃಶ್ಯ;
ಬಾಳಲಿ ಕೇವಲ ಒಮ್ಮೆಯೆ ದೊರೆತರು ಸಾರ್ಥಕ ನರನಾಯುಷ್ಯ.

ಕೆ.ಎಸ್. ನಿಸಾರ್ ಅಹಮ್ಮದ್

## ಕೆ.ಎಸ್. ನಿಸಾರ್ ಅಹಮ್ಮದ್



ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲೂಕಿನಲ್ಲಿ ಕೆ.ಎಸ್. ನಿಸಾರ್ ಅಹಮ್ಮದರು 1936 ರಲ್ಲಿ ಜನಿಸಿದರು. ಭೂಗರ್ಭ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರರಾಗಿ ಭೂವಿಜ್ಞಾನದ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡಮಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಕುರಿಗಳು ಸಾರ್ ಕುರಿಗಳು, ಜೋಗದ ಸಿರಿ ಬೆಳಕಿನಲ್ಲಿ ಮುಂತಾದ ಕವನಗಳು ಇವರ ಸುಂದರ ಸೃಷ್ಟಿಗಳು. ಮನಸು ಗಾಂಧಿ ಬಜಾರು, ನೆನೆದವರ ಮನದಲ್ಲಿ, ನಾನೆಂಬ ಪರಕೀಯ, ಸಂಜೆ ಐದರ ಮಳೆ, ಸುಮುಹೂರ್ತ, ಸ್ವಯಂಸೇವೆಯ ಗಾಳಿಗಳು ಮುಂತಾದವುಗಳು ಇವರ ಕವನ ಸಂಕಲನಗಳಾಗಿವೆ.

ಇವರ 'ಹಕ್ಕಿಗಳು' ಮಕ್ಕಳ ಪುಸ್ತಕಕ್ಕೆ ರಾಷ್ಟ್ರೀಯ ಬಹುಮಾನ ಬಂದಿದೆ. ರಾಜ್ಯೋತ್ಸವ ಪ್ರಶಸ್ತಿ ವಿಜೇತರಾದ ಇವರಿಗೆ ಅಕಾಡೆಮಿ ಫೆಲೋಷಿಪ್ ಲಭಿಸಿದೆ.

### ಚಟುವಟಿಕೆಗಳು

- **ಹಾಡಿರಿ**

ಕವನವನ್ನು ರಾಗವಾಗಿ ಹಾಡಿರಿ.

- **ಚರ್ಚಿಸಿರಿ**

'ಕವಿಕಣ್ಣೆರಡೇ ಸಾಲದು ಸವಿಯಲು ಈ ಸುಂದರ ದೃಶ್ಯ, ಬಾಳಲಿ ಕೇವಲ ಒಮ್ಮೆಯೆ ದೊರೆತರು ಸಾರ್ಥಕ ನರನಾಯುಷ್ಯ' ಎಂಬ ಕವಿವಾಣಿಯ ಬಗ್ಗೆ ನಿಮ್ಮ ಅಭಿಪ್ರಾಯವೇನು? ಚರ್ಚಿಸಿರಿ.

- **ಉತ್ತರಿಸಿರಿ**

- ಸೂರ್ಯ ಮೂಡಣದಲ್ಲಿ ಮೂಡುವಾಗ ಪಾಳ್ನೆಲ ಹೇಗೆ ನಂದನವಾಗುತ್ತದೆ?
- ಕವಿಯು ಬಾನಿನ ನೀಲ ಬಣ್ಣವನ್ನು ಯಾವುದಕ್ಕೆ ಹೋಲಿಸಿದ್ದಾರೆ?
- ಕವಿಯ ಅಭಿಪ್ರಾಯದಂತೆ ಸಿರಿವಂತರಾದವರೂ ದರಿದ್ರರೆನಿಸುವುದು ಯಾವಾಗ?

- **ಪರ್ಯಾಯ ಪದ ಬಳಸಿರಿ**

- ಕೆಲವು ಪದಗಳಿಗೆ ಅಡಿಗೆರೆ ಎಳೆಯಲಾಗಿದೆ. ಆ ಪದಗಳ ಅರ್ಥ ಬರುವ ಪದಗಳನ್ನು ಪದ್ಯದಲ್ಲಿ ಹುಡುಕಿರಿ. ಆ ಪದಗಳನ್ನು ಅಡಿಗೆರೆ ಎಳೆದ ಪದದ ಬದಲಾಗಿ ಬಳಸಿಕೊಂಡು ಗದ್ಯಭಾಗವನ್ನು ಪುನಃ ಬರೆಯಿರಿ.

ಪೂರ್ವದಿಕ್ಕಿನಲ್ಲಿ ರವಿಯು ಕಾಣಿಸಿಕೊಂಡಾಗ ಜಗತ್ತೆಲ್ಲ ಎಚ್ಚರಗೊಂಡಿತು. ಆ ಕ್ಷಣದಲ್ಲಿ ಹಕ್ಕಿಗಳು ಪ್ರತ್ಯಕ್ಷಗೊಂಡಂತೆ ತೋರಿದವು. ತಂಗಾಳಿ ಬೀಸಿತು. ವೈಶಾಲಿ ಎದ್ದಳು.. ಕಿಟಕಿಯ ಬಾಗಿಲು ತೆರೆದಳು. ಹೊರಗೆ ನೋಡಿದಾಗ ಆಗಸದಲ್ಲಿ ವರ್ಣರಂಜಿತವಾದ ಮೋಡಗಳು ಮೇಳೈಸಿದ್ದವು. ಅವಳು ಅಂಗಳಕ್ಕೆ ಬಂದಳು. ಅರಳಿದ ಮಲ್ಲಿಗೆಯ ಪರಿಮಳ ಅವಳನ್ನು ಅತ್ತಕಡೆ ಸೆಳೆಯಿತು.

- **ವರ್ಣನೆ ಬರೆಯಿರಿ**

ಮುಂಜಾನೆಯ ಮೋಡಿ ಕವನದಲ್ಲಿ ಕವಿ ಸೂರ್ಯೋದಯದ ಸಂದರ್ಭದಲ್ಲಿ ಪ್ರಕೃತಿಯಲ್ಲುಂಟಾಗುವ ಬದಲಾವಣೆಯನ್ನು ವರ್ಣಿಸಿದ್ದಾರೆ. ಸೂರ್ಯಾಸ್ತಮಾನದ ಸಂದರ್ಭದಲ್ಲೂ ಪ್ರಕೃತಿಯು ಅಪೂರ್ವ ಶೋಭೆಯಿಂದ ಕಂಗೊಳಿಸುತ್ತದೆ. ನೀವು ನೋಡಿದ ಒಂದು ಸೂರ್ಯಾಸ್ತಮಾನವನ್ನು ವರ್ಣಿಸಿರಿ.

- **ಪ್ರಾಸಪದಗಳನ್ನು ಗುರುತಿಸಿರಿ**

'ಮೈ ಮುರಿದೆದ್ದರೆ ಮೂಡಣದಲ್ಲಿ ಹೊಂಬಿಸಿಲಿನ ನಗೆ ಸೂರ್ಯ, ಬಣ್ಣಗಳೊಂದಿಗೆ ದಿಬ್ಬಣ ಹೊರಟಿದೆ ಪ್ರಕೃತಿಯ ಸೌಂದರ್ಯ'

ಇಲ್ಲಿ ಅಡಿಗೆರೆ ಎಳೆದ ಪದಗಳ ಕೊನೆಯ ಅಕ್ಷರವನ್ನು ಗಮನಿಸಿರಿ. ಅದನ್ನು ಅಂತ್ಯಪ್ರಾಸ ಎನ್ನುತ್ತೇವೆ. ಈ ಹಾಡಿನಲ್ಲಿ ಬರುವ ಅಂತ್ಯಪ್ರಾಸವುಳ್ಳ ಪದಗಳನ್ನು ಗುರುತಿಸಿ ಬರೆಯಿರಿ.

❑ **ಪದ ಜೋಡಿಸಿರಿ**

ಕೆಳಗಿನ ಗದ್ಯಭಾಗದಲ್ಲಿ ಕೆಲವು ಪದಗಳಿಗೆ ಅಡಿಗೆರೆ ಎಳೆಯಲಾಗಿದೆ. ಅವುಗಳನ್ನು ಜೋಡಿಸಿ ಬರೆಯಿರಿ.

ಅಂತಹ ಪದಗಳನ್ನು ಪದ್ಯಭಾಗದಿಂದ ಕಂಡುಹಿಡಿದು ಅವುಗಳನ್ನು ಜೋಡಿಸಿ ಗದ್ಯಭಾಗವನ್ನು ಪುನಃ ಬರೆಯಿರಿ.

ಸಂಜೀವನು ತನ್ನ ಪಾಳುನೆಲವನ್ನು ಹಸನಾಗಿಸಬೇಕೆಂದು ತೀರ್ಮಾನಿಸಿದನು. ದರಿದ್ರರು ಎನಿಸುವ ಹಣೆಪಟ್ಟಿಯನ್ನು ಕಿತ್ತು ಒಗೆಯಬೇಕಾದರೆ ನೆಲವು ಹಸನಾಗಲೇಬೇಕು ಎಂಬುದು ಅವನ ಅನಿಸಿಕೆ. ಆಕಾಶಕ್ಕೆ ದಿಟ್ಟಿಸಿ ನೋಡಿದಾಗ ಮೇಘಗಳ ಅಂಚಿಗೆ ಹೊಳಪು ಬಂದಂತೆ ತೋರಿತು. ಆ ಮೋಡಗಳು ಮಳೆಯಾಗಿ ಸುರಿಯಬಾರದೇ ಎಂದು ಎನಿಸಿತು. ಚಣದ ಒಳಗೆ ಎಂತಹ ಬದಲಾವಣೆ! ಮಳೆ ಬಂದೇಬಿಟ್ಟಿತು. ಅವನ ಕೃಷಿ ನೆಲವೆಲ್ಲ ನೀರಿನಿಂದ ತೊಯ್ದಿತು. ಅದನ್ನು ನೋಡಲು ಅವನ ಕಣ್ಣು ಎರಡು ಸಾಲದಾಯಿತು. ನರನ ಆಯುಷ್ಯದಲ್ಲಿ ಇಂತಹ ಸೊಗಸನ್ನು ಕಾಣವುದು ಅಪೂರ್ವ ಎಂದುಕೊಂಡನು.

❑ 'ಮುಂಜಾನೆಯ ಮೋಡಿ' ಹಾಡು ನಿಮಗೆ ಇಷ್ಟವಾಯಿತಲ್ಲವೇ? ಅದರ ಆಸ್ವಾದನ ಟಿಪ್ಪಣಿ ಬರೆಯಿರಿ.

# ತ್ಯಾಜ್ಯ ವಿಲೇವಾರಿ

ಪರಿಸರದ ಮೇಲೆ ಮಾನವನ ಕೈವಾಡ ದಿನೇ ದಿನೇ ಹೆಚ್ಚುತ್ತಿದೆ. ಆತನ ದಿನನಿತ್ಯದ ಚಟುವಟಿಕೆಗಳಿಂದ ಪರಿಸರದಲ್ಲಿ ಮಾಲಿನ್ಯ ಹೆಚ್ಚುತ್ತಲಿದೆ. ಜಲಮಾಲಿನ್ಯ, ವಾಯುಮಾಲಿನ್ಯ, ಶಬ್ದಮಾಲಿನ್ಯ ಹೀಗೆ ಅನೇಕ ಮಾಲಿನ್ಯಗಳ ಜೊತೆಯಲ್ಲಿ ವಿವಿಧ ರೀತಿಯ ಕಸಗಳು ಉತ್ಪತ್ತಿಯಾಗುತ್ತಿವೆ. ಅವುಗಳ ವಿಂಗಡಣೆ ಮತ್ತು ನಿರ್ವಹಣೆ ಇಂದಿನ ಸಮಸ್ಯೆಯಾಗಿದೆ.

ತ್ಯಾಜ್ಯ ಅಂದರೆ ಏನು? ಅದನ್ನು ದೂರ ಇಡುವುದು ಹೇಗೆ?

ಮನೆಗೆ ಬಂದ ಮಾಮ ಒಂದು ಲಾಲಿಪಾಪ್ ಕೊಟ್ಟಿದ್ದಾರೆ. ಅದನ್ನು ಬಾಯಿಗೆ ಇಡುವ ಮುನ್ನ ಅದಕ್ಕೆ ಸುತ್ತಿದ್ದ ಪ್ಲಾಸ್ಟಿಕ್ ಕಾಗದವನ್ನು ಬಿಡಿಸಬೇಕು ತಾನೆ? ಬಿಡಿಸಿ ಅದನ್ನು ಎಲ್ಲಿ ಬಿಸಾಕುತ್ತೀಯಾ?

ಮನೆಯ ಒಳಗೆ ಬಿಸಾಕುವ ಹಾಗಿಲ್ಲ. ಅಮ್ಮ ಬಯ್ತಾರೆ. ಅಂಗಳದಲ್ಲಿ ಬಿಸಾಕುವ ಹಾಗಿಲ್ಲ. ಗಲೀಜು ಎಂದು ಅಪ್ಪ ಹೇಳ್ತಾರೆ. ರಸ್ತೆಯಲ್ಲಿ ಬಿಸಾಕುವ ಹಾಗಿಲ್ಲ. ಪಕ್ಕದ ಮನೆಯ ಮಾಮಾ ಬಯ್ತಾರೆ. ರಸ್ತೆಯನ್ನು ಚೊಕ್ಕಟ ಇಡಬೇಕು ಅಂತಾರೆ. ಆಟದ ಮೈದಾನದಲ್ಲಿ ಬಿಸಾಕುವ ಹಾಗಿಲ್ಲ. ಟೀಚರ್ ಬಯ್ತಾರೆ.

ಹಾಗಿದ್ದರೆ ಎಲ್ಲಿ ಬಿಸಾಕಬೇಕು?

ಉತ್ತರ ತುಂಬಾ ಸುಲಭ! ಅದನ್ನು ಕಸದ ಬುಟ್ಟಿಗೆ ಹಾಕಬೇಕು.

ಬಿಸಾಕುವ ವಸ್ತುಗಳಿಗೆಲ್ಲ 'ತ್ಯಾಜ್ಯ ವಸ್ತು' ಎನ್ನುತ್ತಾರೆ. 'ತ್ಯಾಜ್ಯ' ಅಂದರೆ ನಮಗೆ ಬೇಡವಾದದ್ದು ಎಂದು ಅರ್ಥ. ಮುರಿದು ಹೋದ ಪೆನ್ನು, ಹರಿದ ಹಾಳೆ, ಒಡೆದ ಬಳೆ, ಉರಿದು ಹೋದ ಬಲ್ಬ್ – ಹೀಗೆ ನಾನಾ ಬಗೆಯ ತ್ಯಾಜ್ಯಗಳು ನಮ್ಮ ಮನೆಯಲ್ಲಿ ಕಂಡುಬರುತ್ತವೆ. ಅವನ್ನೆಲ್ಲ ಅಲ್ಲಿ ಇಲ್ಲಿ ಕಂಡಕಂಡಲ್ಲಿ ಬಿಸಾಕಬಾರದು. ಕಸದ ಬುಟ್ಟಿಯೊಳಗೇ ಹಾಕಬೇಕು.

ಅಡುಗೆ ಮನೆಗೆ ಓಡುವಾಗ ಹಾಲಿನ ಲೋಟಕ್ಕೆ ಕೈ ತಗುಲಿತು. ಹಾಲು ಚೆಲ್ಲಿ ಹೋಯ್ತು. ಅಮ್ಮನಿಗೆ ಗೊತ್ತಾಗುವ ಮೊದಲೇ ಅಕ್ಕ ಓಡಿ ಬಂದಳು. ಒಂದು ಹಳೇ ಬಟ್ಟೆ ತುಂಡಿನಲ್ಲಿ ನೆಲಕ್ಕೆ ಚೆಲ್ಲಿದ್ದ ಹಾಲನ್ನೆಲ್ಲ ಒರೆಸಿ ಒಂದು ಪಾತ್ರೆಗೆ ಹಿಂಡಿದಳು. ಅದನ್ನು ನಾವು ಕುಡಿಯುವಂತಿಲ್ಲ. ಅದು ತ್ಯಾಜ್ಯ ಹಾಲು. ಅದನ್ನೂ ಕಸದ ಬುಟ್ಟಿಗೆ ಹಾಕಬೇಕೆ?

ಇಲ್ಲ. ಅದಕ್ಕೆ 'ದ್ರವ ತ್ಯಾಜ್ಯ' ಎನ್ನುತ್ತಾರೆ. ನಮ್ಮ ಸುತ್ತಲಿನ ಎಲ್ಲ ವಸ್ತುಗಳನ್ನು ಘನ, ದ್ರವ ಅಥವಾ ಅನಿಲ ಎಂದು



ವರ್ಗೀಕರಿಸುತ್ತೇವೆ. ಹಾಗೆಯೇ ತ್ಯಾಜ್ಯ ವಸ್ತುಗಳನ್ನೂ 'ಘನ ತ್ಯಾಜ್ಯ', 'ದ್ರವ ತ್ಯಾಜ್ಯ' ಮತ್ತು 'ಅನಿಲ ತ್ಯಾಜ್ಯ' ಎಂದು ವಿಂಗಡಿಸಬಹುದು. ನೆಲಕ್ಕೆ ಚೆಲ್ಲಿದ ಹಾಲು 'ದ್ರವ ತ್ಯಾಜ್ಯ' ಪಾತ್ರೆ ತೊಳೆದ ನೀರು, ಬಟ್ಟೆ ತೊಳೆದ ನೀರು ಅಥವಾ ಸ್ನಾನ ಮಾಡಿದ ನೀರು ಮನೆಯಿಂದ ಆಚೆ ಹೋಗಲೆಂದು ವ್ಯವಸ್ಥೆ ಮಾಡಿರುತ್ತೇವೆ. ಅಲ್ಲಿ ದ್ರವತ್ಯಾಜ್ಯವನ್ನು ಸುರಿಯಬೇಕು. ಇನ್ನು ಅನಿಲ ತ್ಯಾಜ್ಯ ಎಂದರೆ, ಕೆಟ್ಟ ವಾಸನೆ ಸೂಸುವ ಎಲ್ಲ ಬಗೆಯ ಗಾಳಿಯನ್ನು ಅನಿಲ ತ್ಯಾಜ್ಯ ಎನ್ನುತ್ತೇವೆ. ಉದಾಹರಣೆಗೆ ಬೀಡಿ ಅಥವಾ ಸಿಗರೇಟು ಸೇದುವುದು, ಮೋಟಾರು ವಾಹನಗಳ ಹೊಗೆಕೊಳವೆಗಳಿಂದ ಮಲಿನ ಗಾಳಿ ಹೊರಕ್ಕೆ ಬರುವುದು – ಇವೆಲ್ಲ ಅನಿಲ ತ್ಯಾಜ್ಯಗಳು.



ನಮ್ಮ ದೇಹದಿಂದ ತ್ಯಾಜ್ಯಗಳು ದಿನಕ್ಕೆ ಒಮ್ಮೆಯಾದರೂ ಹೊರಕ್ಕೆ ಬರುತ್ತವೆ. ಅವು ನಮ್ಮ ಹಾಸಿಗೆಯಲ್ಲೇ ಇದ್ದರೆ ಎಷ್ಟೊಂದು ಇಸ್ಸಿ ಅಲ್ಲವೇ? ಹಾಗೆಯೇ ಎಲ್ಲ ಬಗೆಯ ತ್ಯಾಜ್ಯಗಳೂ ದೂರ ಹೋಗಬೇಕು. ಹಾಗೆ ನಮ್ಮಿಂದ ದೂರ ಹೋಗಿ ಅವು ಬೇರೆಯವರಿಗೆ ತೊಂದರೆ ಕೊಡಬಾರದು. ಅದರ ಅರ್ಥ, ಯಾವುದೇ ಬಗೆಯ ತ್ಯಾಜ್ಯವನ್ನಾದರೂ ನಾವು ಹುಷಾರಾಗಿ, ಯಾರಿಗೂ ತೊಂದರೆ ಆಗದಂತೆ ವಿಲೇವಾರಿ ಮಾಡಬೇಕು.

ದ್ರವತ್ಯಾಜ್ಯ ಮತ್ತು ಅನಿಲ ತ್ಯಾಜ್ಯಗಳು ತಾವಾಗಿ ಚದುರಿ ಹೋಗುತ್ತವೆ. ಆರಿ ಹೋಗುತ್ತವೆ ಇಲ್ಲವೆ ಹಾರಿ ಹೋಗುತ್ತವೆ. ಆದರೆ ಮೊದಲು ಹೇಳಿದ ಘನ ತ್ಯಾಜ್ಯ ತಾನಾಗಿ ದೂರ ಚದುರಿ ಹೋಗಲಾರದು. ಅದು ಬಿದ್ದಲ್ಲೇ ತುಂಬ ಹೊತ್ತು ಬಿದ್ದಿರುತ್ತದೆ. ಅದನ್ನು ನಾವಾಗಿಯೇ ಎತ್ತಿ ದೂರ ಸುರಕ್ಷಿತ ಸ್ಥಳಕ್ಕೆ ಸಾಗಿಸಬೇಕು. ಹಾಲು ನೆಲಕ್ಕೆ ಚೆಲ್ಲಿದರೆ ಅಥವಾ ಪೆಟ್ರೋಲು ಚೆಲ್ಲಿದರೆ ತುಸು ಹೊತ್ತಿನಲ್ಲಿ ಆರಿ ಹೋಗಬಹುದು. ಆದರೆ ಗಾಜಿನ ಚೂರುಗಳು ನೆಲಕ್ಕೆ ಬಿದ್ದರೆ? ಅದು ಅಲ್ಲೇ ಬಿದ್ದಿರುತ್ತದೆ. ನಾವೇ ಸುರಕ್ಷಿತವಾಗಿ ಎತ್ತಿ ದೂರ ಬಿಸಾಕಬೇಕು.

ಘನತ್ಯಾಜ್ಯಗಳ ಇನ್ನೂ ಕೆಲವು ಉದಾಹರಣೆಗಳನ್ನು ನೋಡೋಣ : ಚಾಕೋಲೇಟನ್ನು ಸುತ್ತಿದ್ದ ಪ್ಲಾಸ್ಟಿಕ್ ಹಾಳೆ, ಪ್ಲಾಸ್ಟಿಕ್ ಚೀಲ, ಪ್ಲಾಸ್ಟಿಕ್ ಸ್ಟಿಕರ್, ಪ್ಲಾಸ್ಟಿಕ್ ಬಾಟಲಿ... ಪ್ಲಾಸ್ಟಿಕ್‌ನಲ್ಲೇ ನಾನಾ ತರಹ ಇವೆ! ಇನ್ನು ರದ್ದಿ ಕಾಗದ, ಹರಿದ ಚಪ್ಪಲಿ, ಹೊಸ ಚಪ್ಪಲಿಯ ಜತೆಗೆ ಬಂದ ರಟ್ಟಿನ ಡಬ್ಬ, ಒಡೆದ ಗಾಜು, ತೆಂಗಿನ ಚಿಪ್ಪು, ದಾರದ ತುಂಡು, ಹರಿದ ಬಟ್ಟೆ, ಬಾಳೆಹಣ್ಣಿನ ಸಿಪ್ಪೆ, ಹಳಸಿದ ರೊಟ್ಟಿ, ಮುರುಕು ಬಾಚಣಿಕೆ ಇವೆಲ್ಲ ನಮಗೆ ಪರಿಚಿತ ಘನ ತ್ಯಾಜ್ಯಗಳು. ಇವುಗಳನ್ನು ಎರಡು ರೀತಿಯಲ್ಲಿ ವರ್ಗೀಕರಿಸಬಹುದು. ಬಿಸಾಕಿದರೆ ಕೊಳೆತು ಕ್ರಮೇಣ ಮಣ್ಣಿನಲ್ಲಿ ಸೇರಿ ಹೋಗುವಂಥ ಘನತ್ಯಾಜ್ಯಗಳಿಗೆ 'ಸಾವಯವ ತ್ಯಾಜ್ಯ' ಎನ್ನುತ್ತಾರೆ. ಹಣ್ಣು ಅಥವಾ ತರಕಾರಿ ಸಿಪ್ಪೆ, ಹಳಸಿದ ರೊಟ್ಟಿ, ತೆಂಗಿನ ಚಿಪ್ಪು, ಹಳೇ ಬಟ್ಟೆ ಇವೆಲ್ಲ ಸಾವಯವ ತ್ಯಾಜ್ಯಗಳು. ಅದನ್ನು ಪ್ರತ್ಯೇಕ ಕಸದ ಬುಟ್ಟಿಗೆ ಹಾಕಿ ಕೊಂಡೊಯ್ದು ನಮ್ಮದೇ ಹಿತ್ತಿಲಲ್ಲಿ ಅಥವಾ ಕೈದೋಟದಲ್ಲಿ ಸರಿಯಾಗಿ ಹೂತಿಟ್ಟರೆ ಕ್ರಮೇಣ ಉತ್ತಮ ಗೊಬ್ಬರವಾಗುತ್ತವೆ. ಗಿಡಗಳ ಬುಡದಲ್ಲಿ ಅವನ್ನು ಹಾಕಬಹುದು. ಗಿಡ ಚೆನ್ನಾಗಿ ಬೆಳೆಯುತ್ತದೆ.



ಗಾಜಿನ ಚೂರು, ಪ್ಲಾಸ್ಟಿಕ್ ಚೀಲಗಳು, ತಂಗಿಯ ಹೇರ್‌ಪಿನ್, ಹಳೇ ರೀಫಿಲ್ ಪೆನ್, ದಪ್ಪ ರಟ್ಟು, ಔಷಧ ಮಾತ್ರೆ ಸುತ್ತಿದ ಬ್ಯಾಗಡೆ, ಹರಿದ ಚಪ್ಪಲಿ, ತಗಡಿನ ಚೂರು, ಮುರುಕು ಪ್ಲಾಸ್ಟಿಕ್

ಆಟಿಕೆ, ಹಳೇ ಬ್ಯಾಟರಿ ಸೆಲ್, ಅಣ್ಣನ ಹರಿದ ರಬ್ಬರ್ ಚೆಂಡು, ಮುರಿದ ಸಿ.ಡಿ., ಟೇಪ್ ರೆಕಾರ್ಡರಿನ ರಿಬ್ಬನ್ನು ಇವೆಲ್ಲ ಕೊಳೆಯಲಾರವು. ಮಣ್ಣಿನೊಂದಿಗೆ ಸೇರದೆ ವರ್ಷಗಟ್ಟಲೆ ಬಿದ್ದಲ್ಲೇ ಬಿದ್ದಿರುತ್ತವೆ. ರಸ್ತೆ ಪಕ್ಕದಲ್ಲಿ ಬಿದ್ದಿದ್ದರೆ ಊರೆಲ್ಲ ಕೊಳಕಾಗಿ ಕಾಣುತ್ತವೆ. ಪ್ಲಾಸ್ಟಿಕ್ ಚೆಂದಿಯಲ್ಲಿ ಹಳಸಲು ತಿಂಡಿ ಇದ್ದರೆ ಅದನ್ನು ಹಸುಗಳು ಇಲ್ಲವೆ ಬೀದಿನಾಯಿಗಳು ಇಡಿಯಾಗಿ ತಿಂದು, ತುಂಬಾ ನೋವು ಅನುಭವಿಸುತ್ತವೆ. ಪ್ಲಾಸ್ಟಿಕ್ ತಿಪ್ಪೆವಸ್ತುಗಳು ಚರಂಡಿಗೆ ಬಿದ್ದರೆ ಅಲ್ಲೇ ಕೊಳೆ ನೀರನ್ನೂ ತಡೆಹಿಡಿದು ದುರ್ವಾಸನೆ ಸೂಸುತ್ತವೆ. ಇಂಥವನ್ನೆಲ್ಲ ಪ್ರತ್ಯೇಕ ವಿಂಗಡಿಸಿ ಮನೆಯಲ್ಲಿರುವ ಕಸದ ಬುಟ್ಟಿಗೆ ಹಾಕಬೇಕು. ಸಂಬಂಧಿತ ಸ್ಥಳೀಯ ಸಂಸ್ಥೆಗಳು ಅವನ್ನೆಲ್ಲ ಆಗಾಗ ಎತ್ತಿ ದೂರ ಸಾಗಿಸಿ ಸೂಕ್ತ ಸ್ಥಳದಲ್ಲಿ ಹೂಳುತ್ತಾರೆ. ಇಲ್ಲವೆ ಸುಡುತ್ತಾರೆ, ಇಲ್ಲವೆ ಪ್ಲಾಸ್ಟಿಕ್‌ನಂಥ ವಸ್ತುಗಳನ್ನು ಬೇರ್ಪಡಿಸಿ ಮತ್ತೆ ಅವುಗಳಿಂದ ಹೊಸ ಪ್ಲಾಸ್ಟಿಕ್ ಮಾಡುತ್ತಾರೆ. ಅಥವಾ ಡಾಂಬರಿನೊಂದಿಗೆ ಕರಗಿಸಿ ರಸ್ತೆ ನಿರ್ಮಾಣಕ್ಕೆ ಬಳಸುತ್ತಾರೆ.

ನಿಮಗಿದು ಗೊತ್ತೇ? ಪ್ಲಾಸ್ಟಿಕ್ ಮತ್ತು ರಬ್ಬರನ್ನು ಕರಗಿಸಿ ಡೀಸೆಲ್‌ನಂಥ ತೈಲವನ್ನೂ ಉತ್ಪಾದಿಸಬಹುದು. ಸರಿಯಾಗಿ ವಿಲೇವಾರಿ ಮಾಡಿದರೆ ಎಂಥ ತಿಪ್ಪೆವಸ್ತುಗಳನ್ನೂ ಸಂಪತ್ತನ್ನಾಗಿ ಪರಿವರ್ತಿಸಬಹುದು.


ನಮ್ಮ ಮನೆಯಲ್ಲಿನ ಘನತ್ಯಾಜ್ಯಗಳಲ್ಲಿ ಕೆಲವು ತುಂಬಾ ಅಪಾಯಕಾರಿ ತ್ಯಾಜ್ಯಗಳೂ ಇರುತ್ತವೆ. ಉದಾಹರಣೆಗೆ, ನಿಮ್ಮಲ್ಲಿ ಉರಿದು ಹೋದ ಸಿ.ಎಫ್.ಎಲ್. ಇದ್ದರೆ ಅದನ್ನು ಹುಷಾರಾಗಿ ಒಡೆಯದಂತೆ ಎತ್ತಿ ಪ್ರತ್ಯೇಕ ಇಡಬೇಕು. ಒಡೆದರೆ ಅದರಿಂದ ಪಾದರಸದ ಆವಿ ಹೊರಕ್ಕೆ ಬರುತ್ತದೆ. ಅದು ವಿಷ ಪದಾರ್ಥ. ಆಕಸ್ಮಾತ್ ಒಡೆದರೆ, ಆ ಗಾಳಿಯನ್ನು ನಾವು ಸೇವಿಸಲೇಬಾರದು. ಕಿಟಿಕಿ ಬಾಗಿಲು ತೆರೆದು, ನಾವೂ ತುಸು ಹೊತ್ತು ದೂರ ಹೋಗಬೇಕು.

ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಎಂದೂ ಸುಡಬಾರದು. ಸುಟ್ಟರೆ ಅದರಿಂದ ವಿಷಗಾಳಿ ಹೊಮ್ಮುತ್ತದೆ. ನಿಮ್ಮ ಮನೆಯಲ್ಲಿ ಇರುವ ಹಳೇ ಕಂಪ್ಯೂಟರ್ ಬಿಡಿಭಾಗಗಳು, ಟೇಪ್ ರೆಕಾರ್ಡ್ ಚೂರುಗಳು, ಮೊಬೈಲ್ ಬಿಡಿಭಾಗಗಳು, ವಾಚಿನ ಬ್ಯಾಟರಿ, ಮುರುಕಲು ಟಾರ್ಚ್, ಕೆಟ್ಟುಹೋದ ರಿಮೋಟ್, ಸಿ.ಎಫ್.ಎಲ್. ಇತ್ಯಾದಿಗಳನ್ನು 'ಇಲೆಕ್ಟ್ರಾನಿಕ್ ವೇಸ್ಟ್' ಅಥವಾ 'ಇ–ವೇಸ್ಟ್' ಎನ್ನುತ್ತಾರೆ. ಇವುಗಳನ್ನೆಲ್ಲ ಪ್ರತ್ಯೇಕವಾಗಿ ತೆಗೆದಿಟ್ಟು, ಮಾಲಿನ್ಯ ನಿಯಂತ್ರಣ ಇಲಾಖೆಗೆ ಒಪ್ಪಿಸಬೇಕು. ಕಸದ ತೊಟ್ಟಿಗೆ ಇಲ್ಲವೆ ರಸ್ತೆ ಬದಿಗೆ ಬಿಸಾಕಿದರೆ, ಚಿಂದಿ ಆಯುವವರು ಅವನ್ನು ಕರಗಿಸಿ ಆದರಲ್ಲಿರುವ ತಾಮ್ರ ಇಲ್ಲದೆ ಬೆಳ್ಳಿಯ ತಂತಿಗಳನ್ನು ಬಿಡಿಸಲು ಹೋಗಿ ನಾನಾ ಬಗೆಯ ಕಾಯಿಲೆಗಳಿಗೆ ಬಲಿಯಾಗುತ್ತಾರೆ. ಹಾಗೆ ಎಂದೂ ಬಿಸಾಕಬಾರದು. ಕಸದ ತೊಟ್ಟಿಗೂ ಹಾಕಬಾರದು.

ಘನತ್ಯಾಜ್ಯ ವಸ್ತುಗಳನ್ನು ಸರಿಯಾಗಿ ವಿಲೇವಾರಿ ಮಾಡುವುದು ನಮ್ಮೆಲ್ಲರ ಶ್ರೇಷ್ಠ ಕರ್ತವ್ಯ. ಅವು ಯಾರಿಗೂ, ಯಾವ ಜೀವಿಗೂ ಅಪಾಯ ತರಬಾರದು. ಸರಿಯಾಗಿ ವಿಲೇವಾರಿ ಮಾಡಿದರೆ ತ್ಯಾಜ್ಯವಸ್ತುಗಳೂ ದೇಶದ ಸಂಪತ್ತಾಗುತ್ತದೆ. ಕಂಡಕಂಡಲ್ಲಿ ಬಿಸಾಕಿದರೆ ಪರಿಸರ ನರಕವಾಗುತ್ತದೆ.

ನಾಗೇಶ ಹೆಗಡೆ

## ನಾಗೇಶ ಹೆಗಡೆ



ನಾಗೇಶ ಹೆಗಡೆಯವರು ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರದಲ್ಲಿ 1948ರಲ್ಲಿ ಜನಿಸಿದರು. ತಮ್ಮ ಉನ್ನತ ಶಿಕ್ಷಣವನ್ನು ಪಶ್ಚಿಮಬಂಗಾಳದ ಕರಕಪುರದ ಐ.ಐ.ಟಿಯಲ್ಲೂ ನವದೆಹಲಿಯ ಜವಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲೂ ಪೂರೈಸಿದರು. ಹಿಮಾಲಯದ ನೈನಿತಾಲ್ ವಿಶ್ವವಿದ್ಯಾಲಯದಲ್ಲಿ ಪರಿಸರ ಭೂವಿಜ್ಞಾನ ಉಪನ್ಯಾಸಕರಾಗಿಯೂ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಸಹಾಯಕ ಸಂಪಾದಕರಾಗಿಯೂ ಸೇವೆಸಲ್ಲಿಸಿದ್ದಾರೆ. ಪ್ರಮುಖ ಪರಿಸರವಾದಿಯಾಗಿರುವ ಇವರು ಹಲವು ಪರಿಸರ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ. ಇರುವುದೊಂದೇ ಭೂಮಿ, ಗಗನ ಸಖಿಯರ ಸೆರಗಹಿಡಿದು, ನಮ್ಮೊಳಗಿನ ಬ್ರಹ್ಮಾಂಡ ಇವರ ಕೆಲವು ಕೃತಿಗಳು. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ಲಭಿಸಿವೆ.

## ಚಟುವಟಿಕೆಗಳು

### ❑ ಚರ್ಚಿಸಿರಿ

'ತ್ಯಾಜ್ಯವಸ್ತುಗಳನ್ನು ಸರಿಯಾಗಿ ವಿಲೇವಾರಿ ಮಾಡಿದರೆ ದೇಶದ ಸಂಪತ್ತಾಗುತ್ತದೆ. ಕಂಡಕಂಡಲ್ಲಿ ಬಿಸಾಡಿದರೆ ಪರಿಸರ ನರಕವಾಗುತ್ತದೆ' ಇದರ ಬಗ್ಗೆ ನಿಮ್ಮ ಅಭಿಪ್ರಾಯವೇನು? ಚರ್ಚಿಸಿರಿ.

### ❑ ಉತ್ತರಿಸಿರಿ

- ಘನತ್ಯಾಜ್ಯಗಳು ಯಾವುವು?
- ಪ್ಲಾಸ್ಟಿಕ್ ತ್ಯಾಜ್ಯಗಳನ್ನು ಸುಡಬಾರದು. ಯಾಕೆ?
- ಇ-ವೇಸ್ಟ್ ಎಂದರೇನು?

### ❑ ಮನವಿ ಪತ್ರ ಬರೆಯಿರಿ

ಸಾರ್ವಜನಿಕ ಸ್ಥಳಗಳಲ್ಲಿ 'ತ್ಯಾಜ್ಯ ವಿಲೇವಾರಿ' ಕೈಗೊಳ್ಳುವಂತೆ ಸ್ಥಳೀಯ ಆಡಳಿತೆಯವರಿಗೆ ಒಂದು ಮನವಿಪತ್ರ ಬರೆಯಿರಿ.

### ❑ ಪ್ರಬಂಧ ಬರೆಯಿರಿ

'ಪರಿಸರ ಶುಚಿತ್ವದಲ್ಲಿ ವಿದ್ಯಾರ್ಥಿಗಳ ಪಾತ್ರ' ಎಂಬ ವಿಷಯದ ಕುರಿತು ಪ್ರಬಂಧವೊಂದನ್ನು ಬರೆಯಿರಿ.


### ❑ ಪದ ಬಳಸಿರಿ

- ಅಡಿಗೆ ಗೆರೆ ಹಾಕಿದ ಶಬ್ದಗಳ ಬದಲು ಸೂಕ್ತವಾದ ಪದಗಳನ್ನು ಪಾಠಭಾಗದಿಂದ ಆರಿಸಿ ಬರೆಯಿರಿ.

(ದ್ರವ ತ್ಯಾಜ್ಯ, ಇ - ವೇಸ್ಟ್, ಘನತ್ಯಾಜ್ಯ, ಅನಿಲತ್ಯಾಜ್ಯ)

ಹೊಳೆಯೊಂದು ಹರಿಯುತ್ತಿತ್ತು. ಜುಳು ಜುಳು ನಾದದ ಆ ಹೊಳೆಯನ್ನು ವೀಕ್ಷಿಸಿದಾಗ ಅದರಲ್ಲಿ ನೀರಿನೊಂದಿಗೆ ಚಪ್ಪಲಿ ಪ್ಲಾಸ್ಟಿಕ್ ಚೀಲ, ಹರಿದ ಬಟ್ಟೆಗಳ ತುಂಡು ತೇಲುತ್ತಾ ಸಾಗುತ್ತಿದ್ದವು. ನೀರು ಕಪ್ಪು ಬಣ್ಣದಿಂದ ಕೂಡಿತ್ತು. ಅದರಲ್ಲಿ ಕೊಳಚೆ ನೀರು, ವಾಹನಗಳಿಂದ ಹರಿದ ಡೀಸೆಲ್, ಎಣ್ಣೆ ಇತ್ಯಾದಿ ಸೇರಿತ್ತು. ಇನ್ನು ಸ್ವಲ್ಪ ಹೊತ್ತು ನೋಡುತ್ತಾ ನಿಂತೆ. ಮೊಬೈಲ್ ಬಿಡಿ ಭಾಗಗಳು, ಕೆಟ್ಟು ಹೋದ ರಿಮೋಟ್, ಮುರುಕು ಟೋರ್ಚ್ ಹರಿದು ಹೋಗುತ್ತಿತ್ತು. ಹೊಳೆಯ ದಡದಲ್ಲಿ ಕಾರ್ಖಾನೆ, ಅಂಗಡಿಗಳು ಇದ್ದವು. ಅಲ್ಲಿಂದ ಕಾರ್ಖಾನೆಯ ಹೊಗೆ, ಪ್ಲಾಸ್ಟಿಕ್ ಉರಿಸಿದ ಹೊಗೆ ಗಗನ ಮುಟ್ಟುತ್ತಿತ್ತು.

### ❑ ಕೊಟ್ಟಿರುವ ಪದಸೂರ್ಯವನ್ನು ಪೂರ್ತಿಗೊಳಿಸಿರಿ. ಬಳಿಕ ಮಾದರಿಯಂತೆ ವಾಕ್ಯಗಳನ್ನು ರಚಿಸಿರಿ.




- ಚಳಿಗಾಲದಲ್ಲಿ ಮೂಡುಭಾಗದಿಂದ ಒಣಗಾಳಿ ಬೀಸುತ್ತದೆ.
- 
- 
- 

### ❑ ಒಂದೇ ವಾಕ್ಯವಾಗಿ ಬರೆಯಿರಿ

ಕೊಟ್ಟಿರುವ ಉದಾಹರಣೆಯನ್ನು ಗಮನಿಸಿರಿ.

○ ಮರಗಳನ್ನು ಕಡಿಯಬಾರದು ಪರಿಸರಕ್ಕೆ ಹಾನಿಯಾಗುತ್ತದೆ.

ಮರಗಳನ್ನು ಕಡಿದರೆ ಪರಿಸರಕ್ಕೆ ಹಾನಿಯಾಗುತ್ತದೆ.

- ಇದೇ ರೀತಿಯಲ್ಲಿ ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಒಂದೇ ವಾಕ್ಯವಾಗಿ ಬರೆಯಿರಿ.

○ ಪ್ಲಾಸ್ಟಿಕ್ ವಸ್ತುಗಳನ್ನು ಉರಿಸಬಾರದು. ಅದರ ಹೊಗೆ ವಾಯುವನ್ನು ಮಲಿನಗೊಳಿಸುತ್ತದೆ.

○ ನಾವು ಧೂಮಪಾನ ಮಾಡಬಾರದು. ಶ್ವಾಸಕೋಶ ಕಾಯಿಲೆಗಳು ಬರಬಹುದು.

○ ತೆರೆದ ಸ್ಥಳಗಳಲ್ಲಿ ಮಲಮೂತ್ರ ವಿಸರ್ಜಿಸಬಾರದು. ಸಾಂಕ್ರಾಮಿಕ ರೋಗಗಳು ಹರಡಬಹುದು.

# ನೀರಿನ ಋಣ

ನೀರು ಪ್ರಾಕೃತಿಕ ಸಂಪತ್ತು ಇದನ್ನು ಮಿತವಾಗಿ ಬಳಸಬೇಕು. ಅತಿಯಾಗಿ ಬಳಸಿದರೆ ಆಗುವ ಪರಿಣಾಮದ ಬಗ್ಗೆ ಈ ಕಥೆಯಲ್ಲಿ ಭೂತವೊಂದು ತನ್ನ ಸ್ಥಿತಿಯನ್ನು ತಿಳಿಸುತ್ತದೆ. ಭೂತ ಎಂದರೆ ಕಳೆದುಹೋದ ಕಾಲ ಎಂಬ ಅರ್ಥವೂ ಇದೆಯಷ್ಟೆ?

ಕಲ್ಲೂರು ಎಂಬ ಹಳ್ಳಿಯಲ್ಲಿ ಒಂದು ಪ್ರಾಥಮಿಕ ಶಾಲೆಯಿತ್ತು. ಆಸುಪಾಸಿನ ಬೇರೆ ಹಳ್ಳಿಗಳಿಂದಲೂ ಆ ಶಾಲೆಗೆ ಮಕ್ಕಳು ಬರುತ್ತಿದ್ದರು. ಅಲ್ಲಿ ಗುರುಗಳು ಪಾಠಗಳನ್ನು ಚೆನ್ನಾಗಿ ಕಲಿಸುತ್ತಿದ್ದರು.

ಎತ್ತರದ ಗುಡ್ಡದಲ್ಲಿ ಕಟ್ಟಿದ್ದ ಆ ಶಾಲೆಯಲ್ಲಿ ಮಕ್ಕಳಿಗೆ ಕುಡಿಯುವ ನೀರಿನ ಕಷ್ಟ ಮಾತ್ರ ಬಹಳ ಹೆಚ್ಚಿತ್ತು. ದೂರದಿಂದ ಬರುವ ಮಕ್ಕಳು ಬೆಳಗ್ಗೆ ಮನೆಯಿಂದ ಬರುವಾಗ ಬುತ್ತಿಯೂಟದೊಂದಿಗೆ ಒಂದು ಬಾಟಲ್ ನೀರನ್ನು ತಂದರೆ ಅದು ಸಂಜೆಯ ಮೊದಲೇ ಮುಗಿದು ಬಿಡುತ್ತಿತ್ತು. ಬೇಸಗೆಯಲ್ಲಂತೂ ನೀರಿಗಾಗಿ ಹಾಹಾಕಾರ ಬಹಳ ಹೆಚ್ಚು. ಇದನ್ನು ನೋಡಿ ಆ ವರ್ಷದಲ್ಲಿ ಊರ ಪಂಚಾಯತಿನವರು ಶಾಲೆಗಾಗಿ ಒಂದು ಕೊಳವೆ ಬಾವಿ ತೊಡಿಸಿಕೊಟ್ಟರು. ಒಮ್ಮೆಗೆ ಎಲ್ಲರಿಗೂ ಸಮಾಧಾನವೆನಿಸಿತು.

ಕೊಳವೆಬಾವಿಯಲ್ಲೂ ಬೇಕು ಬೇಕಾದಷ್ಟು ನೀರು ಬರುತ್ತಿರಲಿಲ್ಲವಾದರೂ ಮಿತವಾಗಿ ಬಳಸಿದರೆ ನೀರಿನ ಕೊರತೆಬಾರದು ಎಂದು ಮುಖ್ಯ ಗುರುಗಳು ಎಲ್ಲರಿಗೂ ಎಚ್ಚರ ಹೇಳಿದರು. ಸಂಜೆ ಶಾಲೆ ಬಿಟ್ಟೊಡನೆ ದೂರಕ್ಕೆ ಹೋಗಬೇಕಾದ ಮಕ್ಕಳು ತಮ್ಮ ಬಾಟಲುಗಳಲ್ಲಿ ನೀರು ತುಂಬಿಸಿ ತೆಗೆದುಕೊಂಡು ಹೋಗುವ ಏರ್ಪಾಡು ಇತ್ತು. ಮನೆ ತಲುಪುವ ಮೊದಲು ಬಾಯಾರಿಕೆ, ಆಯಾಸಕ್ಕೆ ಈ ನೀರು ಸ್ವಲ್ಪ ಸಮಾಧಾನ ನೀಡಬಹುದು ಎಂದು. ಹೇಗಿದ್ದರೂ ಕಲ್ಲೂರಿನಲ್ಲಿ ಎಲ್ಲೆಲ್ಲೂ ನೀರಿಗೆ ಕೊರತೆ. ದಾರಿಯಲ್ಲಿ ನಿರ್ಜನವಾದ ಗುಡ್ಡವೂ ಇತ್ತು. ಮಕ್ಕಳು ಗುಂಪು ಗುಂಪಾಗಿ ದಾರಿ ನಡೆದು ಹೋಗುತ್ತಿದ್ದರು.

ಕಲ್ಲೂರಿಗೆ ನಾಲ್ಕು ಕಿಲೋ ಮೀಟರ್ ದೂರದ ಶೇಡಿಗುರಿ ಎಂಬಲ್ಲಿರುವ ನಾಲ್ಕಾರು ಮನೆಗಳ ಕೆಲವು ಮಕ್ಕಳು ಒಂದೆರಡು ತಂಡಗಳಾಗಿ ಶಾಲೆಗೆ ಬಂದು ಹೋಗುತ್ತಿದ್ದರು. ಹುಡುಗರ ಆ ಒಂದು ಗುಂಪಿನಲ್ಲಿ ರಾಮು, ಜಾನಿ, ಶಿವು,



ಸಂಜೀವ ಮತ್ತು ರಂಗ. ಎಲ್ಲರಿಗಿಂತ ಕಿರಿಯನೇ ರಂಗ. ರಂಗ ಮೂರನೇ ತರಗತಿಯ ವಿದ್ಯಾರ್ಥಿ. ಉಳಿದವರೆಲ್ಲ ಏಳನೇ ತರಗತಿಯಲ್ಲಿ ಕಲಿಯುವವರು. ನಾಲ್ಕನೇ ತರಗತಿಯವರೆಗೆ ಶೇಡಿಗುರಿಯ ಬಳಿಯೇ ಕಲಿಯುವ ಅವಕಾಶ ಇದ್ದರೂ ರಂಗನನ್ನು ಹೆತ್ತವರು ಅಣ್ಣನಾದ ರಾಮುವಿನೊಂದಿಗೆ ಜೊತೆಯಾಗಿ ಹೋಗಬಹುದೆಂದು ದೂರದ ಕಲ್ಲೂರು ಶಾಲೆಗೆ ಸೇರಿಸಿದ್ದರು.

ಅದೊಂದು ಶನಿವಾರ, ಅರ್ಧ ದಿನದ ಶಾಲಾ ಪಾಠ. ಅದನ್ನು ಮುಗಿಸಿ ಮಕ್ಕಳು ಮಧ್ಯಾಹ್ನದ ರಣ ಬಿಸಿಲಲ್ಲಿ ನಡೆದು ಬರುತ್ತಿದ್ದರು. ಬ್ಯಾಗುಗಳಲ್ಲಿ, ಕೈಯಲ್ಲಿ ಎಂದು ಪ್ರತಿಯೊಬ್ಬರು ಹಿಡಿದು ಕೊಂಡಿದ್ದ ನೀರಿನ ಬಾಟಲುಗಳು ಅರ್ಧಾಂಶ, ಮುಕ್ಕಾಲಂಶ ಬರಿದಾಗಿದ್ದವು. ಬೇಸಗೆಯ ದಿನವಾದ್ದರಿಂದ ದಾರಿಯಲ್ಲೆಲ್ಲೂ ಹಸಿರಾಗಲಿ ನೆರಳಾಗಲಿ ಕಾಣಲಿಕ್ಕಿಲ್ಲ. ಮಕ್ಕಳು ದಣಿದ್ದಿದ್ದರು. ಹುಡುಗಿಯರ ಗುಂಪಿಗೆ ಹತ್ತಿರದಲ್ಲಿಯೇ ನಿಧಾನವಾಗಿ ಕಾಲೆಳೆಯುತ್ತಾ ಆಗಾಗ ಬಾಟಲಿ ನೀರು ಕುಡಿಯುತ್ತಾ ಬರುತ್ತಿದ್ದ ರಂಗನಿಗೆ ಹತ್ತಿರದಲ್ಲೆಲ್ಲೋ "ಮಗೂ.. ಮಗೂ.." ಎಂದು ಕರೆದಂತೆನಿಸಿತು. ರಂಗ ಅತ್ತಿತ್ತ ನೋಡಿದ.

ಮತ್ತೊಮ್ಮೆ ಅದೇ ಸ್ವರ....!

"ಏ... ಸ್ವಲ್ಪ ನಿಲ್ಲಿರೋ ಎಲ್ಲ! ಇಲ್ಲಿ ಕರೀತಿದ್ದಾರೆ ಯಾರೋ"

ರಂಗನು ಜೋರಾಗಿಯೇ ಈ ಮಾತುಗಳನ್ನು ಹೇಳಿದನಾದರೂ ಒಬ್ಬರೂ ನೋಡಲಿಲ್ಲ. ಅಷ್ಟರಲ್ಲೇ ಹುಡುಗಿಯರೂ ವೇಗವಾಗಿ ಮುಂದೆ ನಡೆದಾಗಿತ್ತು.

"ಮಗೂ ತುಂಬಾ ಬಾಯಾರಿಕೆ. ಸ್ವಲ್ಪ ನೀರು ಕೊಡ್ತಿಯಾ?" ಎಂಬ ಮಾತುಗಳು ಸ್ಪಷ್ಟವಾಗಿ ಕೇಳಿದವು.

ರಂಗನು ನಡೆಯುವ ದಾರಿಗೆ ನಾಲ್ಕು ಮಾರು ದೂರದಲ್ಲಿ ಅರ್ಧ ಒಣಗಿ ಹೋದ ಸೀಬೆ ಗಿಡವೊಂದು ತಲೆಯಲ್ಲಾಡಿಸುತ್ತಾ ಮಾತುಗಳನ್ನಾಡುತ್ತಿತ್ತು. ರಂಗನಿಗೆ ಬಹಳ ಆಚ್ಚರಿ, ಆದರೂ,

"ಮಗೂ, ಸ್ವಲ್ಪ ನೀರು" ಎಂಬ ಮಾತು ಪುನಃ ಬರುತ್ತಿರುವ ಮೊದಲೇ ಆ ಗಿಡದ ಬುಡಕ್ಕೆ ಹೋಗಿ ತನ್ನ ಬಾಟಲಿಯಲ್ಲಿದ್ದ ನೀರನ್ನೆಲ್ಲ ಸುರಿದು ಬಿಟ್ಟ ಅವನು.

"ನನ್ನ ಪುಟ್ಟ ಗೆಳೆಯ... ತುಂಬಾ ಒಳ್ಳೆಯ ಗೆಳೆಯ..." ಎಂದು ತಲೆಯಾಡಿಸುತ್ತಿತ್ತು ಆ ಗಿಡ.

ರಂಗ ಅಲ್ಲಿಂದ ಒಂದೇ ಸಮನೆ ಓಟ ಕಿತ್ತು ಗುಂಪುಗಳೊಡನೆ ಸೇರಿಕೊಂಡ. ಎಲ್ಲರಿಗೂ ಈ ವಿಚಿತ್ರ ವಿಷಯ ತಿಳಿಸಿದ. ಅವನ ಮಾತನ್ನು ಯಾರೂ ನಂಬಲಿಲ್ಲ. ನಕ್ಕು ತಮಾಷೆ ಮಾಡಿದರು, ಕೆಲವರು ಹೆದರಿಸಿಬಿಟ್ಟರು ಕೂಡ.

ಮರುದಿನದಿಂದ ಪ್ರತಿ ಸಂಜೆ ಮುಕ್ಕಾಲು ಬಾಟಲು ನೀರನ್ನು ತಪ್ಪದೆ ಆ ಗಿಡಕ್ಕೆ ಎರೆಯುತ್ತಿದ್ದ ರಂಗ. ಉಳಿದ ಗೆಳೆಯ, ಗೆಳತಿಯರೊಂದಿಗೆ.

"ನೀವು ಕೂಡಾ ಹೆಚ್ಚಾದ ನೀರನ್ನು ಈ ಗಿಡಕ್ಕೆ ಅಥವಾ ಇನ್ನಾವುದಾದರೂ ಗಿಡಕ್ಕೆ ಹಾಕಿರಿ" ಎಂದಾಗ,

"ನಿನಗೆಲ್ಲೋ ತಲೆ ಕೆಟ್ಟಿದೆ ಈ ಕಾಡು ಮರಗಳಿಗೆಲ್ಲಾ ನೀರು ಹಾಕ್ತಾರಾ? ನೀರು ಉಳಿದರೆ ನಾವು ಇಲ್ಲಿಯೇ ದಾರಿಯ ಧೂಳಿಗೆ ಚೆಲ್ಲಿ ಬಿಡ್ತೇವೆ" ಎನ್ನುತ್ತಾ ನೀರನ್ನು ವ್ಯರ್ಥ ಮಾಡಿ ಬಿಡುತ್ತಿದ್ದರು ಅವರು.

ಮಾರ್ಚ್ ತಿಂಗಳು ಮುಗಿದು ಎಪ್ರಿಲ್ ಮೊದಲಾಗುವಾಗ ದಾರಿ ಬದಿಯ ಆ ಸೀಬೆ ಮರ ಹಸಿರೆಲೆಗಳಿಂದ, ಹೂಮಿಡಿಗಳಿಂದ ತುಂಬಿ ತುಳುಕುವಂತಿತ್ತು. ಕೆಲವು ದಿನಗಳ ಬಳಿಕ ದಾರಿ ನಡೆಯುವವರಿಗೆಲ್ಲ ಆ ಮರದಿಂದ ಮಧುರವಾದ ಪರಿಮಳದ ಅನುಭವ ಉಂಟಾಗುತ್ತಿತ್ತು.

ಅಂದು ಸಂಜೆ ರಂಗ ಬಾಟಲಿಯ ನೀರನ್ನು ಸೀಬೆ ಗಿಡಕ್ಕೆ ಸುರಿದು ಅವಸರದಿಂದಲೇ ಹಿಂದಿರುಗುವಾಗ,

"ಮಗೂ ಸ್ವಲ್ಪ ನಿಲ್ಲು! "ಪಿಸು ದನಿ ಕೇಳಿಸಿತು."

"ಏನದು? ಅವರೆಲ್ಲ ಓಡಿ ಹೋಗಿ ಆಯ್ತು ನನಗೆ ತಡವಾಗದೇ" ಎನ್ನುತ್ತಿದ್ದ ರಂಗನ ಕಾಲಬುಡಕ್ಕೆ ಚೆನ್ನಾಗಿ ಮಾಗಿದ, ಬಂಗಾರದ ಬಣ್ಣದ ಸೀಬೆ ಹಣ್ಣುಗಳೆರಡು ಮೆತ್ತಗೆ ಬಂದು ಬಿದ್ದವು.

"ತಗೋ" ಎಂದಿತು ಅದೇ ಪಿಸು ದನಿ.

ರಂಗ ಹಣ್ಣುಗಳನ್ನು ಹೆಕ್ಕಿ ಮೂಸಿ ನೋಡುತ್ತಾ ತನ್ನ ಹೆಗಲು ಚೀಲದೊಳಗೆ ಹಾಕಿ ಓಡಲಾರಂಭಿಸಿದ.

ಆಶ್ಚರ್ಯ! ಹತ್ತಾರು ಪುಸ್ತಕ, ಊಟದ ಪಾತ್ರೆ, ಎರಡು ಸೀಬೆ ಹಣ್ಣುಗಳಿಂದ ಭಾರವಾಗಿರಬೇಕಾದ ಅವನ ಬ್ಯಾಗು ಹತ್ತಿಗಿಂತ ಹಗುರವಾಗಿ ತನ್ನೊಡನೆ ತೇಲಿ ಬರುವಂತೆ ಎನಿಸತೊಡಗಿತು. ಮನೆಯವರೆಗೂ ಇದೇ ರೀತಿಯ ಸ್ಥಿತಿ!

ಆಮೇಲೆ ಪ್ರತಿ ದಿನವೂ ಹೀಗೆಯೇ. ಬೇರೆ ಹುಡುಗರೆಲ್ಲ ಮರದ ಹತ್ತಿರಕ್ಕೆ ಹೋಗಿ "ಹಣ್ಣಿದೆಯೇ ಕಾಯಿ ಇದೆಯೇ?" ಎಂದು ಕಣ್ಣಾಡಿಸಿದಾಗ ಯಾವುದೂ ತೋರದಿದ್ದರೂ ಸಂಜೆ ರಂಗ ನೀರು ಹಾಕಿದ ತಕ್ಷಣ ಮಾಗಿದ ಎರಡು ಸೀಬೆ ಹಣ್ಣು ಅವನಿಗೆ ಲಭಿಸುತ್ತಿತ್ತು. ಅಲ್ಲಿಂದ ಮನೆಯ ವರೆಗೂ ಅವನ ಚೀಲ ತುಂಬಾ ಹಗುರ.

ಹುಡುಗರೆಲ್ಲ ಅಂತಹ ಸುಡು ಬೇಸಗೆಯಲ್ಲಿ ರಸ್ತೆಯುದ್ದಕ್ಕೂ ನೀರು ಚೆಲ್ಲುತ್ತಾ ಹೋಗುವುದಕ್ಕಿಂತ ಯಾವುದಾದರೊಂದು ಗಿಡಕ್ಕೆ ಹಾಕಿದರಾಗದೇ ಎನಿಸುತ್ತಿತ್ತು ರಂಗನಿಗೆ. ಅವನು ಹೇಳಿದರೆ ಕೇಳುವವರು ಯಾರು?

ಎಪ್ರಿಲ್ ತಿಂಗಳ ಮಧ್ಯಭಾಗದಲ್ಲಿ ಶಾಲಾ ವರ್ಷ ಮುಗಿದು ಮಕ್ಕಳೆಲ್ಲರ ಪರೀಕ್ಷೆಯ ಫಲಿತಾಂಶ ಹೇಳಿದ ದಿನ, ಶೇಡಿಗುರಿಯ ಕಡೆ ನಡೆದು ಹೋಗುತ್ತಿರುವ ಮಕ್ಕಳಲ್ಲಿ ಎಲ್ಲರಿಗಿಂತ ದೊಡ್ಡವನಾದ ಸಂಜೀವ ಒಬ್ಬ ಫೈಲಾಗಿದ್ದ. ಉಳಿದವರೆಲ್ಲ ಪಾಸಾಗಿದ್ದು ರಂಗನಂತೂ ತರಗತಿಗೇ ಪ್ರಥಮ ಸ್ಥಾನದಲ್ಲಿದ್ದ. ರಂಗನ ಪ್ರಗತಿಯ ಬಗ್ಗೆ ಎಲ್ಲರೂ ಆಚ್ಚರಿಪಡುವಂತಾಗಿತ್ತು.

ಮಧ್ಯಾಹ್ನ ಹನ್ನೆರಡು ಗಂಟೆಯ ಹೊತ್ತಿಗೆ ಮಕ್ಕಳೆಲ್ಲರೂ ಓಡು ನಡಿಗೆಯಿಂದ ಆ ದಾರಿಯಲ್ಲಿ ಬರುತ್ತಿರುವಾಗ ಎಂದಿನಂತೆ ರಂಗ ಸೀಬೆ ಮರದೆಡೆ ತಿರುಗುವ ಮೊದಲೇ,

"ಮಗೂ ಮುದ್ದು ರಂಗಾ!" ಎಂಬ ಸ್ವರ! ಬಾಟಲಿಯ ನೀರನ್ನು ಮರದ ಬುಡಕ್ಕೆ ಎರೆದು ಮುಗಿಸುವುದರೊಳಗೇ ಇಪ್ಪತ್ತಕ್ಕೂ ಹೆಚ್ಚು ಸೀಬೆ ಹಣ್ಣುಗಳು ಅವನ ಕಾಲ ಬುಡದಲ್ಲಿ ಸಿದ್ಧವಾಗಿದ್ದವು! ಚಡ್ಡಿ ಕಿಸೆಯಲ್ಲಿದ್ದ ಪ್ಲಾಸ್ಟಿಕ್ ಕವರೊಂದನ್ನು ತೆಗೆದು ಅದಕ್ಕೆ ಹಣ್ಣುಗಳನ್ನು ತುಂಬಿ ಬಾಟಲಿಯನ್ನು ಅದರ ಮೇಲ್ಭಾಗದಲ್ಲಿಟ್ಟಾಗ ಚೀಲವನ್ನು ಯಾರೋ ಎತ್ತಿ ಹಿಡಿದ ಅನುಭವ! ಹೆಚ್ಚೇಕೆ ತನ್ನನ್ನೇ ಎತ್ತಿಕೊಂಡು ಹೋಗುತ್ತಿದ್ದಾರೇನೋ ಎನ್ನುವಂತಾಗಿ ತೇಲುತ್ತಾ ಮುಂದೆ ಸಾಗುತ್ತಿದ್ದ ಅವನು. ಮನೆಯ ದಾರಿ ಹಿಡಿದು ಹೆಚ್ಚಿನ ಮಕ್ಕಳು, ರಂಗನ ಅಣ್ಣ ರಾಮು ಎಲ್ಲರೂ ಬಹಳ ದೂರ ಹೋಗಿ ಬಿಟ್ಟಿದ್ದರು. ಸಂಜೀವ ಒಬ್ಬನೇ ಅಳುಮುಂಜಿಯಂತೆ ಬಿಕ್ಕುತ್ತಾ, ಕಣ್ಣೀರೊರಸುತ್ತಾ ನಿಧಾನವಾಗಿ ಬಹಳ ಹಿಂದೆ ನಡೆದು ಬರುತ್ತಿದ್ದ. ಫೈಲಾದ್ದಕ್ಕೆ ಅವನಿಗೆ ಚಿಂತೆಯೆನಿಸದಿದ್ದರೂ ಮನೆಯಲ್ಲಿ ದೊರೆಯಬಹುದಾದ ಶಿಕ್ಷೆಗೆ ಅಳುಕಲೇಬೇಕಾಗಿತ್ತು.

"ಏ ರಂಗಾ! ಏನೋ ಗಾಳಿಯಲ್ಲಿ ತೇಲುತ್ತೀಯೋ ಹೇಗೆ?"

ಸಂಜೀವ ಆಶ್ಚರ್ಯದಿಂದ ಕೂಗಿ ಹೇಳುತ್ತಿದ್ದಂತೆ ರಂಗ ಮುಂದೆ ಸಾಗಿದ. ಅವನ ಕಿವಿಯಲ್ಲಿ ಅದೇ ಪರಿಚಿತ ಸ್ವರದ ಪಿಸುಮಾತು.

"ನಾನು ಭೂತ ಎಂದು ಹೆದರಬೇಡ" ಭೂತ ಎಂದರೆ ಮತ್ತೇನಲ್ಲ. ಹಿಂದೆ ಇದ್ದವನು ಎಂದು ಅರ್ಥ ಅಷ್ಟೆ. ನಾನು ಕೆಲವು ವರ್ಷಗಳ ಹಿಂದೆ ಮನುಷ್ಯ ಜೀವಿ ಆಗಿದ್ದೆ. ನಾನು ಮಾಡಿದ ಒಂದು ದೊಡ್ಡ ಪಾಪದ ಕೆಲಸ ಎಂದರೆ ನೀರನ್ನೆಲ್ಲ ಹಾಳು ಮಾಡಿದ್ದು, ಶುದ್ಧ ನೀರನ್ನು ಕೊಳಕು ಮಾಡಿದ್ದು. ಎಷ್ಟೋ ಜನರ ಬಾಯಿಯಿಂದ "ಅಯ್ಯೋ ನೀರು! ನೀರು ಬೇಕು!" ಎನ್ನುವಂತೆ ಮಾಡಿದ್ದು ನನ್ನ ಅತಿಯಾಸೆಯಿಂದ. ಯಂತ್ರ, ಕೈಗಾರಿಕೆ, ಕಾರ್ಖಾನೆ, ಔಷಧವಸ್ತು ಎಂದೆಲ್ಲಾ ತಪ್ಪು ತಪ್ಪಾಗಿ ತೊಡಗಿ ಬೇಡವಾದ ರೀತಿಯಲ್ಲಿ ನೀರನ್ನೆಲ್ಲ ಕಲುಷಿತಗೊಳಿಸಿದೆ. ಜನರು ಅತ್ತು ನರಳಿದರು. ಮರ ಗಿಡಗಳು ಒಣಗಿದವು, ಸತ್ತವು. ನನ್ನ ಮನಸ್ಸು ಕರಗಲಿಲ್ಲ. ಕೊನೆಗೆ ನಾನೂ ಒಂದು ದಿನ ಪ್ರಾಣ ಬಿಟ್ಟಾಗ ನನಗೆ ಮೋಕ್ಷ ಅಥವಾ ಸದ್ಗತಿ ಇಲ್ಲವಾಯಿತು. ಒಂದು ವರ್ಷದ ವರೆಗೂ ಯಾರ ಕಣ್ಣಿಗೂ ಬೀಳದೆ ಗುಡ್ಡದ ಬದಿಗಳಲ್ಲೆಲ್ಲಾದರೂ ತೇಲುತ್ತಾ ಇದ್ದು ಯಾರಿಗಾದರೂ ನೀರನ್ನೊದಗಿಸುವ ಉಪಕಾರ ಮಾಡಬೇಕು. ಆಗ ಮಾತ್ರ ನನಗೆ ಬಿಡುಗಡೆ ಎಂದು ತಿಳಿಯಿತು. ಏನು ಮಾಡಲಿ ನಾನು?



ಸಾಯಲು ಹೊರಟಿರುವ ಅನೇಕ ಗಿಡಮರಗಳಲ್ಲಿ ಸೇರಿಕೊಂಡು "ನೀರು ನೀರು ಎಂದೆ. ಹೆಚ್ಚಿನವರು ಕಣ್ಣೆತ್ತಿಯೂ ನೋಡಲಿಲ್ಲ. ಕೆಲವರು ಮಾತ್ರ ನೀರು ಹನಿಸಿದರು. ನೀನು ತುಂಬಾ ಒಳ್ಳೆಯ ಹುಡುಗ! ಒಂದಿಷ್ಟು ನೀರನ್ನು ವ್ಯರ್ಥ ಮಾಡದೆ ದಿನವೂ ಈ ಸೀಬೆಗಿಡಕ್ಕೆ ಹೊಯ್ದು ಅದನ್ನು ಉಳಿಸಿದ್ದಿ! ನಾನು ಅದರೊಂದಿಗೇ ಇದ್ದೆ. ಗಿಡವು ಚಿಗುರಿ ಹೂ ಬಿಟ್ಟು ನಿನಗೆಂದು ಉತ್ತಮ ಫಲ ಕೊಟ್ಟಿತು. ಇದೀಗ ಬೆಳೆದ ಆ ಮರಕ್ಕೆ ಇನ್ನೇನೂ ಕೆಡುಕಾಗದು. ನಿನ್ನನ್ನೀಗ ಮನೆಯ ತನಕ ತಲುಪಿಸಿ ನಾನು ಸ್ವತಂತ್ರನಾಗುತ್ತೇನೆ. ನನ್ನ ಹಿಂದಿನ ತಪ್ಪಿಗೆಲ್ಲಾ ಕ್ಷಮೆ ಸಿಕ್ಕಿದೆ. ಇದು ನಿನ್ನ ಉದಾರ ಮನಸ್ಸಿನಿಂದಾಗಿ ನನಗೆ ಸಿಕ್ಕಿದ ಸಹಾಯ. ನಿನಗೆ ಒಳ್ಳೆಯದಾಗಲೆಂದು. ನಿನ್ನಲ್ಲಿ ಒಳ್ಳೆಯ ಗುಣಗಳು ಇನ್ನೂ ಬೆಳೆದು ಬರಲೆಂದೂ ಹರಸಿ ನಾನೀಗ ಹೊರಟು ಬಿಡುತ್ತೇನೆ. ನಮ್ಮ ಸೀಬೆಮರವೂ ನಿನ್ನ ಉಪಕಾರವನ್ನು ಎಂದೂ ಮರೆಯದು ಹೋಗಲಾ ನಾನು? ಮುದ್ದು ರಂಗ!" ಎಂದು ಹೇಳಿ ಮನೆಯ ಮೆಟ್ಟಿಲಲ್ಲಿ ತನ್ನನ್ನು ನಿಲ್ಲಿಸಿದಾಗ ಆಶ್ಚರ್ಯದಿಂದ ಮೂಕನಂತಾಗಿದ್ದ ರಂಗ.

ಏದುಸಿರು ಬಿಡುತ್ತಾ ಓಡಿ ಬಂದ ಸಂಜೀವ. "ರಂಗಾ ಎಷ್ಟೊಂದು ಸೀಬೆ ಹಣ್ಣು! ನನಗೂ ಕೊಡೋ" ಎಂದು ಕೂಗಿ ಹೇಳುತ್ತಿರಲು ಅಲ್ಲಿ ಹಲವು ಮಂದಿ ಮಕ್ಕಳೂ, ದೊಡ್ಡವರೂ ಬಂದು ಸೇರಿದರು.

ಇಂದಿರಾ ಹಾಲಂಬಿ

## ಇಂದಿರಾ ಹಾಲಂಬಿ



ಇಂದಿರಾ ಹಾಲಂಬಿಯವರು ಉಡುಪಿ ಜಿಲ್ಲೆಯ ಅತ್ರಾಡಿಯವರು. 'ಸಂದೀಪಸಾಹಿತ್ಯ' ಎಂಬ ಮಕ್ಕಳ ಸಾಹಿತ್ಯ ಪ್ರಕಾಶನ ಸಂಸ್ಥೆಯನ್ನು ನಡೆಸುವ ಇವರು ಮಕ್ಕಳ ಸಾಹಿತ್ಯ ಲೇಖಕರೆಂದೇ ಪ್ರಖ್ಯಾತರು. ವೈವಿಧ್ಯಪೂರ್ಣ ಶಿಶುಸಾಹಿತ್ಯ ಕೃತಿಗಳನ್ನು ಸ್ವತಃ ರಚಿಸಿ ಪ್ರಕಟಿಸುತ್ತಿದ್ದಾರೆ. ಪ್ರಾಣಿ ಪರ್ಯಾಯ, ಹೆಜ್ಜೆಯ ಗೆಜ್ಜೆ ಮೊದಲಾದ ಇಪ್ಪತ್ತೇಳು ಪುಸ್ತಕಗಳನ್ನು ಪ್ರಕಟಿಸಿರುವರು. ಪೌರಾಣಿಕ, ಚಾರಿತ್ರಿಕ ನಾಟಕಗಳನ್ನೂ ರಚಿಸಿರುವರು. ಇವರ 'ಚಿಣ್ಣರಿಗಾಗಿ ಕನ್ನಡ ಕತೆಗಳು' ಎಂಬ ಕಥಾಸಂಕಲನದಿಂದ ಈ ಕತೆಯನ್ನು ಆಯ್ದುಕೊಳ್ಳಲಾಗಿದೆ.

## ಚಟುವಟಿಕೆಗಳು

### ❑ ಉತ್ತರಿಸಿರಿ

- ಊರ ಪಂಚಾಯತಿನವರು ಶಾಲೆಗಾಗಿ ಒಂದು 'ಕೊಳವೆಬಾವಿ' ತೋಡಿಸಿಕೊಡಲು ಕಾರಣವೇನು?
- ರಂಗನ ಬಳಿ ನೀರು ಕೇಳಿದ್ದು ಯಾರು? ರಂಗನು ಏನು ಮಾಡಿದನು?
- ರಂಗನ ಗೆಳೆಯರು ಅವನನ್ನು ತಮಾಷೆಮಾಡಿದ್ದು ಸರಿಯೇ? ನೀವಾದರೆ ಏನು ಮಾಡುತ್ತಿದ್ದಿರಿ?
- ಮಾರ್ಚ್ ತಿಂಗಳು ಮುಗಿದು ಏಪ್ರಿಲ್ ಮೊದಲಾಗುವಾಗ ಸೀಬೆ ಮರದಲ್ಲಿ ಆದ ಬದಲಾವಣೆಯೇನು? ಇದರಿಂದ ರಂಗನಿಗೆ ಆದ ಪ್ರಯೋಜನವೇನು?
- 'ನಾನು ಭೂತ ಎಂದು ಹೆದರಬೇಡ' ಎಂದ ಭೂತದ ವೃತ್ತಾಂತ ಬರೆಯಿರಿ.

### ❑ ಭಿತ್ತಿ ಪತ್ರ ತಯಾರಿಸಿರಿ

ನೀರಿನ ಮಹತ್ವದ ಕುರಿತು ಭೂತ ಹೇಳಿದ ಮಾತು ರಂಗನಲ್ಲಿ ಪ್ರಭಾವ ಬೀರಿತು. ನೀರಿನ ಮಹತ್ವವನ್ನು ಅರಿತನು. ಎಲ್ಲರೂ ನೀರಿನ ಸಂರಕ್ಷಣೆ ಮಾಡಬೇಕು. ಇದಕ್ಕಾಗಿ ಏನಾದರೂ ಮಾಡಲೇಬೇಕು ಎಂದು ತೀರ್ಮಾನಿಸಿದನು. 'ನೀರಿನ ಸಂರಕ್ಷಣೆಯ ಕುರಿತು ತಿಳುವಳಿಕೆ' ಮೂಡಿಸುವ 'ಭಿತ್ತಿಪತ್ರ' ವನ್ನು ತಯಾರಿಸಬೇಕೆಂದುಕೊಂಡನು. ಆ ಭಿತ್ತಿಪತ್ರ ಹೇಗಿರಬಹುದು? ಮಾಡಿ ನೋಡಿರಿ.

## ❑ ಕಥೆ ಪೂರ್ತಿಗೊಳಿಸಿರಿ

ಆವರಣದಲ್ಲಿ ಕೊಟ್ಟಿರುವ ಪದಗಳ ಸಹಾಯದಿಂದ 'ಹಾರುವ ತಟ್ಟೆ' ಎಂಬ ಸಣ್ಣ ಕಥೆಯನ್ನು ಪೂರ್ತಿಗೊಳಿಸಿರಿ.

# ಹಾರುವ ತಟ್ಟೆ

(ಬೆಲೂನಿಗಾಗಿ; ಕನವರಿಸೊದು; ಕಳಿಸಿ ಕೊಡ್ತೇವೆ; ದೊಡ್ಡದಾಗಿ; ತೋಟವೊಂದರಲ್ಲಿ; ಸುರಿಯುತ್ತಿರುವ; ಹಿಂದೆಹಾಕುತ್ತಾ; ಮಾತುಗಳಿಂದ; ಆಶ್ಚರ್ಯದಿಂದ; ನೇತಾಡುತ್ತಿದ್ದು; ಹಾದುಹೋಗಿ; ಹೋಗಿದ್ದ; ಮಾತಾಡಿಸಿ; ತಿರುಗಾಡುತ್ತಿರುವ; ಮುತ್ತಿಕೊಂಡರು; ಕಣ್ಣುತೆರೆದು; ಹಾಯಿಸಿದಲ್ಲೆಲ್ಲಾ; ಪಾತ್ರೆಯಲ್ಲಿ).

ಅದೊಂದು ದಿನ ಜಾತ್ರೆಗೆ ...... ನಾಗೇಶ ಮತ್ತು ನಟರಾಜ ಮನೆ ಕಡೆಗೆ ಹಿಂತಿರುಗುತ್ತಿದ್ದರು. ಅತೀ ...... ಬೆಳೆದ ಬಣ್ಣ ಬಣ್ಣದ ಬೆಲೂನಿನೊಂದಿಗೆ ನಟರಾಜನು ಆಕಾಶದೆತ್ತರಕ್ಕೆ ಏರಿಬಿಟ್ಟ. ಅದರೊಂದಿಗೆ ........ ಹೋಗುವುದು ಒಂದು ತರದ ಮಜಾ ಎನಿಸತೊಡಗಿತು. ಮೊಡಗಳನ್ನು ದಾಟಿ ಚಂದ್ರ ತಾರೆಗಳನ್ನು ......... ಎಷ್ಟೋಹೊತ್ತಿನ ಬಳಿಕ ಒಂದುನೆಲದಲ್ಲಿ ನಟರಾಜನನ್ನು ಇಳಿಸಿ ಬೆಲೂನು ಮೂಲೆ ಸೇರಿತು. ಅಲ್ಲಿ ಕೆಲವು ವ್ಯಕ್ತಿಗಳು ........ . ನಸುನಗುತ್ತಾ ........ ತಮ್ಮ ರಾಜನ ಅರಮನೆಗೆ ಕರೆದುಕೊಂಡು ಹೋದರು.

ಕಣ್ಣು ................ ಪ್ರಕಾಶಮಾನವಾದ ಕಟ್ಟಡಗಳು ಕಾಣತೊಡಗಿದುವು. ಸುಂದರವಾಗಿ ಅಲಕಂರಿಸಿಕೊಂಡು ................. ಯುವಕ, ಯುವತಿಯರು, ವಿಚಿತ್ರವಾದ ಮರ, ಗಿಡ, ಬಳ್ಳಿ, ಹೂಗಳು, ಕಾರಂಜಿಗಳು ಅಲ್ಲಿದ್ದುವು. ಅವರ ................... ಆ ವ್ಯಕ್ತಿಗಳು ದೇವತೆಗಳೆಂದು ಅರಿತುಕೊಂಡ. ಭವ್ಯವಾದ ಮಂದಿರಗಳನ್ನು ................... ವಿಶಾಲ ಬೀದಿಯಲ್ಲಿ ವಾಹನ ಸಾಗುತ್ತಿತ್ತು. ಅಲ್ಲಲ್ಲಿ ಹಳದಿ, ಕೆಂಪು, ವರ್ಣಗಳಿಂದ ತುಂಬಿದ ಹಣ್ಣುಗಳು ಮರದಲ್ಲಿ ........................ ನಟರಾಜನಿಗೆ ಬಾಯಲ್ಲಿ ನೀರೂರುವಂತಾಯಿತು. ಎಲ್ಲರನ್ನು ಹೊತ್ತ ಆ ವಾಹನ ಉದ್ಯಾನದ ಬಳಿ ನಿಂತಿತು. ಅವರೆಲ್ಲ ಕೆಳಗಿಳಿದರು. ಬಾ, ಮಗೂ... ಕಾರಂಜಿಯ ಕಡೆಗೆ ಎಂದು ಉದ್ಯಾನದ ಒಡೆಯನು ಕರೆದನು. ಕಾರಂಜಿಯ ಮುಂದೆ ಬಂದುನಿಂತ ನಟರಾಜ ......................... ಕಣ್ಣು ತಿಕ್ಕಿಕೊಂಡು ದಿಟ್ಟಿಸಿ ನೋಡಿದ.

ಸುತ್ತಲೂ ................ ನೀರಿನ ರಾಶಿ ಮುತ್ತಿನ ಮಣಿಗಳಂತೆ ಶುಭ್ರವಾಗಿತ್ತು. ರತ್ನಖಚಿತ .................. ನೀರನ್ನು ಹಿಡಿದು ನಟರಾಜನಿಗೆ ಕೊಟ್ಟರು. ಇನ್ನು ನಿನ್ನ ಮನೆಗೆ ತೆರಳು ಎಂದು ಅವರು ಸೂಚಿಸಿದರು. ನಟರಾಜನು ತನ್ನ .................... ಹುಡುಕಿದನು. ನನ್ನ ಬೆಲೂನ್ ಎಲ್ಲಿ ಎಂದು ಕೇಳಿದನು. ಆ ಬೆಲೂನು ಆಗಲೇ ನಾಶವಾಗಿದೆ. ನಿನ್ನನ್ನು 'ಹಾರುವ ತಟ್ಟೆ' ಯಲ್ಲಿ ......................... ಎಂದರು. ಅವರೆಲ್ಲಾ ಮಾಯವಾದರು.

'ಹಾರುವ ತಟ್ಟೆ' ಎಲ್ಲಿ? ಎಂದು ನಟರಾಜ ಕಿರುಚತೊಡಗಿದಾಗ ಅವನನ್ನು ಯಾರೋ ಜೋರಾಗಿ ತಟ್ಟಿದರು. ಒಮ್ಮೆಲೇ ............... ನೋಡಲು ಎದುರಲ್ಲಿ ಅಮ್ಮ! "ಹಗಲಿಡೀ ಟಿ.ವಿ. ನೋಡೋದು.... ಏನನ್ನೆಲ್ಲಾ ................... " ನಟರಾಜ ಎದ್ದು ಬಚ್ಚಲು ಮನೆಯತ್ತ ಹೊರಟನು.

- **ಅಭಿನಯಿಸಿರಿ**

ಪಾಠಭಾಗದಲ್ಲಿ ನಿಮಗೆ ಇಷ್ಟವಾದ ಸನ್ನಿವೇಶವನ್ನು ಸಂಭಾಷಣೆ ರೂಪದಲ್ಲಿ ಬರೆಯಿರಿ. ಅಭಿನಯಿಸಿರಿ.

## ಕಲಿಕಾ ಸಾಧನೆಗಳು

- ಕಥೆ, ಕವಿತೆಗಳನ್ನು ಸೂಕ್ತವಾದ ಭಾವಾಭಿವ್ಯಕ್ತಿಯೊಂದಿಗೆ ಮಂಡಿಸುವುದು.
- ಕಥೆ, ಕವಿತೆ, ನಾಟಕ ಮೊದಲಾದ ಸೃಜನಾತ್ಮಕ ರಚನೆಗಳ ರಚನಾ ರೀತಿ, ಔಚಿತ್ಯ, ವೈವಿಧ್ಯ ಮೊದಲಾದವುಗಳನ್ನು ಪರಿಗಣಿಸಿಕೊಂಡು ಸ್ವಂತ ದೃಷ್ಟಿಕೋನಕ್ಕನುಸಾರವಾಗಿ ಆಸ್ವಾದಿಸಿ, ವಾಚಿಕವಾಗಿ ಮಂಡಿಸುವುದು ಮತ್ತು ಬರೆದು ಮಂಡಿಸುವುದು.
- ವಿವಿಧ ಆಶಯ ಮಂಡಲಗಳಿಗೆ ಸಂಬಂಧಿಸಿದ ಚರ್ಚೆ ಸಂವಾದಗಳಲ್ಲಿ ಭಾಗವಹಿಸಿ; ಆಶಯಗಳನ್ನೂ ಅಭಿಪ್ರಾಯಗಳನ್ನೂ ತರ್ಕಬದ್ಧವಾಗಿ ಮಂಡಿಸುವುದು.
- ಚರ್ಚೆ, ಸಂವಾದಗಳಿಂದ ರೂಪುಗೊಂಡ ಆಶಯಗಳನ್ನು ಕ್ರೋಢೀಕರಿಸಿ; ವಾಚಿಕವಾಗಿಯೂ ಲಿಖಿತ ರೂಪದಲ್ಲಿಯೂ ಪ್ರಕಟಿಸುವುದು.
- ಸ್ವಂತ ಅಭಿಪ್ರಾಯಗಳನ್ನು ಶಿಷ್ಟಭಾಷೆಯಲ್ಲಿ ಮಂಡಿಸುವುದು.
- ಮೌಲ್ಯನಿರ್ಣಯ ಸೂಚಕಗಳನ್ನು ಸ್ವಯಂ ಕಂಡುಕೊಂಡು ತನ್ನ ಮತ್ತು ಇತರರ ರಚನೆಗಳ ಮೌಲ್ಯನಿರ್ಣಯ ಮಾಡುವುದು.
- ಸಾಮಾಜಿಕ ಮಹತ್ವವುಳ್ಳ ವಿಷಯಗಳನ್ನು ಆಧಾರವಾಗಿರಿಸಿ ಪ್ರಬಂಧ, ಮನವಿ, ಭಾಷಣ ಇತ್ಯಾದಿಗಳನ್ನು ರಚಿಸುವುದು.
- ಕೇರಳದ ಕಲಾಪ್ರಕಾರಗಳನ್ನು ಆಸ್ವಾದಿಸುವುದು ಮತ್ತು ಅವುಗಳ ಬಗ್ಗೆ ತಿಳಿದುಕೊಳ್ಳುವ ಚಟುವಟಿಕೆಗಳಲ್ಲಿ ತೊಡಗುವುದು.

# 4. ಬೇವು - ಬೆಲ್ಲ



ಜೀವನದಲ್ಲಿ ಸುಖದುಃಖಗಳು ನಾಣ್ಯದ ಎರಡು ಮುಖಗಳಿದ್ದಂತೆ. ನಾವು ವಾಸಿಸುವ ಭೂಮಿಯು ಈ ಆಶಯದ ಪ್ರತೀಕವಾಗಿದೆ. ವಿವಿಧ ಕಾಲಗಳಲ್ಲಿ ತನ್ನ ಮೇಲೆ ಆಗುವ ಪರಿಣಾಮಗಳನ್ನು ಸಮರ್ಥವಾಗಿ ಎದುರಿಸಿ, ನಮ್ಮ ಜೀವನಕ್ಕೆ ಮಾರ್ಗದರ್ಶನ ನೀಡುತ್ತಿದೆ. ಹೀಗಿದ್ದರೂ ಪ್ರಕೃತಿಯ ಮೇಲಿನ ಮಾನವನ ಚೆಲ್ಲಾಟದಿಂದ ಭೂಮಿ ಇಕ್ಕಟ್ಟಿಗೆ ಸಿಕ್ಕಿರುವುದಂತೂ ಸತ್ಯ. ದುರ್ವ್ಯಸನ, ಮಹತ್ವಾಕಾಂಕ್ಷೆಗಳು ಮಾನವನನ್ನು ದುಃಖದ ಕೂಪಕ್ಕೆ ತಳ್ಳುವುದಲ್ಲದೆ ಆತನ ಅಸ್ತಿತ್ವವನ್ನೇ ಅಲ್ಲಾಡಿಸುತ್ತವೆ ಎಂಬುದು ಕಟುವಾಸ್ತವ.

# ನೆಲದ ಕರೆ

ನೀರು ಭೂಮಿಯ ಜೀವಜಾಲದ ಉಳಿವಿಗೆ ಅಗತ್ಯವಾದ ಘಟಕ. ಇದಿಲ್ಲದೆ ಜೀವನ ನಿರ್ವಹಣೆ ತುಂಬಾ ಕಷ್ಟ ಸಾಧ್ಯ. ಬಾಯಾರಿದವರ ಸಂಕಟ ಮತ್ತು ನೀರು ದೊರಕಿದಾಗ ಆಗುವ ಸಂತೋಷ ಅಷ್ಟಿಷ್ಟಲ್ಲ.



ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೆ
ನಾಲ್ಕು ಹನಿಯ ಚೆಲ್ಲಿ,
ದಿನದಿನವು ಕಾದು ಬಾಯಾರಿ ಬೆಂದೆ
ಬೆಂಗದಿರ ತಾಪದಲ್ಲಿ ||೧||

ನನ್ನೆದೆಯ ಹಸಿರ ಉಸಿರು ಕುಗ್ಗಿದರು
ಬರಲಿಲ್ಲ ನಿಮಗೆ ಕರುಣ
ನನ್ನ ಹೃದಯದಲಿ ನೋವು ಮಿಡಿಯುತಿದೆ
ನಾನು ನಿಮಗೆ ಶರಣ ||೨||

ಬಡವಾದ ನನ್ನ ಒಡಲುರಿಯ ಬೇಗೆ
ನಿಮಗರಿವು ಆಗಲಹುದೆ?
ನೀಲಗಗನದಲಿ ತೇಲಿ ಹೋಗುತಿಹ
ನಿಮ್ಮನೆಳೆಯಬಹುದೆ? ||೩||

ಬಾಯುಂಟು ನನಗೆ, ಕೂಗಬಲ್ಲೆ ನಾ
ನಿಮ್ಮೆದೆಯ ಪ್ರೇಮವನ್ನು
ನೀವು ಕರುಣಿಸಲು ನನ್ನ ಹಸಿರೆದೆಯು
ಉಸಿರುವುದು ತೋಷವನ್ನು ||೪||

ಓ ಬನ್ನಿ ಬನ್ನಿ, ಓ ಬನ್ನಿ ಬನ್ನಿ,
ನನ್ನೆದೆಗೆ ತಂಪ ತನ್ನಿ,
ನೊಂದ ಜೀವರಿಗೆ ತಂಪನೀಯುವುದೆ
ಪರಮಪೂಜೆಯೆನ್ನಿ! ||೫||

ಡಾ। ಜಿ.ಎಸ್. ಶಿವರುದ್ರಪ್ಪ

## ಡಾ। ಜಿ.ಎಸ್. ಶಿವರುದ್ರಪ್ಪ



ಡಾ। ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ 2.7.1926 ರಂದು ಜನಿಸಿದರು. ಇವರು ಮೈಸೂರು ಮಹಾರಾಜ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ವೃತ್ತಿ ಆರಂಭಿಸಿದರು. ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿ ನಿವೃತ್ತರಾದರು. 1960 ರಲ್ಲಿ ಇವರ ಸೌಂದರ್ಯ ಸಮೀಕ್ಷೆ ಎಂಬ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿ ದೊರಕಿತು. 'ಮಾಸ್ಕೋದಲ್ಲಿ 22 ದಿನ' ಎಂಬ ಕೃತಿಗೆ ಸೋವಿಯೆಟ್ ಲ್ಯಾಂಡ್ ನೆಹರೂ ಪ್ರಶಸ್ತಿ ಮತ್ತು 'ಕಾವ್ಯಾರ್ಥ ಚಿಂತನ' ಎಂಬ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಲಭಿಸಿವೆ. 1991 ರಲ್ಲಿ ದಾವಣಗೆರೆಯಲ್ಲಿ ನಡೆದ 61ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. 2007ರಲ್ಲಿ ಇವರಿಗೆ ರಾಷ್ಟ್ರಕವಿ ಬಿರುದು ಲಭಿಸಿತು. ಸಾಮಗಾನ, ಚೆಲುವು ಒಲವು, ತೀರ್ಥವಾಣಿ, ಕಾರ್ತಿಕ, ಅನಾವರಣ, ದೀಪದ ಹೆಜ್ಜೆ, ದೇವಶಿಲ್ಪಿ, ಸಂಜೆದಾರಿ ಮೊದಲಾದವು ಇವರ ಕವನ ಸಂಕಲನಗಳಾಗಿವೆ. 'ನೆಲದ ಕರೆ' ಕವನವನ್ನು ಶಿವರುದ್ರಪ್ಪನವರ 'ಸಾಮಗಾನ' ಎಂಬ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

### ಚಟುವಟಿಕೆಗಳು

❑ **ಹಾಡಿರಿ**

- ಈ ಕವಿತೆಯನ್ನು ರಾಗವಾಗಿ ಹಾಡಿರಿ.

❑ **ಉತ್ತರಿಸಿರಿ**

  - ಭೂಮಿಯು ಬಾಯಾರಲು ಕಾರಣವೇನು?
  - ಭೂಮಿಯ ಹೃದಯದ ನೋವೇನು?
  - ಭೂಮಿಗೆ ಸಂತೋಷವಾಗುವುದು ಯಾವಾಗ?
  - 'ಪರಮಪೂಜೆ' ಯಾವುದು?

- ಈ ಪದ್ಯದಲ್ಲಿ ಬಂದಿರುವ ಕೆಲವು ಪದಗಳು ಕೆಳಗಿನ ಕೋಣೆಗಳಲ್ಲಿ ಅಡಗಿವೆ. ಅವುಗಳನ್ನು ಪತ್ತೆಹಚ್ಚಿ ಅವುಗಳ ವಿಶೇಷತೆಯೇನೆಂದು ಬರೆಯಿರಿ.

| | | | | | |
|---|---|---|---|---|---|
| ತೋ | ಕ | ಆ | ಯ | ದ | ಶ |
| ಪೂ | ಳೆ | ಷ | ನ್ನಿ | ಹು | ಮ |
| ನ್ನು | ಜೆ | ರು | ಲ | ತ | ಲ್ಲಿ |
| ರ | ಗ | ಪ್ರೇ | ಣ | ತಾ | ದೆ |
| ಜೆ | ಎ | ವ | ಬ | ಯೆ | ಪ |

❑ **ವಾಕ್ಯಗಳನ್ನು ಗಮನಿಸಿರಿ**

- ಆಕಾಶದಲ್ಲಿ ಹಾರಾಡುತ್ತಿದ್ದ ಪಕ್ಷಿಗಳನ್ನು ನೋಡಿ ಮಕ್ಕಳಿಗೆ ಸಂತೋಷವಾಯಿತು.
- ವರ್ಣರಂಜಿತ ಗಗನವು ಸಂಜೆಯ ಸೊಬಗನ್ನು ಹೆಚ್ಚಿಸಿತು.
- ಸೂರ್ಯೋದಯದ ಸಮಯದಲ್ಲಿ ಬಾನು ಕೆಂಪಾಯಿತು.

  ಮೇಲಿನ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳು ಆಕಾಶದ ಪರ್ಯಾಯ ಪದಗಳಾಗಿವೆ. ಇದೇ ರೀತಿ ಕೆಳಗೆ ಕೊಟ್ಟ ಪದಗಳ ಪರ್ಯಾಯ ಪದಗಳನ್ನು ಉಪಯೋಗಿಸಿ ಸಾಧ್ಯವಿರುವಷ್ಟು ವಾಕ್ಯಗಳನ್ನು ರಚಿಸಿರಿ.

  ಸೂರ್ಯ, ಭೂಮಿ, ಸಂತೋಷ, ತಾಪ.

- ಈ ಹಾಡಿನ 'ಆಸ್ವಾದನ ಟಿಪ್ಪಣಿ' ಬರೆಯಿರಿ.


# ಕಪ್ಪೆಯ ವ್ಯಥೆ

ಭೂಮಿಯ ಮೇಲಿನ ಜೀವ ವೈವಿಧ್ಯತೆಯೇ ಭೂಮಿಯ ಸಹಜ ಸೌಂದರ್ಯಕ್ಕೆ ಮೂಲ ಎಂಬ ಮಾತು ನಿತ್ಯಸತ್ಯ ಮಾನವನು ತನ್ನ ಸ್ವಾರ್ಥಕ್ಕೋಸ್ಕರ ಅದರ ಮೂಲಸ್ವರೂಪವನ್ನು ಕೆಡಿಸುವುದು ಸರಿಯಲ್ಲ. ಸಕಲ ಜೀವಿಗಳಿಗೂ ಬದುಕುವ ಹಕ್ಕಿದೆ,ಭೂಮಿಯಲ್ಲಿ ಅದರದ್ದೇ ಆದ ಸ್ಥಾನವಿದೆ ಎಂಬುದನ್ನು ಪ್ರತಿಯೊಬ್ಬರೂ ಅರಿತು ಬಾಳಿದರೆ ಲೋಕಕ್ಕೇ ಒಳಿತು.

ಹಿಂದಿನ ರಾತ್ರಿ ಮಳೆ ಸುರಿದಿತ್ತು. ವರ್ಷದ ಮೊದಲ ಮಳೆ ಅದು. ಜೋರಾಗಿಯೇ ಸುರಿದಿತ್ತು. ಮಲಗಿದ್ದ ಕಿಟ್ಟನೂ ಆಗ ಎಚ್ಚರಗೊಂಡಿದ್ದ. ಮತ್ತೆ ಪುನಃ ನಿದ್ರೆಗೆ ಜಾರಿದ್ದ.

ಮರುದಿನ ಬೆಳಗ್ಗೆ ಕಿಟ್ಟನಿಗೆ ಬೇಗನೆ ಎಚ್ಚರಾಯಿತು. ರಾತ್ರಿ ಮಳೆ ಸುರಿದುದು ಅವನ ನೆನಪಿಗೆ ಬಂತು. ನಮ್ಮ ಹಳೆಯ ಕೆರೆ ಬತ್ತಿ ಹೋಗಿತ್ತಲ್ಲ? ಅದರಲ್ಲಿ ನೀರಾಗಿದೆಯೋ ನೋಡಬೇಕು" ಎನಿಸಿತು ಅವನಿಗೆ. ಒಡನೆ ಅವನು ಅಮ್ಮನನ್ನು ಕೂಗಿದ. "ಅಮ್ಮಾ ತೋಟದ ಕಡೆಗೆ ಹೋಗಿ ಬರುತ್ತೇನೆ." ಎಂದು ಹೇಳಿದ. ಮನೆಯಿಂದ ಹೊರಟು ತೋಟಕ್ಕೆ ಬಂದ.

ಹಳೆಯ ಕೆರೆಯಲ್ಲಿ ಹೂಳು ತುಂಬಿತ್ತು. ಕಿಟ್ಟ ಇಣುಕಿ ನೋಡಿದ. ತಟಕು ನೀರೂ ಅಲ್ಲಿರಲಿಲ್ಲ. ಮಣ್ಣು ಮಾತ್ರ ನೆನೆದಿತ್ತು. ಕಿಟ್ಟನಿಗೆ ನಿರಾಸೆಯಾಯಿತು. ಅವನು ಮನೆಗೆ ಹಿಂದಿರುಗಿ ಬರುವವನಿದ್ದ. ಆಗಲೇ ಅವನಿಗೆ "ಡ್ರಾಂಕ್... ಡ್ರಾಂಕ್.... ಡ್ರಾಂಕ್" ಕೂಗು ಕೇಳಿಸಿತು. ಅವನು ಅತ್ತ ನೋಡಿದ. ಕಪ್ಪೆ ಕಾಣಿಸಲಿಲ್ಲ. ಆದರೆ ಅದರ ಕೂಗು ಇನ್ನೊಮ್ಮೆ ಕೇಳಿಸಿತು. ಕೆರೆಯ ಬದಿಯ ಬಿರುಕಿನಿಂದ ಸದ್ದು ಕೇಳಿ ಬರುತ್ತಿತ್ತು. ಕಿಟ್ಟ ಕೆಳಗೆ ಇಳಿದು ಬಂದ. ಬಿರುಕಿನತ್ತ ಬಗ್ಗಿ ನೋಡಿದ. ಕಪ್ಪೆಯೊಂದು ಅಲ್ಲಿ ತಬ್ಬಿ ಕೂತಿತ್ತು.



"ಏನು ಹುಡುಗಾ, ಯಾರನ್ನು ಹುಡುಕುತ್ತಿರುವಿ?" ಅದು ಪ್ರಶ್ನಿಸಿತು. "ನಿನ್ನ ಕೂಗು ಕೇಳಿಸಿತು. ನೀನು ಎಲ್ಲಿ ಅಡಗಿದ್ದೀ ಎಂದು ನೋಡುತ್ತಿದ್ದೇನೆ. ಬಾ, ಬಿರುಕಿನಿಂದ ಹೊರಗೆ ಬಾ. ಮಾತಾಡೋಣ" ಕಿಟ್ಟ, ಕಪ್ಪೆಯನ್ನು ಕರೆದ.

"ಕೆಲವರು ಕೆಟ್ಟ ಹುಡುಗರು ಇರುತ್ತಾರೆ. ಅವರು ಕಲ್ಲು ಹೊಡೆದು ನಮಗೆ ತೊಂದರೆ ಕೊಡುತ್ತಾರೆ. ಅದೇ ಹೆದರಿಕೆ ನನಗೆ." ಕಪ್ಪೆ ಭಯ ತೋಡಿಕೊಂಡಿತು.

"ನಾನು ಕೆಟ್ಟವನಲ್ಲ. ನಿನಗೆ ತೊಂದರೆ ಕೊಡುವುದಿಲ್ಲ. ಹೊರಗೆ ಬಾ." ಕಿಟ್ಟ ಭರವಸೆ ನೀಡಿದ. ಕಪ್ಪೆ ಹೊರಕ್ಕೆ ಜಿಗಿಯಿತು.

"ಹೂಂ, ಹೊರಗೆ ಬಂದಿದ್ದೇನೆ ನೋಡು. ನಿನಗೇನು ಹೇಳಲಿದೆಯೋ ಹೇಳಿಬಿಡು." ಎಂದಿತು ಅದು.

"ಕಳೆದ ರಾತ್ರಿ ಮಳೆ ಬಂದಿತ್ತಲ್ಲ? ಅದು ನಿನಗೆ ಗೊತ್ತೇ?" ಕಿಟ್ಟ ಕೇಳಿದ. "ಮಳೆ ಬರುವ ಸೂಚನೆಯನ್ನೂ ನಾನು ಗ್ರಹಿಸಬಲ್ಲೆ. ಮತ್ತೆ ಮಳೆ ಬಂದುದು ಗೊತ್ತಾಗದೆ ಇರುತ್ತದೆಯೇ?" ಕಪ್ಪೆ ಮರು ಪ್ರಶ್ನೆ ಹಾಕಿತು.

"ಇಷ್ಟು ದಿನ ನೀನು ಎಲ್ಲಿದ್ದೆ? ಏನು ಮಾಡುತ್ತಿದ್ದೆ?" ಕಿಟ್ಟ ಕುತೂಹಲ ವ್ಯಕ್ತಪಡಿಸಿದ.

"ಇಷ್ಟು ದಿನ ಕಲ್ಲುಗಳ ಎಡೆಯಲ್ಲೋ ಮಣ್ಣಿನ ಅಡಿಯಲ್ಲೋ ವಿಶ್ರಾಂತಿ ಪಡೆಯುತ್ತಿದ್ದೆ. ನಿದ್ದೆ ಮಾಡುತ್ತಿದ್ದೆ." ಕಪ್ಪೆ ಹೇಳಿತು.

"ಹಿಂದೆ ಹೆಚ್ಚಿನ ಸಂಖ್ಯೆಯಲ್ಲಿ ನಿಮ್ಮವರು ಕಾಣಿಸುತ್ತಿದ್ದರು. ಈಗ ಕಾಣಿಸುವುದಿಲ್ಲವಲ್ಲ!" ಕಿಟ್ಟ ಕೇಳಿದ.

"ಇದ್ದವರು ಕಾಣಿಸಿಕೊಳ್ಳುತ್ತಾರೆ. ಇಲ್ಲದಿದ್ದವರು ಹೇಗೆ ಕಾಣಿಸಿಕೊಂಡಾರು?" ಕಪ್ಪೆ ಪ್ರಶ್ನೆ ಹಾಕಿತು. ಅದರ ಮಾತು ಕಿಟ್ಟನಿಗೆ ಅರ್ಥವಾಗಲಿಲ್ಲ. ಅವನು ಕಪ್ಪೆಯನ್ನೇ ಮಿಕಿಮಿಕಿ ನೋಡತೊಡಗಿದ.

ಕಪ್ಪೆ ಹೇಳಿತು. "ಪ್ರಾಣಿ–ಪಕ್ಷಿಗಳಂತೆ ಈಗ ನಮ್ಮವರ ಸಂಖ್ಯೆಯೂ ಕಡಿಮೆಯಾಗಿದೆ. ಮೊದಲಿನಂತೆ ನಾವೀಗ ಕಾಣ ಸಿಗುವುದಿಲ್ಲ."

"ಯಾಕೆ ಹೀಗಾಯಿತು? ಇದಕ್ಕೇನು ಕಾರಣ?" ಕಿಟ್ಟ ವಿಚಾರಿಸಿದ.

"ಏನು ಕಾರಣ ಎನ್ನಬೇಡ. ಯಾರು ಕಾರಣ ಎಂದು ಕೇಳು. ಒಂದೇ ಮಾತಿನಲ್ಲಿ ಉತ್ತರ ಕೊಡುತ್ತೇನೆ." ಎಂದಿತು ಕಪ್ಪೆ.

"ಹೂಂ, ಹಾಗೇ ಆಗಲಿ. ಯಾರು ಕಾರಣ ಹೇಳಿಬಿಡು" ಕಿಟ್ಟ ಕೇಳಿಕೊಂಡ.

"ನೀವು, ಉಪಕಾರಕ್ಕೆ ಪ್ರತಿಯಾಗಿ ಅಪಕಾರ ಮಾಡುವ ಮನುಷ್ಯರು" ಕಿಟ್ಟನನ್ನೇ ತೋರಿಸುತ್ತಾ ಹೇಳಿತು ಕಪ್ಪೆ.

"ಅಂದರೆ, ಮನುಷ್ಯರಿಗೆ ನೀನು ಉಪಕಾರ ಮಾಡುತ್ತೀ. ಅವರು ನಿನಗೆ ಅಪಕಾರ ಮಾಡುತ್ತಾರೆ. ಇದು ನಿನ್ನ ಮಾತಿನ ಅರ್ಥವೇ?" ಅವನು ಕೇಳಿದ.

"ಹೌದು, ಅದನ್ನು ವಿವರಿಸಿ ಹೇಳಬೇಕೇ?" ಪ್ರಶ್ನಿಸಿತು ಕಪ್ಪೆ.

"ದಯವಿಟ್ಟು ಹಾಗೆ ಮಾಡು" ಕಿಟ್ಟ ಬೇಡಿಕೊಂಡ.

"ಸರಿ, ನಾನು ಹೇಳುವುದನ್ನು ಕಿವಿಗೊಟ್ಟು ಕೇಳು. ನಾವು, ಕಪ್ಪೆಗಳು, ಹೊಟ್ಟೆಬಾಕರು ನಿಜ. ದಿನವೂ ನಮ್ಮ ಸರಿತೂಕದ ಕ್ರಿಮಿಕೀಟಗಳನ್ನು ನಾವು ತಿಂದು ಮುಗಿಸುತ್ತೇವೆ. ಇವುಗಳಲ್ಲಿ ಹಲವು ರೈತರ ಬೆಳೆಗಳಿಗೆ ಹಾನಿ ಮಾಡುವವು. ಇನ್ನು ಕೆಲವು ರೋಗರುಜಿನಗಳನ್ನು ಹರಡುವವು. ಅಂದರೆ ನಾವು ರೈತರ ಬೆಳೆಗಳ ರಕ್ಷಣೆಗೂ ನೆರವಾಗುತ್ತೇವೆ. ರೋಗರುಜಿನಗಳನ್ನು ತಡೆಯುವಲ್ಲಿಯೂ ಸಹಾಯ ಮಾಡುತ್ತೇವೆ. ಕೆಲವು ರೋಗಗಳ ಚಿಕಿತ್ಸೆಯಲ್ಲಿ ಔಷಧಿಗಾಗಿ ಸಹ ನಮ್ಮನ್ನು ಬಳಸುತ್ತಾರೆ. ಕೆಲವು ಸಂಶೋಧನೆಗಳಲ್ಲಿ ನಮ್ಮನ್ನು ಉಪಯೋಗಿಸುತ್ತಾರೆ. ಕೆಲವೆಡೆ ನಮ್ಮ ಆಹಾರವನ್ನೂ ಜನ ಇಷ್ಟಪಟ್ಟು ತಿನ್ನುತ್ತಾರೆ. ವಿವಿಧ ರೀತಿಗಳಲ್ಲಿ ಮನುಷ್ಯರಿಗೆ ನಾವು ಉಪಕಾರ ಮಾಡುತ್ತೇವೆ. ಆದರೆ ಅವರು ಮಾತ್ರ ನಮಗೆ ಕೇಡು ಬಗೆಯುತ್ತಾರೆ. ಅಪಕಾರವನ್ನೇ ಮಾಡುತ್ತಾರೆ." ಬೇಸರ ವ್ಯಕ್ತಪಡಿಸಿತು ಕಪ್ಪೆ.

"ನಾವು ಮನುಷ್ಯರು, ನಿಮಗೇನು ಅಪಕಾರ ಮಾಡುತ್ತೇವೆ? ಅದನ್ನೂ ಹೇಳಿಬಿಡು." ಕಿಟ್ಟ ಮತ್ತೆ ಕೇಳಿಕೊಂಡ.

"ಭೂಮಿಯಲ್ಲಿ ಮನುಷ್ಯರ ಸಂಖ್ಯೆ ಹೆಚ್ಚಿದ ಹಾಗೆ, ಕೃಷಿ ವಿಸ್ತರಿಸಿತು. ಕಾಡು ಕಡಿಮೆಯಾಯಿತು. ಕೈಗಾರಿಕೆಗಳು ಬೆಳೆದವು."

"ಕೃಷಿ ಹೆಚ್ಚಿದಂತೆ ರಾಸಾಯನಿಕ, ಕೀಟನಾಶಕಗಳ ಬಳಕೆ ಹೆಚ್ಚಿತು. ಕೈಗಾರಿಕೆಗಳು ಬೆಳೆದಂತೆ ಯಂತ್ರೋಪಕರಣಗಳ ಉಪಯೋಗ ಹೆಚ್ಚಿತು. ಕೃಷಿಯಲ್ಲಿ ಬಳಸಿದ ರಾಸಾಯನಿಕ – ಕೀಟನಾಶಕಗಳಿಂದಾಗಿ, ವಾಹನಗಳು, ಯಂತ್ರಗಳು ಹೊರಬಿಡುವ ಧೂಳು, ಹೊಗೆ, ಕಶ್ಮಲ, ವಿಷಾನಿಲಗಳಿಂದಾಗಿ



ಗಾಳಿ ಕೆಟ್ಟಿತು. ನೀರು ಮಲಿನಗೊಂಡಿತು. ಆಹಾರ ವಿಷಯುಕ್ತವಾಯಿತು. ನಾವು ಉಸಿರಾಡುವುದು ಚರ್ಮದ ಮೂಲಕ. ವಿಷವಸ್ತುಗಳಿಂದ ಕೂಡಿದ ಗಾಳಿ ಮತ್ತು ನೀರು ಚರ್ಮದ ಮೇಲೆ ಕೆಟ್ಟ ಪರಿಣಾಮ ಬೀರುತ್ತವೆ. ಚರ್ಮ ರೋಗಗಳಿಗೆ ನಾವು ತುತ್ತಾಗುತ್ತೇವೆ. ನಮ್ಮ ಚರ್ಮಕ್ಕೆ ಅಪಾಯ ತಟ್ಟುತ್ತದೆ. ನಮ್ಮ ಉಸಿರಾಟಕ್ಕೆ ತೊಡಕಾಗುತ್ತದೆ. ಬಹಳ ಮಂದಿ ನಮ್ಮವರು ಸಾವಿಗೆ ಈಡಾಗುತ್ತಾರೆ. ವಿಷಾಹಾರ ಸೇವನೆಯಿಂದಲೂ ನಮ್ಮವರು ಸಾಯುತ್ತಾರೆ. ಮಲಿನಗಾಳಿ, ನೀರು ಆಹಾರ ಸೇವಿಸುವವರು ತಕ್ಷಣ ಸಾಯದೆ ಇರಬಹುದು. ಆದರೆ, ಕ್ರಮೇಣ ನಮ್ಮ ಶಕ್ತಿ ಕುಂದುತ್ತದೆ. ಆರೋಗ್ಯ ಕೆಡುತ್ತದೆ. ನಾವು ಇರಿಸುವ ಮೊಟ್ಟೆಗಳ ಸಂಖ್ಯೆ ಕಡಿಮೆಯಾಗುತ್ತದೆ. ಇರಿಸಿದ ಮೊಟ್ಟೆಗಳೂ ಒಡೆಯುವುದಿಲ್ಲ. ಒಡೆದರೂ ಅಂಗವಿಕಲ ಮರಿಗಳು ಹುಟ್ಟಿಕೊಳ್ಳುತ್ತವೆ. ಅವು ಬದುಕಿ ಉಳಿಯುವುದಿಲ್ಲ. ನಮ್ಮ ಸಂತತಿ ಬೆಳೆಯುವುದಿಲ್ಲ. ದಿನದಿನಕ್ಕೆ ನಮ್ಮ ಸಂಖ್ಯೆ ಕಡಿಮೆಯಾಗುತ್ತಿದೆ. ಏನು ಹುಡುಗಾ, ನನ್ನ ಪುರಾಣ ಕೇಳಿ ಬೇಸರವಾಯಿತೆ ನಿನಗೆ?" ಕಪ್ಪೆ ಕಿಟ್ಟನನ್ನು ಪ್ರಶ್ನಿಸಿತು.

"ಇಲ್ಲಪ್ಪಾ ಇಲ್ಲ. ನಾನು ಕಿವಿಗೊಟ್ಟು ಕೇಳುತ್ತಲೇ ಇದ್ದೇನೆ" ಈಗ ನಿಮ್ಮವರು ಹೆಚ್ಚು ಸಂಖ್ಯೆಯಲ್ಲಿ ಕಾಣಸಿಗುವುದಿಲ್ಲ. ಅದಕ್ಕೆ ಕಾರಣವೇನು ಎನ್ನುವುದು ನನಗೆ ತಿಳಿದಂತಾಯಿತು" ಕಿಟ್ಟ ಹೇಳಿದ.

"ಪೂರ್ಣ ತಿಳಿದಂತೆ ಆಗಲಿಲ್ಲ. ಹುಡುಗಾ. ತಿಳಿಯಬೇಕಾದುದು ಇನ್ನೂ ಇದೆ." ಕಪ್ಪೆ ಹೇಳಿತು.

"ಇನ್ನೂ ಇದೆ? ಏನದು?" ಕಿಟ್ಟ ಕುತೂಹಲ ತೋರಿದ.

"ಹಣದ ಆಸೆಯಿಂದ ಈ ಮನುಷ್ಯರು ನಮ್ಮನ್ನೂ ಹಿಡಿದು ಮಾರಾಟ ಮಾಡುತ್ತಾರೆ. ಪ್ರತಿವರ್ಷ ಸಾವಿರಾರು ಟನ್ನುಗಳಷ್ಟು ಕಪ್ಪೆ ಆಹಾರಕ್ಕಾಗಿ ಇಲ್ಲಿಂದ ಪರದೇಶಗಳಿಗೆ ರಫ್ತಾಗುತ್ತದೆ. ಅದರಲ್ಲೂ ನಮ್ಮ ಕಾಲುಗಳಿಗೆ ವಿಶೇಷ ಬೇಡಿಕೆಯಂತೆ. ನಿನಗಿದು ಗೊತ್ತೇ? ಒಂದು ಕೆ.ಜಿ. ಕಪ್ಪೆ ಕಾಲು ಸಿಗಲು 30 ಮಂದಿ ನಮ್ಮವರು ಜೀವ ಬಿಡಬೇಕಾಗುತ್ತದೆ. ಹಾಗಾದರೆ ಸಾವಿರಾರು ಟನ್ ಭಾರ ತೂಗಲು ನಮ್ಮಲ್ಲಿ ಎಷ್ಟು ಮಂದಿಯನ್ನು ಸಾಯಿಸುತ್ತಾರೆ. ನೀನೇ ಲೆಕ್ಕ ಹಾಕಿಕೋ."

"ಇನ್ನೂ ಹೇಳಬೇಕೆಂದರೆ, ಇಂದು ಹಸಿರು ಪರಿಸರ ನಾಶವಾಗಿದೆ. ಭೂಮಿಯ ಮೇಲಿನ ಓಜೋನ್‌ಪದರ ತೆಳ್ಳಗಾಗಿದೆ. ನೆಲದ ಮೇಲೆ ಬೀಳುವ ಅಲ್ಟ್ರಾವಾಯಿಲೆಟ್ ವಿಶೇಷ ಕಿರಣಗಳು ನಮಗೆ ಅಪಾಯ ತಂದೊಡ್ಡುತ್ತವೆ. ಹಾಗೆಯೇ ಮಿತಿಮೀರಿದ ಕೈಗಾರಿಕಾ ತ್ಯಾಜ್ಯಗಳು ಇಂದು ವಾತಾವರಣ ಸೇರುತ್ತವೆ. ಇದರಿಂದಾಗಿ ಆಮ್ಲ ಮಳೆ ಸುರಿಯುವುದೂ ಇದೆ. ಇದು ಸಹ ನಮಗೆ ಹಾನಿ ಉಂಟುಮಾಡುತ್ತದೆ. ನಮ್ಮ ಸಂತತಿ ನಾಶಕ್ಕೆ ಇಂಥ ಹಲವು ಹತ್ತು ಕಾರಣಗಳಿವೆ. ಎಲ್ಲಕ್ಕೂ ಮೂಲ ಕಾರಣ ಮನುಷ್ಯ. ಅವನು ಮಾಡಿದ ಅನ್ಯಾಯದ ಫಲವಿದು. ಇದಕ್ಕೆ ತಕ್ಕ ಶಿಕ್ಷೆ ಅವನಿಗೂ ಆಗದಿರದು." ದನಿ ಎತ್ತರಿಸಿ ಹೇಳಿತು ಕಪ್ಪೆ. ಅದಕ್ಕೆ ಬಾರೀ ಕೋಪ ಬಂದಿತ್ತು.

"ಮನುಷ್ಯರಿಗೆ ಶಿಕ್ಷೆಯಾಗುವುದೇ? ಏನು ಹೇಳುತ್ತಿರುವೆ ನೀನು?" ಕಿಟ್ಟ ಪ್ರಶ್ನಿಸಿದ.

"ನಾನು ನಿಜವನ್ನೇ ಹೇಳುತ್ತಿದ್ದೇನೆ. ಮನುಷ್ಯರ ಅನ್ಯಾಯಕ್ಕೆ ತಕ್ಕ ಶಿಕ್ಷೆ ಆಗಿಯೇ ತೀರುವುದು. ಇಷ್ಟರಲ್ಲಿಯೇ ಅಂತಹ ಸೂಚನೆಗಳು ಕಾಣಿಸತೊಡಗಿವೆ." ದೃಢವಾಗಿ ಹೇಳಿತು ಕಪ್ಪೆ.

"ಅವರನ್ನು ಯಾರು ಶಿಕ್ಷಿಸುತ್ತಾರೆ? ಹೇಗೆ? ಅಂತಹ ಯಾವ ಸೂಚನೆಗಳು ಕಾಣಿಸಿಕೊಂಡಿದೆ?" ಕೆಲವು ಪ್ರಶ್ನೆಗಳನ್ನು ಒಂದೇ ಉಸುರಿಗೆ ಕೇಳಿದ ಕಿಟ್ಟ.

"ಪರಿಸರ ಕೆಡಿಸಿದವರನ್ನು ಪ್ರಕೃತಿಯೇ ಶಿಕ್ಷಿಸುತ್ತದೆ. ಮನುಷ್ಯರು ಪರಿಸರವನ್ನು ಕೆಡಿಸಿದರು. ಪರಿಣಾಮವಾಗಿ ನಮ್ಮ ಸಂತತಿ ಕ್ಷೀಣಿಸಿತು. ನಮ್ಮನ್ನು ತಿಂದು ಬದುಕುವ ಹಾವು, ಹಕ್ಕಿಗಳಿಗೆ ಆಹಾರದ ಅಭಾವ ತಲೆದೋರಿತು. ಇನ್ನೊಂದೆಡೆ ಕೀಟನಾಶಕಗಳಿಗೆ ಬಗ್ಗದ ಕ್ರಿಮಿಕೀಟಗಳೂ ಹುಟ್ಟಿಕೊಂಡವು. ಬೆಳೆಗಳಿಗೆ ಕೀಟಬಾಧೆ ಹೆಚ್ಚಿತು. ಮಲೇರಿಯಾ ಮೊದಲಾದ ರೋಗಗಳು ತಲೆಯೆತ್ತಿದವು. ಇತರ ಸಮಸ್ಯೆಗಳು ಇನ್ನಷ್ಟು ಹೆಚ್ಚಲಿವೆ. ಆಗ ಮನುಷ್ಯ ಭಾರೀ ಒದ್ದಾಡಬೇಕಾಗುತ್ತದೆ. ಆದರೇನು? ಆಗ ಅಳಿದು ಹೋದ ನಮ್ಮವರು ಬರುವುದೂ ಇಲ್ಲ. ನಾವೆಲ್ಲ ಬದುಕಿ ಇರುವುದೂ ಇಲ್ಲ. ನಮ್ಮ ಪಾಲಿಗೆ ಎಲ್ಲವೂ ಮುಗಿದಿರುತ್ತದೆ." ಹೀಗೆ ಹೇಳುತ್ತಾ ಕಪ್ಪೆ ನಿಟ್ಟುಸಿರುಬಿಟ್ಟಿತು. ಅದಕ್ಕೆ ಅಳು ಬರುವುದೊಂದು ಬಾಕಿ.

ಅಯ್ಯೋ ಪಾಪ ಎನಿಸಿತು ಕಿಟ್ಟನಿಗೆ. ಕಾತರದಿಂದ ಅವನು ಕೇಳಿದ "ಕಪ್ಪೆಯಣ್ಣಾ ನಿನಗಾಗಿ ನಾನೇನು ಮಾಡಲಿ ಹೇಳು?"

"ಪರಿಸರವನ್ನು ಉಳಿಸು, ಆಗ ನೀವು–ನಾವು ಎಲ್ಲರೂ ಉಳಿಯುತ್ತೇವೆ." ಎಂದಿತು ಕಪ್ಪೆ. ಅಷ್ಟು ಹೇಳಿ ಅದು ಹಿಂದಕ್ಕೆ ಜಿಗಿಯಿತು. ತನ್ನ ಜಾಗ ಸೇರಿಕೊಂಡಿತು.

ಆಗಲೇ ಕಿಟ್ಟನ ಅಮ್ಮ ಅವನನ್ನು ಕರೆಯುವುದು ಕೇಳಿಸಿತು.

"ಬಂದೆ ಅಮ್ಮಾ" ಎನ್ನುತ್ತ ಅವನು ಮನೆಯ ಕಡೆ ನಡೆಯತೊಡಗಿದನು.

"ಪರಿಸರ ಉಳಿಸು, ಎಲ್ಲರೂ ಉಳಿಯುತ್ತೇವೆ" ಈ
ಮಾತು ಅವನ ಕಿವಿಗಳಲ್ಲಿ ಗುಯಿಂಗುಡುತ್ತಲೇ ಇತ್ತು

ಪಳಕಳ ಸೀತಾರಾಮ ಭಟ್ಟ.

### ಪಳಕಳ ಸೀತಾರಾಮ ಭಟ್ಟ



ಶ್ರೀ ಪಳಕಳ ಸೀತಾರಾಮ ಭಟ್ಟರು 14.8.1930 ರಂದು ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆ ಪುತ್ತಿಗೆಯ ಪಳಕಳ ಎಂಬ ಗ್ರಾಮದಲ್ಲಿ ಜನಿಸಿದರು. ತಂದೆ ಈಶ್ವರ ಭಟ್ಟ. ತಾಯಿ ಲಕ್ಷ್ಮೀ ಅಮ್ಮ. ಎಂ.ಎ., ಬಿ.ಎಡ್. ಪದವೀಧರರಾದ ಇವರು ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಸೇವೆ ಸಲ್ಲಿಸಿ 1988 ರಲ್ಲಿ ನಿವೃತ್ತರಾದರು. ಇವರು ಕಥೆ, ಕವನ, ನಾಟಕ, ರೂಪಕ, ಪ್ರಹಸನ, ಪ್ರಬಂಧ, ಜೀವನ ಚರಿತ್ರೆ ಮುಂತಾದ ಸಾಹಿತ್ಯಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕರ್ನಾಟಕ ಸಾಹಿತ್ಯ ಪರಿಷತ್ತಿನ ಜಿ.ಪಿ. ರಾಜರತ್ನಂ ದತ್ತಿ ಬಹುಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮಕ್ಕಳ ಸಾಹಿತ್ಯ ಬಹುಮಾನ ಮುಂತಾದ ಹಲವಾರು ಪ್ರಶಸ್ತಿಗಳು ಸಂದಿವೆ. ಪ್ರಸ್ತುತ ಕಥೆಯನ್ನು ಪಳಕಳ ಸೀತಾರಾಮ ಭಟ್ಟರ 'ಮಕ್ಕಳಿಗಾಗಿ ಪರಿಸರ ಕತೆಗಳು' ಎಂಬ ಪುಸ್ತಕದಿಂದ ಆರಿಸಲಾಗಿದೆ.

## ಚಟುವಟಿಕೆಗಳು

### ❑ ಚರ್ಚಿಸಿರಿ

'ಪರಿಸರ ಉಳಿಸು ಎಲ್ಲರೂ ಉಳಿಯುತ್ತೇವೆ' ಕಪ್ಪೆಯ ಈ ಮಾತಿನ ಬಗ್ಗೆ ನಿಮ್ಮ ಅನಿಸಿಕೆಗಳೇನು. ಚರ್ಚಿಸಿರಿ

### ❑ ಉತ್ತರಿಸಿರಿ

- ಕಪ್ಪೆಯು ಕೆರೆಯ ಬದಿಯ ಬಿರುಕಿನಲ್ಲಿ ಅಡಗಿ ಕುಳಿತದ್ದೇಕೆ?
- ಕಪ್ಪೆಗಳು ನಮಗೆ ಹೇಗೆ ಉಪಕಾರಿಗಳಾಗಿವೆ?
- ಕಪ್ಪೆಗಳ ಸಂತತಿಯ ಮೇಲೆ ಪರಿಣಾಮಬೀರುವ ಮನುಷ್ಯನ ಚಟುವಟಿಕೆಗಳು ಯಾವುವು?
- ಪರಿಸರ ಕೆಡಿಸಿದವರನ್ನು ಪ್ರಕೃತಿ ಹೇಗೆ ಶಿಕ್ಷಿಸುತ್ತದೆ?

### ❑ ವಾಕ್ಯ ಚರ್ಚಿಸಿರಿ

ಕೆಳಗಿನ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳನ್ನು ಗಮನಿಸಿರಿ

- ಮಗೂ ನಿರ್ಭಯನಾಗಿರು, ಎಂದು ಅಜ್ಜಿ ಧೈರ್ಯ ಹೇಳಿದರೂ ರಾಮನ ಭಯ ಕಡಿಮೆಯಾಗಲಿಲ್ಲ.
- ಉಪಕಾರ ಮಾಡಿದವನಿಗೆ ಅಪಕಾರ ಮಾಡಬಾರದು.

ಅಡಿಗೆರೆ ಎಳೆದ ಪದಗಳು ಪರಸ್ಪರ ವಿರೋದಾರ್ಥ ಪದಗಳಲ್ಲಿವೇ? ಇದೇ ರೀತಿ ಕೆಳಗೆ ಕೊಟ್ಟಿರುವ ಪದಗಳನ್ನು ಬಳಸಿಕೊಂಡು ಹೊಸವಾಕ್ಯಗಳನ್ನು ರಚಿಸಿರಿ.

(ರಾತ್ರಿ, ತಂಪು, ನ್ಯಾಯ, ದುಃಖ, ಸಾವು)

### ❑ ಹೋಲಿಸಿ ಬರೆಯಿರಿ

ಒಂದು ಕಪ್ಪೆಯ ಕಥೆ–ವ್ಯಥೆ ಎಂಬ ಕಥೆಯನ್ನು ಕೆಳಗೆ ಕೊಟ್ಟಿರುವ 'ಪರಿಸರ ಮಾಲಿನ್ಯ' ಎಂಬ ಕವಿತೆಯೊಂದಿಗೆ ಹೋಲಿಸಿ ಬರೆಯಿರಿ.

## ಪರಿಸರ ಮಾಲಿನ್ಯ

ಹಲವು ಬಗೆಯಲಿದ್ದ ಹೊಗೆಯು
ಮೋಡದೊಡನೆ ಧೂಳು
ಉಸಿರ ಗಾಳಿಯನ್ನು ಹಾಳು
ಮಾಡುತಿಹುವು ಕೇಳು

ಹರಿವನದಿಯ ಕಡೆಗೆ ಸುರಿದ
ತ್ಯಾಜ್ಯ ವಸ್ತುವೆಲ್ಲ
ನೀರ ಸೇರಿ ಅದನು ಭಾರಿ
ಕೆಡಿಸುತಿಹವು ಮೆಲ್ಲ

ಬೆಳೆಯ ರೋಗ ತಡೆಗೆ ಬೇಗ
ಬಳಸುತಿರುವ ಮದ್ದು
ಅನ್ನದಲ್ಲಿ ವಿಷವ ಚೆಲ್ಲಿ
ಕೊಲುವುದುಂಟು ಖುದ್ದು

ನಾಡು ಬೆಳೆದು ಕಾಡು ಅಳಿದು
ಹೋಗುತಿರಲು ಬೇಗ
ಸೃಷ್ಟಿ ಸಮತೆ ತಪ್ಪಿ ಜನತೆ
ಕಷ್ಟಪಡುವುದೀಗ

ಪರಿಸರವನು ರಕ್ಷಿಸುವನು
ಲೋಕಕೆ ಉಪಕಾರಿ
ಕೆಡಿಸುವವನು ಕೆಡುಕನಿಹನು
ಜಗಕೆ ಅವನೆ ಮಾರಿ

### ❑ ದಿನಚರಿ ಬರೆಯಿರಿ

ಕಪ್ಪೆಯೊಂದಿಗೆ ಭೇಟಿಯಾದ ದಿನ ರಾತ್ರಿ ಊಟವಾದ ಬಳಿಕ, ಕಿಟ್ಟ ಆ ದಿನದ ದಿನಚರಿ ಬರೆಯಲು ಪ್ರಾರಂಭಿಸಿದನು. ಆಗ ಕಪ್ಪೆಯಾಡಿದ ಮಾತುಗಳು ಅವನ ಕಿವಿಗಳಲ್ಲಿ ಮಾರ್ದನಿಸತೊಡಗಿದುವು.

ಕಿಟ್ಟನ ಆ ದಿನದ ದಿನಚರಿ ಹೇಗಿರಬಹುದು? ಊಹಿಸಿ ಬರೆಯಿರಿ.


### ❑ ಪ್ರಬಂಧ ರಚಿಸಿರಿ

ಜೀವ ಸಂಕುಲಗಳ ಅಳಿಯುವಿಕೆಯಿಂದಾಗಿ ಪ್ರಾಕೃತಿಕ ಸಮತೋಲನವು ತಪ್ಪುತ್ತದೆ. ಇದರ ಕುರಿತು ಜಾಗೃತಿ ಮೂಡಿಸಲು ಒಂದು ವಿಚಾರ ಸಂಕಿರಣವನ್ನು ನಡೆಸಿರಿ. ಅವಕ್ಕಾಗಿ ಜೀವ ಸಂಕುಲಗಳ ವಿನಾಶವು ಒಂದು ಶಾಪ ಎಂಬ ವಿಷಯದ ಕುರಿತು ಪ್ರಬಂಧ ತಯಾರಿಸಿರಿ.

# ಕಡೆಕಂಜಿ

ಮಾನವನ ದುಶ್ಚಟಗಳು ಸಮಾಜವನ್ನು ಹಾಳುಗೆಡಹುತ್ತವೆ. ಅವುಗಳು ನಮ್ಮ ಅಸ್ತಿತ್ವವನ್ನೇ ಇಲ್ಲದಾಗಿಸುವಷ್ಟು ಪ್ರಬಲವಾಗಬಹುದು. ಅತಿ ಶ್ರೀಮಂತನಾದರೂ ಕಡು ಬಡವನಾದರೂ ದುರ್ವ್ಯಸನಗಳಿಗೆ ದಾಸನಾದರೆ ನಾಶ ನಿಶ್ಚಯ. ಆದರೆ ಸಕಾಲದಲ್ಲಿ ಎಚ್ಚೆತ್ತುಕೊಂಡರೆ ಹೊಸಬಾಳನ್ನು ಪಡೆಯಬಹುದು.

ತುಳುವ ನಾಡೊಳು ಹೊಳಲು ಮೆರೆವುದು ಹಳೆಯ ಕಾರ್ಕಳ ಎಂಬುದು
ಕೊಳವು ಕುಂಟೆಯು, ಪೈರುಪಚ್ಚೆಯು ತಳೆದ ಮನೆ ಅಲ್ಲಿದ್ದವು.
　　ಅರಸು ಒಂದಿನ ತಿರುಗುತಿರೆ, ಅಚ್ಚರಿಯ ಒಂದನು ಕಂಡನು –
　　ಮರುಕ ತೋರುವ, ಕರೆದು ಚೀರುವ, ಬಿರುಮ ಸೆಟ್ಟಿಯ ಕಂಡನು.
ಕಂದ ಮೋರೆಯ, ನಾಂದ ಕಣ್ಣಿನ, ಮಿಂದ ಕೆನ್ನೆಯ ಮಸುಕಿನಾ
ಬೆಂದು ಹೊರಡುವ ಮೂಗು ಸುಯ್ಲಿನ, ನೊಂದು ನೋಯುವ ಸೆಟ್ಟಿಯಾ
　　ದಿಟ್ಟ ಕೈಯಲಿ ಪುಟ್ಟ ಕರುವನು ಕಟ್ಟಿಕೊಂಡಿಹ ಸೆಟ್ಟಿಯು,
　　"ಕೆಟ್ಟೆನಯ್ಯೋ! ಕೆಟ್ಟೆನಯ್ಯೋ! ಕೆಟ್ಟೆ!" ಎಂದಳುತಿದ್ದನು.
ದೊರೆಯ ಕಂಡನು, ನಾಚಿಕೊಂಡನು; ಬಿರುಮ ಅರಿಯನು ದೊರೆಯನು;
ಇರದೆ ನಡೆದನು ಮೆಲ್ಲ ನುಡಿದನು ಒರಸಿಕೊಂಡನು ಕಣ್ಣನು.
　　"ಏನು ಸೆಟ್ಟಿಯೆ? ಹೇಗೆ ಕೆಟ್ಟೆಯೆ? ಏನು ನೀರಿದು ಕಣ್ಣಲಿ?
　　ಏನು ಬೇಸರು? ಏತಕೀ ಕರು? ಏನು? ಹೇಳ್! ಹೇಳ್!" ಎಂದನು.
ನನ್ನ ಬಾಳುವೆ – ಏನು ಹೇಳುವೆ ನನ್ನ ಹಣೆಯಲಿ ಬರೆದುದಾ?
ಚೆನ್ನ ಕರುವಿಗೆ ಬನ್ನ ಬಡುವೆನು ಕಣ್ಣ ನೀರನು ಮಿಡಿವೆನು.
　　ಹಿಂಡಿ ಹುಲ್ಲನು, ತಿಂಡಿ ಕಾಳನು ಉಂಡು ಬೆಳೆದೀ ಕರುವಿದು
　　ಗಂಡು ಅಲ್ಲವು, ಕೊಂಡು ಬಂದೆನು, ಹಿಂಡಿನಲಿ ಕಡೆಕಂಜಿಯು.



ಮಕ್ಕಳಿಲ್ಲದ, ಮಡದಿ ಇಲ್ಲದ ಚಿಕ್ಕತನದಲಿ ಹಿಂದಕೆ
ರೊಕ್ಕ ಎರಡು ವರಹ ಕೊಟ್ಟು ಅಕ್ಕರೆಯ ಕರು ಸಾಕಿದೆ.
ಗಬ್ಬವಾಯಿತು, ಅಬ್ಬೆಯಾಯಿತು, ಹಬ್ಬವಾಯಿತು ಹಾಲಿನಾ
ಒಬ್ಬಳನು ನಾ ಮದುವೆಯಾದೆನು; ಇಬ್ಬರಿದ್ದೆವು ಸುಖದಲಿ.
ಒಡಕು ಕೊಟ್ಟಿಗೆ ಹಿಡಿಯಲಾರದು; ನಡೆಗಳಿಪ್ಪತ್ತಾದವು.
ಮಡದಿ ಮಕ್ಕಳ ಹಡೆದು ಸೌಖ್ಯವು ಬಿಡದೆ ಬಳೆಯಿತು ಮನೆಯಲಿ.
ಮೂಡುಬೈಲನು ಮಾಡಿಕೊಂಡೆನು; ಜೋಡು ಹತ್ತನು ಕಟ್ಟಿದೆ;
ಓಡು ಹೊಚ್ಚಿದೆ ಮಾಡು ಹುಲ್ಲಿಗೆ; ಜೋಡು ಹಾಕಿದೆ ಕಾಲಿಗೆ.
ಏನು ಹೇಳಲಿ ಬಾನಿನಾ ಹಸು ತಾನೆ ಬಂದಂತಾಯಿತು
ಸ್ಥಾನ ಸ್ಥಾನದಿ ನಮಗೆ ಮದಿಪು ಮಾನ ಕೊಟ್ಟರು ಚೌಟರು.
ಒಡಕು ಹಣೆಯಿದು, ಕೆಡುಕು ಗ್ರಹವಿದು; ಕುಡುಕತನದಾ ಫಲವಿದು
ಒಡನೆ ಸುಯ್ಯುತ, ಹಣೆಯ ಬಡಿಯುತ ನುಡಿದ ಮುಂದಕೆ ಸೆಟ್ಟಿಯು
ಸಾಲವಾಯಿತು, ಸೋಲವಾಯಿತು. ಶಾಲು, ಸೀರೆಯ ಮಾರಿದೆ.
ಬೈಲು ಬಿಟ್ಟೆನು, ತೋಟ ಕೊಟ್ಟೆನು, ಮೂಲೆ ಕಸದಂತಾದೆನು.
ಮನೆಯು ಮಾನ್ಯವು, ಧನವು ಧಾನ್ಯವು ಕನಸು ಕಂಡಂತಾಯಿತು
ಇನಿಸು ಭಾಗ್ಯವು ಮಳೆಯು ನೀರಿನ ಹೊನಲ ನೆರೆಯಂತಾಯಿತು.
ಹೆಂಡತಿಯು ಬಳಿಕೆನ್ನ ಕೊರಳಿಗೆ ಗುಂಡುಕಲ್ಲಂತಾದಳು.
ಚೆಂಡಿನಂತಹ ಮಕ್ಕಳನ್ನ ಕಂಡು ಕಲ್ಲೆದೆ ಹಾರದು.
ಬಡವನಾದರು ಬೇಡಲೊಲ್ಲೆನು, ಹಡೆದ ಮಕ್ಕಳ ಮಾರೆನು
ಕಡವ ಪರರಿಂ, ಒಡವೆ ಹೆರರಿಂ ಪಡೆಯೆ ಪಡೆಯೆನದೆಂದಿಗೂ.
ಈವರಿಲ್ಲವು ಕಾವರಿಲ್ಲವು; ಗೋವು ಕಣ್ಮರೆಯಾದವು.
ನೋವು ತೀರದು, ಸಾವು ಬಾರದು, ದೈವ ಮುನಿದಂತಾಯಿತು.
ನಿನ್ನೆಯೋ ಎಂಬಂತೆ ಕಾಣುವ ನನ್ನದಾಗಿಹ ಹಿಂಡೊಳು
ಇನ್ನು ಎಳೆಕರು ಒಂದೆ ಬದುಕಿದೆ, ನನ್ನ ಹೆಗಲಲಿ ಮಲಗಿದೆ.
ಕರುವು ಜೊಚ್ಚಲು, ತೊರೆದ ಕೆಚ್ಚಲು ಸುರಿದು ಕುಡಿಯುವ ಮುಂಚೆಯೇ?
ತುರುವ ಮಾರಿದ, ಬರಿದೆ ಚೀರಿದ ಬಿರುಮ ಕಟುಕನು ನಾನೆಲೇ!
ಹಾರುವೆನೊ ನೀರ್ಬಾವಿಯೊಳಗೆ? ಹೀರುವೆನೋ ಕಹಿ ವಿಷವನು?
ಸೇರುವೆನೊ ಹುಲಿಗವಿಯ? ಚಟ್ಟವ ಏರುವೆನೊ? ಎನೆ ಬಗೆದನು.
ಕಾಸು ಕೈಯಿಂ, ಲೇಸು ಮೈಯಿಂ, ಮಾಸಿ ಎಲ್ಲವು ಹೋಯಿತು.
ಮೋಸ ಮಾಡಲು ಘಾಸಿ ಮಾಡಲು ಆಸೆಯಾಯಿತು ಮನದಲಿ.
ಕದ್ದ ಕಳ್ಳನ ಹಾಗೆ ಕಾಂಬರೊ ಇದ್ದವರು ಎಂದಿರುಳಲಿ
ನಿದ್ದೆ ಬಾರದು ಬುದ್ಧಿ ತೋರದು ಹೊದ್ದ ದುಗುಡದ ಹೊರೆಯಲಿ.
ಹುಚ್ಚನೆಂದರು, ಲುಚ್ಚನೆಂದರು, ಮುಚ್ಚುಮರೆಯವನೆಂದರು.
ಕಚ್ಚಿ ನುಡಿದರು, ಚುಚ್ಚಿ ನುಡಿದರು, ಪಚ್ಚಿ ದೇವರೆ ಬಲ್ಲನು.

ಎರಡು ತಿಂಗಳ ಹರೆಯ – ಮಂಗಳ ಬರಲು – ತುಂಬಿತು ವತ್ಸಗೇ

ಬಿರುಮನಂಗಳ ಸಿರಿಯು; ಕಂಗಳ ಪುರಲಿದೇ ಕಡೆಕಂಜಿಯು!

–ಎಂದು ಸೆಟ್ಟಿಯು ಮುಗಿಸಿ ಕಥೆಯನು, ಮುಂದೆ ನಡೆದನು ದಾರಿಯಾ

ಬಂದುದಾಗ ಆ ಚಂದ್ರನಾಥಗೆ ಬಂದು ನೀರ್ಗಳು ಕಣ್ಣಲಿ.

ಅರರೆ! ಬಿರುಮನೆ! ಮರೆಯದಿರು ಮನೆ, ಮರಿಯ ಮಕ್ಕಳ, ಮಡದಿಯಾ

ಬರಿದೆ ಕೊಡುವೆನು, ಬರೆದು ಕೊಡುವೆನು ಸ್ಥಿರಚರಾಸ್ತಿಯ ಉಂಬಳಿ

ಎಂದುಸುರಿ, ಮನತಂದು ಬಿರುಮನ ಕಂದನಹ ಕಡೆಕಂಜಿಯಾ

ಒಂದನುಳುಹಿದ ಹಿಂದೆ ಕಳುಹಿದ ಇಂದುನಾಥಾಧೀಶನು.

ಪಂಜೆ ಮಂಗೇಶ ರಾವ್

## ಪಂಜೆ ಮಂಗೇಶರಾವ್



ಶ್ರೀ ಪಂಜೆ ಮಂಗೇಶರಾಯರು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನಲ್ಲಿ 1874 ಫೆಬ್ರವರಿ 22ರಂದು ಜನಿಸಿದರು. ಇವರ ತಂದೆ ರಾಮಪ್ಪಯ್ಯ ಮತ್ತು ತಾಯಿ ಶಾಂತದುರ್ಗೆ. ಪಂಚಕಜ್ಜಾಯ, ಹುತ್ತರಿಹಾಡು, ತೆಂಕಣಗಾಳಿಯಾಟ, ನಾಗರಹಾವೆ, ಒಡ್ಡನ ಓಟ, ಕೊಕ್ಕೊಕ್ಕೋಳಿ, ಕೋಟಿಚೆನ್ನಯ, ಹೇನು ಸತ್ತು ಕಾಗೆ ಬಡವಾಯಿತು. ಇಲಿಗಳ ಥಕಥೈ, ಅಜ್ಜಿ ಸಾಕಿದ ಮಗ ಮುಂತಾದವುಗಳು ಇವರ ಪ್ರಸಿದ್ಧ ಕೃತಿಗಳಾಗಿವೆ. ಇವರು 'ಕವಿಶಿಷ್ಯ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದಾರೆ. ಪಂಜೆಯವರು 1937 ಅಕ್ಟೋಬರ್ 24ರಂದು ನಿಧನರಾದರು.

## ಚಟುವಟಿಕೆಗಳು

### ❑ ಹಾಡಿರಿ

ಈ ಕಥನಕವನವನ್ನು ಭಾವಪೂರ್ಣವಾಗಿ ಹಾಡಿರಿ.

### ❑ ಚರ್ಚಿಸಿರಿ

ಕುಡುಕತನದಿಂದ ಕಡುಬಡವನಾದ ಬಿರುಮಸೆಟ್ಟಿಯನ್ನು ಜನರು ಹೀನಾಯವಾಗಿ ನಡೆಸಿಕೊಂಡರು. – ಇದು ಸರಿಯೇ? ಚರ್ಚಿಸಿರಿ.

### ❑ ಉತ್ತರಿಸಿರಿ

- ಅರಸನು ಕಂಡ ಆಶ್ಚರ್ಯಕರವಾದ ಸಂಗತಿ ಯಾವುದು?
- ಬಿರುಮಸೆಟ್ಟಿ ಕರುವನ್ನು ತಂದ ಮೇಲೆ ಆತನ ಬದುಕಿನಲ್ಲಾದ ಬದಲಾವಣೆಗಳೇನು?
- ಶ್ರೀಮಂತನಾಗಿದ್ದ ಬಿರುಮ ಸೆಟ್ಟಿಯು ಬಡವನಾದುದು ಹೇಗೆ?
- ಬಡತನದಿಂದ ಬದುಕು ಕಷ್ಟವಾದಾಗ ಬಿರುಮನ ಮನಸ್ಸಿನಲ್ಲಿ ಮೂಡಿದ ಆಲೋಚನೆಗಳೇನು?
- ಬಿರುಮ ಸೆಟ್ಟಿಯ ದುರವಸ್ಥೆಯನ್ನು ನೋಡಿ ಜನರು ಏನೆಂದರು?
- ದೊರೆಯು ಬಿರುಮ ಸೆಟ್ಟಿಯನ್ನು ಹೇಗೆ ಸಂತೈಸಿದನು?

### ❑ ಕಥೆ ಬರೆಯಿರಿ

ಈ ಕಥನಕವನದಲ್ಲಿರುವ ಕಥೆಯನ್ನು ಸಂಕ್ಷಿಪ್ತವಾಗಿ ಬರೆಯಿರಿ.

## ❑ ಕರಪತ್ರ ತಯಾರಿಸಿರಿ

ಶ್ರೀಮಂತನಾಗಿದ್ದ ಬಿರುಮ ಸೆಟ್ಟಿಯು ಕುಡಿತದ ಚಟಕ್ಕೆ ಬಲಿಯಾಗಿ ತನ್ನ ಸರ್ವಸ್ವವನ್ನು ಕಳೆದುಕೊಂಡನು. ಇವನಂತೆ ಕುಡಿತದ ಚಟಕ್ಕೆ ಬಲಿಯಾಗಿ ತಮ್ಮ ಬಾಳನ್ನು ಹಾಳುಮಾಡಿಕೊಂಡ ಎಷ್ಟೋ ಮಂದಿ ನಮ್ಮ ಸಮಾಜದಲ್ಲಿದ್ದಾರೆ. ಮದ್ಯಪಾನದ ದುಷ್ಪರಿಣಾಮಗಳ ಬಗ್ಗೆ ಜನಜಾಗೃತಿ ಮೂಡಿಸುವ ಸಲುವಾಗಿ ಕರಪತ್ರವೊಂದನ್ನು ತಯಾರಿಸಿರಿ.

## ❑ ಸಂಧಿ ವಿಗಂಡಿಸಿ ಬರೆಯಿರಿ

ಬೇಡಲೊಲ್ಲೆನು, ಇಬ್ಬರಿದ್ದೆವು ಈ ಪದಗಳನ್ನು ಬೇಡಲು + ಒಲ್ಲೆನು, ಇಬ್ಬರು + ಇದ್ದೆವು ಎಂಬುದಾಗಿ ವಿಂಗಡಿಸಿ ಬರೆಯಬಹುದು.


ಈ ಘಟಕದಲ್ಲಿ ಇಂಹತ ಬರುವ ಲೋಪ ಸಂಧಿ ಆಗುವ ಪದಗಳನ್ನು ಸಾಧ್ಯವಿರುವಷ್ಟು ಗುರುತಿಸಿ ಸಂಧಿ ವಿಂಗಡಿಸಿ ಬರೆಯಿರಿ.

## ❑ ಪದಗಳು ಸಂಧಿಯಾಗುವಾಗ ಆಗುವ ಬದಲಾವಣೆಯನ್ನು ಗಮನಿಸಿರಿ.

| ವಿಂಗಡಣೆ | ಸಂಧಿಯಾದ ಪದ | ಬದಲಾವಣೆ |
|---|---|---|
| ಬಳಿಕ + ಎನ್ನ | ಬಳಿಕೆನ್ನ | ಬಳಿಕ ಎಂಬಲ್ಲಿನ 'ಅ' ಕಾರ ಲೋಪ |
| ಬೇಡಲು + ಒಲ್ಲೆನು | ಬೇಡಲೊಲ್ಲೆನು | ಬೇಡಲು ಎಂಬಲ್ಲಿನ 'ಉ' ಕಾರ ಲೋಪ |
| ಏತಕೆ + ಈಕರು | ಏತಕೀಕರು | ಏತಕೆ ಎಂಬಲ್ಲಿನ 'ಎ' ಲೋಪ |

ಹೀಗೆ ಸಂಧಿಯಾಗುವಾಗ ಪೂರ್ವಪದದ ಕೊನೆಯ ಸ್ವರವು ಲೋಪವಾಗುವುದನ್ನು ಲೋಪಸಂಧಿ ಎನ್ನುತ್ತಾರೆ.

## ❑ ಪದ ಬಂಧ




### ❑ ಎಡದಿಂದ ಬಲಕ್ಕೆ

1. ಇವನ ಬಿಸಿಗೆ ಬೆಂದೇ ಹೋಗಬಹುದು (4)
4. ಅಯ್ಯೋ ಕೈ ಕರಗಿತೇ .....? (2)
5. ಇದು ಮೂಲ ಪ್ರತಿಯಲ್ಲ (3)
6. ಅಮ್ಮ ತಿರುಗಿದ್ದಾಳೆ (2)
7. ರಾತ್ರಿಯ ಆಕಾಶದಲ್ಲಿ ಇವನೆಷ್ಟು ಚಂದ! (3)
8. ಹನುಮಂತ ಲಂಕೆಯನ್ನೇ ಉರಿಸಿದ (3)
10. ನಳ ಮಹಾರಾಜನಿಗೆ ಇಷ್ಟೊಂದು ಕಾಂತಿಯೇ (5)

### ❑ ಮೇಲಿನಿಂದ ಕೆಳಕ್ಕೆ

1. ಇದು ಚೆಂಡೆಯಲ್ಲ ತರಕಾರಿ (2)
2. ಸೂರ್ಯ ನೆಂದರೆ ಇವನೇ! (4)
3. ಇದು ಆತ್ಮವಲ್ಲ ದೇವರು (4)
7. ಚಂದದ ಗಂಧ (3)
9. 'ದನ'ವನ್ನು ಹೀಗೂ ಹೇಳುತ್ತಾರೆ (2)

- ಕಥೆ, ಕವಿತೆಗಳನ್ನು ಸೂಕ್ತವಾದ ಭಾವಾಭಿವ್ಯಕ್ತಿಯೊಂದಿಗೆ ಮಂಡಿಸುವುದು.
- ಕಥೆ, ಕವಿತೆ, ನಾಟಕ ಮೊದಲಾದ ಸೃಜನಾತ್ಮಕ ರಚನೆಗಳ ರಚನಾ ರೀತಿ, ಔಚಿತ್ಯ, ವೈವಿಧ್ಯ ಮೊದಲಾದವುಗಳನ್ನು ಪರಿಗಣಿಸಿಕೊಂಡು ಸ್ವಂತ ದೃಷ್ಟಿಕೋನಕ್ಕನುಸಾರವಾಗಿ ಆಸ್ವಾದಿಸಿ, ವಾಚಿಕವಾಗಿ ಮಂಡಿಸುವುದು ಮತ್ತು ಬರೆದು ಮಂಡಿಸುವುದು.
- ವಿವಿಧ ಆಶಯ ಮಂಡಲಗಳಿಗೆ ಸಂಬಂಧಿಸಿದ ಚರ್ಚೆ ಸಂವಾದಗಳಲ್ಲಿ ಭಾಗವಹಿಸಿ ಆಶಯಗಳನ್ನೂ ಅಭಿಪ್ರಾಯಗಳನ್ನೂ ತರ್ಕಬದ್ಧವಾಗಿ ಮಂಡಿಸುವುದು.
- ಚರ್ಚೆ ಸಂವಾದಗಳಿಂದ ರೂಪುಗೊಂಡ ಆಶಯಗಳನ್ನು ಕ್ರೋಢೀಕರಿಸಿ; ವಾಚಿಕವಾಗಿಯೂ ಲಿಖಿತ ರೂಪದಲ್ಲಿಯೂ ಪ್ರಕಟಿಸುವುದು.
- ಪದ ಶುದ್ಧಿ, ವಾಕ್ಯ ಶುದ್ಧಿ, ಲೇಖನ ಚಿಹ್ನೆ, ಪಾರಾ ಮೊದಲಾದ ಭಾಷಾ ನಿಯಮಗಳನ್ನು ಪಾಲಿಸಿಕೊಂಡು ರಚನೆಗಳನ್ನು ಉತ್ತಮಪಡಿಸುವುದು.
- ಮೌಲ್ಯನಿರ್ಣಯ ಸೂಚಕಗಳನ್ನು ಸ್ವಯಂ ಕಂಡುಕೊಂಡು ತನ್ನ ಮತ್ತು ಇತರರ ರಚನೆಗಳ ಮೌಲ್ಯನಿರ್ಣಯ ಮಾಡುವುದು.
- ಪರಿಚಿತವಾದ ಕವಿತೆಗಳಲ್ಲಿರುವ ಚಮತ್ಕಾರ, ಬಿಂಬಕಲ್ಪನೆ, ವರ್ಣನೆ ಎಂಬಿವುಗಳನ್ನು ಗುರುತಿಸಿ, ವಿಶ್ಲೇಷಿಸಿ, ಆಸ್ವಾದನ ಟಿಪ್ಪಣಿ, ತೌಲನಿಕ ಟಿಪ್ಪಣಿ, ವರ್ಣನೆ ಎಂಬಿತ್ಯಾದಿಗಳನ್ನು ರಚಿಸುವುದು.
- ಪಾಠಭಾಗದಲ್ಲಿ ಬರುವ ಪದಗಳ ಅರ್ಥವ್ಯತ್ಯಾಸವಾಗದಂತೆ ಅವುಗಳನ್ನು ವಿಂಗಡಿಸಿ ಮತ್ತು ಜೋಡಿಸಿ ಬರೆಯುವ ಚಟುವಟಿಕೆಗಳನ್ನು ಮಾಡುವುದು.

# 5. ನಂಬಿಕೆಯ ನೆರಳು

ವಿಶಾಲ ಪ್ರಪಂಚವು ತನ್ನ ಮಡಿಲಲ್ಲಿ ನಮಗೆ ಬದುಕಲು ಅನುವು ಮಾಡಿ ಕೊಟ್ಟಿದೆ. ಅದೇ ರೀತಿ ನಿಗೂಢಗಳನ್ನೂ, ಚಮತ್ಕಾರಗಳನ್ನೂ ತನ್ನ ಗರ್ಭದಲ್ಲಿ ಅಡಗಿಸಿಕೊಂಡಿದೆ. ಇದನ್ನು ಬೆರಗುಗಣ್ಣುಗಳಿಂದ ನೋಡಿ ಭಯಪಡುವುದು ಸರಿಯಲ್ಲ. ಬದಲಾಗಿ ಪ್ರತಿಯೊಂದು ವಿಚಾರವನ್ನು ಆಳವಾಗಿ ವಿಶ್ಲೇಷಿಸಿ ಅರಿತುಕೊಳ್ಳುವ ಮನೋಭಾವ ಬೆಳೆಸಿಕೊಳ್ಳಬೇಕು. ಅದೇ ರೀತಿ ಹಿರಿಯರು ಹಾಕಿಕೊಟ್ಟ ಉತ್ತಮ ನಂಬಿಕೆ ಸಂಪ್ರದಾಯ, ತ್ಯಾಗಮನೋಭಾವಗಳನ್ನು ಉಳಿಸಿಕೊಳ್ಳಬೇಕು. ನಮ್ಮಲ್ಲಿರುವ ದುಷ್ಟ ಪ್ರವೃತ್ತಿಗಳನ್ನು ಮೂಢನಂಬಿಕೆಗಳನ್ನು ತೊಲಗಿಸಿ ಪರಸ್ಪರ ಅರಿತು ಬಾಳಬೇಕು. ಸದಾಚಾರಗಳಿಂದಲೂ ಪ್ರೀತಿ ವಿಶ್ವಾಸಗಳಿಂದಲೂ, ಮಾನವೀಯತೆಯನ್ನು ಮೆರೆದು ಬದುಕಬೇಕು. ಮುಂದಿನ ಪೀಳಿಗೆಗೆ ದಾರಿದೀಪವಾಗಬೇಕು.



# ಬಿಡು ಭ್ರಮೆಯ

'ನಾನು,ನಾನು ಎನದಿರು ಎಲೆ ಮಾನವಾ'! –ದಾಸರ ಈ ಕೀರ್ತನೆಯನ್ನು ಕೇಳದಿರುವವರಾರು?

'ನಾನೇ ಎಲ್ಲರಿಗಿಂತ ಮಿಗಿಲು ಎಂಬ ಭಾವನೆಯನ್ನು ಹೊತ್ತ ಪ್ರತಿಯೊಬ್ಬನೂ ಅದನ್ನು ತನ್ನ ಮನಸ್ಸಿನಿಂದ ಕಿತ್ತೊಗೆದರೆ ಲೋಕಕ್ಕೆ ಒಳಿತಾಗುವುದರಲ್ಲಿ ಎರಡು ಮಾತಿಲ್ಲ.

ನಾ ಮೇಲಿನವನು ಬಲು ದೊಡ್ಡವನು ಎಂದು
ಮೆರೆದಾಡಬೇಡ ಗೆಳೆಯ
ನಿನಗಿಂತ ಮಿಗಿಲವರು ಇದ್ದಾರು ಬುವಿಯಲ್ಲಿ
ಸುಳ್ಳು ಭ್ರಮೆಯಲ್ಲಿ ನೀ ಮುಳುಗಬೇಡಾ॥



ಬಲು ದೊಡ್ಡ ಚಂದಿರನು ಇರುಳೆಲ್ಲಾ ಬೆಳಗುವನು
ಮರೆಯುವನು ಹಗಲ ಕಿರಣದಲ್ಲಿ
ಉರಿಯುವನು ಸೂರ್ಯ ಅವನಿಗಿಂತ ಹಿರಿಯ
ಕಳೆದು ಹೋಗುವನು ಇರುಳ ಸೆರಗಿನಲ್ಲಿ॥

ಗ್ರಹತಾರೆಗಳ ಹೊತ್ತ ಗಗನಕ್ಕೆ ಮರೆಹುಂಟೆ
ಸಾರಿ ಹೇಳಿತ್ತೇ ತಾ ಮಿಗಿಲು ಎಂದು
ಅಣುವಲ್ಲಿ ಅಣುವಾದ ಕಣ್ಣಿದ್ದೂ ಕುರುಡಾದ
ನೀ ಕೂಗಬಹುದು ಹಾಗೆಂದು॥

ಮಣ್ಣು ಮೊಳಕೆಯ ಹುಟ್ಟು ಜೀವ ವೃಕ್ಷದಾ ಗುಟ್ಟು
ಬೆರಗುಗೊಳಿಸುವುದಿಲ್ಲವೇನು
ಗಿರಿಜರಿಯ ಒರತೆ ಜೀವರಾಶಿಯ ಚರಿತೆ
ರೋಮಾಂಚಗೊಳಿಸದೇನು॥

ಜನನ ಮರಣದಾ ಒಗಟ ಬಿಚ್ಚಿ ಹೇಳುವೆಯೇನು
ಲೋಕದೊಳಿತಿಗೆ ನಿನ್ನ ಕಾಣ್ಕೆ ಏನು?
ಹೇಳು ಗೆಳೆಯನೇ ಈಗ ಎದೆ ತಟ್ಟಿ ನೀ ಹೇಳು
ಪ್ರಕೃತಿಯ ಹಿರಿತನಕೆ ನೀ ಸಾಟಿ ಏನು?

ಬಿ.ಟಿ. ಲಲಿತಾ ನಾಯಕ್

## ಬಿ.ಟಿ. ಲಲಿತಾ ನಾಯಕ್



ಶ್ರೀಮತಿ ಬಿ.ಟಿ. ಲಲಿತಾ ನಾಯಕ್ ಅವರು ಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ 'ತಂಗಲಿತಾಂಡ್ಯಾ' ಎಂಬಲ್ಲಿ ಜನಿಸಿದರು. ಇವರ ತಂದೆ ಬಾಲಾಜಿ ನಾಯಕ್, ತಾಯಿ ಗಂಗಾಬಾಯಿ. ಇವರು ಬಾಲ್ಯದಲ್ಲಿ ಅನುಭವಿಸಿದ ಬಡತನದ ಅನುಭವಗಳು ಅವರ ಬರಹಗಳಲ್ಲಿ ಬಿಂಬಿಸಲ್ಪಟ್ಟಿವೆ. ಉತ್ತಮ ಲೇಖಕಿಯೂ ಸಮಾಜ ಸೇವಕಿಯೂ ಆಗಿರುವ ಇವರು ಕರ್ನಾಟಕ ಸರಕಾರದ ಮಂತ್ರಿಯಾಗಿಯೂ ಸೇವೆಸಲ್ಲಿಸಿದ್ದಾರೆ. ಹಬ್ಬಮತ್ತಬಲಿ, ನೆಲೆಬೆಲೆ, ಗತಿ, ಭಟ್ಟನ ಕನಸು, ಒಡಲಬೇಗೆ, ಬಿದಿರು ಮಳೆ ಕಂಟಿಯಲಿ ಮೊದಲಾದವುಗಳು ಇವರ ಪ್ರಸಿದ್ಧ ಕೃತಿಗಳಾಗಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ , ಮಹಿಳಾರತ್ನ ಪ್ರಶಸ್ತಿ ಕರ್ನಾಟಕ ಚೂಡಾಮಣಿ ಪ್ರಶಸ್ತಿ ಮುಂತಾದವು ಇವರಿಗೆ ದೊರಕಿದ ಪ್ರಶಸ್ತಿಗಳು.

## ಚಟುವಟಿಕೆಗಳು

- ಹಾಡಿರಿ

ಕವನವನ್ನು ರಾಗವಾಗಿ ಹಾಡಿರಿ.

- ಉತ್ತರಿಸಿರಿ

- ಯಾವಭ್ರಮೆಯಲ್ಲಿ ಮುಳುಗ ಬೇಡವೆಂದು ಕವಯತ್ರಿ ಸೂಚಿಸುತ್ತಾರೆ?
- ಇಡೀ ಲೋಕವನ್ನೇ ಬೆಳಗುವ ಸೂರ್ಯ ಚಂದ್ರರಿಗೆ ಇರುವ ಕೊರತೆಗಳೇನು?
- ನಮ್ಮನ್ನು ಬೆರಗು ಮತ್ತು ರೋಮಾಂಚನಗೊಳಿಸುವ ವಿಚಾರಗಳೇನು?
- ಕವಯಿತ್ರಿ ಮಾನವನಿಗೆ ಕೇಳುವ ಪ್ರಶ್ನೆಗಳಾವುವು?
- 'ಗಗನ' ಮತ್ತು 'ಮನುಷ್ಯನ ಸ್ವಭಾವವನ್ನು ಕವಯತ್ರಿ ಹೇಗೆ ಹೋಲಿಸುತ್ತಾರೆ?

- ಆಶಯ ಬರೆಯಿರಿ

ಕವಿತೆಯ ಆಶಯವನ್ನು ಬರೆಯಿರಿ.

- ಕೆಳಗಿನ ಪದಗಳನ್ನು ವಿಂಗಡಿಸಿ ಬರೆಯಿರಿ. ಇವುಗಳಲ್ಲಿ ಲೋಪಸಂಧಿಯಾಗುವ ಪದಗಳನ್ನು ಗುರುತಿಸಿರಿ.

ಮರೆಹುಂಟೆ
ಕಣ್ಣಿದ್ದು
ಅಣುವಲ್ಲಿ
ಹೇಳುವೆಯೇನು
ಲೋಕದೊಳಗತಿ
ಇರುಳೆಲ್ಲ

- ಕೆಳಗಿನ ಪಟ್ಟಿಯನ್ನು ಗಮನಿಸಿರಿ.

| ವಿಂಗಡಣೆ | ಸಂಧಿಯಾದ ಪದ | ಬದಲಾವಣೆ |
|---|---|---|
| ಆಸಕ್ತಿ + ಇದ್ದಿತು | ಆಸಕ್ತಿಯಿದ್ದಿತು | ಎರಡು ಪದಗಳ ನಡುವೆ 'ಯ'ಕಾರವು ಬಂದು ಸೇರಿಕೊಂಡಿದೆ. |
| ಕಾಣಿಕೆ + ಆಗಿ | ಕಾಣಿಕೆಯಾಗಿ | |
| ದಂಡನೆ + ಆಯಿತು | ದಂಡನೆಯಾಯಿತು | |
| ಪ್ರಯೋಗ + ಆಗಿರುವ | ಪ್ರಯೋಗವಾಗಿರುವ | ಎರಡು ಪದಗಳ ನಡುವೆ 'ವ' ಕಾರವು ಸೇರಿಕೊಂಡಿದೆ. |
| ಭಂಡಾರ + ಒಂದನ್ನು | ಭಂಡಾರವೊಂದನ್ನು | |
| ಕ್ಷೇತ್ರ + ಎನಿಸಿದೆ | ಕ್ಷೇತ್ರವೆನಿಸಿದೆ | |

ಹೀಗೆ ಸಂಧಿಯಾಗುವಾಗ ನಡುವೆ 'ಯ' ಕಾರವಾಗಲಿ, 'ವ' ಕಾರವಾಗಲಿ ಹೊಸತಾಗಿ ಬಂದು ಸೇರುವ ಸಂಧಿಗೆ ಆಗಮ ಸಂಧಿ ಎನ್ನುತ್ತಾರೆ ಯಕಾರ ಬಂದರೆ ಯಕಾರಾಗಮ, ವಕಾರ ಬಂದರೆ ವಕಾರಾಗಮ.

- ಹೋಲಿಸಿರಿ

ನಾ ಮೇಲಿನವನು ಬಲು ದೊಡ್ಡವನು ಎಂದು
ಮೆರೆದಾಡಬೇಡ ಗೆಳೆಯ
ನಿನಗಿಂತ ಮಿಗಿಲವರು ಇದ್ದಾರು ಬುವಿಯಲ್ಲಿ
ಸುಳ್ಳು ಭ್ರಮೆಯಲ್ಲಿ ನೀ ಮುಳುಗಬೇಡಾ।।

- ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು।
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೇ।।
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ।
ಎಲ್ಲರೊಳಗೊಂದಾಗು ಮಂಕುತಿಮ್ಮ।।

ಮೇಲಿನ ಎರಡು ಪದ್ಯಗಳು ನೀಡುವ ಸಂದೇಶವೇನು? ಹೋಲಿಸಿ ಬರೆಯಿರಿ.

- ಕವಿತೆ ರಚಿಸಿರಿ

ಉತ್ತಮ ಸಂದೇಶ ಸಾರುವ ಪುಟ್ಟ ಕವಿತೆಯೊಂದನ್ನು ರಚಿಸಿ ಶಾಲಾ ಭಿತ್ತಿಪತ್ರಿಕೆಗೆ ನೀಡಿರಿ.

# ಬ್ಯಾರಿಂಜರ್ ಗುಂಡಿ

ನಮ್ಮ ಜಗತ್ತು ಹಲವಾರು ವೈಚಿತ್ರ್ಯಗಳಿಂದಲೂ ನಿಗೂಢತೆಗಳಿಂದಲೂ ಕೂಡಿದೆ. ಇವುಗಳ ರಹಸ್ಯವನ್ನು ತಿಳಿಯಲು ಮಾನವನು ಸದಾ ಶ್ರಮಿಸುತ್ತಲೇ ಬಂದಿದ್ದಾನೆ. ಇವುಗಳಲ್ಲಿ ಕೆಲವು ವಿಸ್ಮಯಗಳನ್ನು ಭೇದಿಸುವಲ್ಲಿ ಮಾನವನು ಯಶಸ್ವಿಯಾಗಿದ್ದಾನೆ.

ಚಂದ್ರನಲ್ಲಿ ವಾತಾವರಣ ಇಲ್ಲದಿರುವುದರಿಂದ ಅದು ನಿರಂತರ ಉಲ್ಕಾಪಾತಗಳ ದಾಳಿಗೆ ತುತ್ತಾಗಿ ಅದರ ನೆಲವೆಲ್ಲ ಅಗಾಧವಾದ ಗುಳಿಗಳಿಂದ ತುಂಬಿದೆ. ಭೂಮಿಗೆ ವಾತಾವರಣದ ರಕ್ಷಣೆ ಇರುವುದರಿಂದ ಉಲ್ಕೆಗಳು ವಾತಾವರಣವನ್ನು ತಾಗಿದ ಕೂಡಲೆ ಉಂಟಾಗುವ ಘರ್ಷಣೆಯ ಶಾಖಕ್ಕೆ ಸುಟ್ಟು ಉರಿದುಹೋಗುತ್ತವೆ. ಹಾಗಿದ್ದರೆ ಭೂಮಿಯ ಮೇಲೆ ಉಲ್ಕಾಪಾತದ ಗುಳಿಗಳೇ ಇಲ್ಲವೆ?



ಭೂಮಿಯ ಮೇಲೆ ಗಾಳಿ ಬೀಸುವುದರಿಂದ ಮತ್ತು ಮಳೆ ಸುರಿದು ನೀರು ಹರಿಯುವುದಿಂದ ಆಕಸ್ಮಾತ್ ಉಲ್ಕಾಪಾತದ ಗುಳಿಗಳು ಉಂಟಾಗಿದ್ದರೂ ಅವು ಕಾಲಾಂತರದಲ್ಲಿ ಮುಚ್ಚಿಹೋಗುವುದೇ ಹೆಚ್ಚು. ಆದರೆ ಅನುಮಾನ ಕೈಡೆಯಿಲ್ಲದಂಥ ಒಂದು ಉಲ್ಕಾಪಾತದ ಗುಳಿ ಇರುವುದು ನಿಜ. ಅದೇ ಬ್ಯಾರಿಂಜರ್ ಗುಂಡಿ.

ಅರಿಜೋನಾದ ಗ್ರ್ಯಾಂಡ್ ಕ್ಯಾನಿಯನ್ ಹತ್ತಿರವಿರುವ ಬ್ಯಾರಿಂಜರ್ ಕ್ರೇಟರ್ ಚಂದ್ರನಲ್ಲಿರುವ ಗುಳಿಗಳ ಪ್ರತಿರೂಪದಂತಿರುವುದನ್ನು ನೋಡಬಹುದು. ಒಣ ಹವೆಯ ವಿಸ್ತಾರವಾದ ಅರೆ ಮರಳುಗಾಡು ಪ್ರದೇಶದಲ್ಲಿರುವ ಈ ಗುಂಡಿ ಸುಮಾರು ಎರಡು ಮೈಲು ವಿಸ್ತಾರಕ್ಕೂ, ಐನೂರ ಎಪ್ಪತ್ತು ಅಡಿ ಆಳಕ್ಕೂ ಇದೆ.

ಬಾಹ್ಯಾಕಾಶದಿಂದ ಏನೋ ಒಂದು ಬಂದು ಹೊಡೆದಿದೆ! ಅದರ ಭಯಂಕರ ಘರ್ಷಣೆಗೆ ಕ್ಷಣಾರ್ಧದಲ್ಲಿ ಈ ವಿಸ್ತಾರವಾದ ಗುಂಡಿ ನಿರ್ಮಾಣವಾಗಿದೆ. ಬಂದು ಡಿಕ್ಕಿ ಹೊಡೆದ ವಸ್ತು ನಿಕ್ಕಲ್ ಕಬ್ಬಿಣದ ಮಿಶ್ರ ಲೋಹದ್ದು. ಆ ವಸ್ತು ಬಹಳ ತೂಕವಾದದ್ದು. ಅದರ ಗಾತ್ರ ನಮ್ಮ ದೊಡ್ಡ ಹಡಗುಗಳಷ್ಟಿರಬಹುದು. ಪೂರ್ವದ ಆಕಾಶದಿಂದ ಭೂಮಿಗೆ ನಲವತ್ತೈದು ಡಿಗ್ರಿ ಕೋನದಲ್ಲಿ ಮಹಾ ವೇಗದಲ್ಲಿ ಬಂದು ಅಪ್ಪಳಿಸಿದೆ. ಉಲ್ಕೆಯಂತೆಯೇ ಪ್ರಜ್ವಲಿಸಿ ಉರಿಯುತ್ತಾ ಬಂದು ಭೂಮಿಗೆ ಹೊಡೆದಿದೆ. ಅದು ಹೊಡೆದಾಗ ಆದ ಗುಂಡಿಯ ಆಳ ಸಾವಿರ ಅಡಿಗಿಂತಲೂ ಹೆಚ್ಚಿತ್ತು. ಇದು ಡಿಕ್ಕಿ ಹೊಡೆದಿದ್ದು ಇಂದಿಗೆ ಇಪ್ಪತ್ತು ಸಾವಿರ ವರ್ಷಗಳ ಹಿಂದೆ. ಕಾಲಾಂತರದಲ್ಲಿ ಅಕ್ಕಪಕ್ಕದ ಇಳಿಜಾರಿನಿಂದ ಜರುಗಿದ ಮಣ್ಣು ಈ ಗುಂಡಿಯ ಅರ್ಧದಷ್ಟನ್ನು ಈಗ ಮುಚ್ಚಿದೆ.

ಆದರೆ ಈ ಎರಡು ಮೈಲು ಸುತ್ತಳತೆಯ ಗುಂಡಿಯಲ್ಲಿದ್ದ ಮಣ್ಣು ಎತ್ತ ಹೋಯ್ತು? ಇಲ್ಲಿಗೆ ಬಂದು ಡಿಕ್ಕಿ ಹೊಡೆದ ಕೂಡಲೇ ಅಲ್ಲಿ ಉಂಟಾದ ಅತ್ಯುಷ್ಣದಲ್ಲಿ ಅದಷ್ಟು ಭಾಗ ಭೂಮಿಯೂ ಸೇರಿದಂತೆ ಎಲ್ಲವೂ ಅನಿಲೀಕರಣಗೊಂಡಿವೆ. ಎಂದರೆ ನೀರು ಕುದಿದಂತೆ ಕುದಿಯುತ್ತಾ ಆವಿಯಾಯ್ತೆಂದು ಭಾವಿಸಬೇಡಿ. ಕ್ಷಣಾರ್ಧದಲ್ಲಿ ನಡೆದ ಈ ಕ್ರಿಯೆ ಒಂದು ಭೀಕರ ಆಸ್ಫೋಟನೆಯಾಗಿ ಮಾತ್ರ ನೋಡುವವರಿಗೆ ಗೋಚರಿಸುತ್ತದೆ. ಉಲ್ಕೆಯ ಕಬ್ಬಿಣ ಸಹ ಭೂಮಿಯೊಳಗೆ ನುಗ್ಗಿದ್ದು ಅಲ್ಲಿನ ಅತ್ಯುಷ್ಣಕ್ಕೆ ಕಬ್ಬಿಣ ಆವಿಯಾಗಿ ದಶ ದಿಕ್ಕುಗಳಿಗೂ ಸಿಡಿದಿದೆ. ಸಿಡಿಯುತ್ತಾ ಸುತ್ತಮುತ್ತಲಿನ ಮಣ್ಣು ಕಲ್ಲನ್ನೂ ಸಿಡಿದು ಹಾರಿಸಿ ಭೀಕರ ಗುಂಡಿಯನ್ನು ನಿರ್ಮಿಸಿದೆ.

ಈ ಸ್ಫೋಟದಲ್ಲಿ ಎಲ್ಲವೂ ಸಿಡಿದು ಹಾರಿಲ್ಲ. ಆ ಉಲ್ಕೆಯ ಮಧ್ಯಭಾಗ ಆವಿಯಾಗುವುದಕ್ಕೂ ಮೊದಲೇ ಉಲ್ಕೆ ಭೂಮಿಯೊಳಗೆ ನುಗ್ಗಿತು. 1902 ರಲ್ಲಿ ಬ್ಯಾರಿಂಜರ್ ಎಂಬೊಬ್ಬ ಗಣಿ ವಿಜ್ಞಾನಿ ಅರಿಜೋನಾ ಮರುಭೂಮಿಯಲ್ಲಿ ಹೀಗೊಂದು

ಅಗಾಧ ಗುಂಡಿ ಇದೆಯೆಂದೂ ಅದರ ಸುತ್ತಮುತ್ತ ನಿಕ್ಕಲ್ ಕಬ್ಬಿಣದ ಚೂರುಗಳು ವಿಸ್ತಾರವಾಗಿ ಹರಡಿ ಬಿದ್ದಿದೆಯೆಂದೂ ಸಮಾಚಾರ ಕೇಳಿದ. ಅವನ ಕಾಲಕ್ಕೆ ಭೂಮಿಯ ಮೇಲೆ ಉಲ್ಕೆಗಳಿಂದಾದ ಗುಂಡಿಯಿರಬಹುದೆಂಬುದು ಗೊತ್ತೇ ಇರಲಿಲ್ಲ. ಜ್ವಾಲಾಮುಖಿಯ ಗುಂಡಿಗಳು ಮಾತ್ರ ಗೊತ್ತಿದ್ದುದು. ಆದರೆ ಬ್ಯಾರಿಂಜರ್ ಮಾತ್ರ ಈ ಗುಂಡಿಯನ್ನು ನೋಡಿದವನೇ ಇದು ಯಾವುದೋ ಆಕಾಶಕಾಯ ಬಂದು ಡಿಕ್ಕಿ ಹೊಡೆದುದರಿಂದ ಆದ ಗುಂಡಿ ಎಂದು ಸರಿಯಾಗಿ ತರ್ಕಿಸಿದ. ಆ ಗುಂಡಿಯ ಹೊರಗೆ ಅನೇಕ ಕಡೆಗಳಲ್ಲಿ ಅಗೆದು ತೋಡಿ ಪರೀಕ್ಷಿಸಿದಾಗ ಶೇಕಡಾ ಏಳರಷ್ಟು ನಿಕ್ಕಲ್‌ಯುಕ್ತ ಕಬ್ಬಿಣದ ಅದುರು ಅವನಿಗೆ ಸಾಕಷ್ಟು ಪ್ರಮಾಣದಲ್ಲಿ ಸಿಕ್ಕಿತು. ಹಾಗಿದ್ದರೆ ಇಲ್ಲಿ ಗಣಿಗಾರಿಕೆ ನಡೆಸಿ ಅಪಾರ ಪ್ರಮಾಣದಲ್ಲಿ ನಿಕ್ಕಲ್ ಕಬ್ಬಿಣ ಹೊರತೆಗೆಯಬಹುದೆಂದು ಊಹಿಸಿ ಆತ ಅಲ್ಲಿ ಗಣಿಗಾರಿಕೆಗಾಗಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಪರವಾನಗಿ ಪಡೆದ. ಆತ ತನ್ನ ಮುಂದಿನ ಜೀವಮಾನವನ್ನೆಲ್ಲಾ ಆ ಗುಂಡಿಯಲ್ಲಿ ಸಿಗುವ ಅದುರಿಗಾಗಿ ಹುಡುಕಾಟದಲ್ಲೇ ಕಳೆದ.

ಬ್ಯಾರಿಂಜರ್ ಮೊದಲಿಗೆ ಆ ಗುಂಡಿಯ ನಡುಭಾಗದಲ್ಲಿ ಬೋರ್‌ವೆಲ್ ಡ್ರಿಲ್‌ಗಳಿಂದ ತೂತು ಕೊರೆಯಲು ಶುರುಮಾಡಿದ. ಮೊದಲಿಗೆ ಅವನ ಬೈರಿಗೆಗಳಿಗೆ ನೀರು, ಕೆಸರು ಮತ್ತು ಮರಳು ದೊರೆಯಿತು. ಇನ್ನಷ್ಟು ಆಳ ಕೊರೆದಾಗ ಅವನ ಬೈರಿಗೆಗೆ ಅಡಿಯ ಕಗ್ಗಲ್ಲಿನ ಚಪ್ಪಡಿಗಳು ಎದುರಾದುವು. ಕಬ್ಬಿಣದ ಅದುರು ಸಿಕ್ಕಲೇ ಇಲ್ಲ. ಅಲ್ಲಿಯ ವರೆಗೂ ಆತ ಅಲ್ಲಿಗೆಬಂದು ಢಿಕ್ಕಿ ಹೊಡೆದ ಉಲ್ಕೆ ಆಕಾಶದಿಂದ ನೇರವಾಗಿ ತೊಂಬತ್ತು ಡಿಗ್ರಿ ಲಂಬದಲ್ಲಿ ಬಂದು ಡಿಕ್ಕಿ ಹೊಡೆದಿರಬೇಕೆಂದೇ ತಿಳಿದು ಬಾವಿ ಕೊರೆದಿದ್ದ. ಭೂಮಿಯ ಸುತ್ತ ಸುತ್ತುತ್ತಾ ಇರುವ ಉಲ್ಕೆಗಳು ಭೂಮಿಗೆ ಸಮಾನಾಂತರವಾಗಿ ಕೆಳಗಿಯುತ್ತಾ ಬಂದು ಒರೆಯಾದ ಕೋನದಲ್ಲಿ ಭೂಮಿಗೆ ಡಿಕ್ಕಿ



ಹೊಡೆಯಬಹುದೆಂಬ ಕಲ್ಪನೆ ಆಗಿನ ಕಾಲದಲ್ಲಿ ಇರಲೇ ಇಲ್ಲ.

ಆದರೆ ಆ ಗುಂಡಿಯ ತಳದಲ್ಲಿ ಕಬ್ಬಿಣದ ಅದುರು ಸಿಕ್ಕದಿದ್ದುದನ್ನು ಕಂಡು ಬ್ಯಾರಿಂಜರ್ ಆ ಉಲ್ಕೆ ಯಾವ ಕೋನದಲ್ಲಿ ಬಂದು ಭೂಮಿಗೆ ಹೊಡೆದಿರಬಹುದು ಎಂದು ಯೋಚನೆ ಮಾಡಿದ. ಉಲ್ಕೆ ಬಂದು ಭೂಮಿಗೆ ಡಿಕ್ಕಿ ಹೊಡೆದ ಹೊಡೆತಕ್ಕೆ ಆ ಗುಂಡಿಯ ಒಂದು ಭಾಗ ಮಿಕ್ಕ ಕಡೆಗಳಿಂಗಿಂತ ಕೊಂಚ ಎತ್ತರವಾಗಿ ಗೋಡೆಯಂತೆ ಎದ್ದಿತ್ತು. ಹಾಗಿದ್ದರೆ ಈ ಗೋಡೆಯ ವಿರುದ್ಧ ದಿಕ್ಕಿನಿಂದಲೆ ಆ ಉಲ್ಕೆ ಬಂದು ಭೂಮಿಯೊಳಗೆ ನುಗ್ಗಿರಬೇಕಲ್ಲವೇ? ಎಂದು ಬ್ಯಾರಿಂಜರ್ ತರ್ಕಿಸಿದ. 1919 ರಲ್ಲಿ ಬ್ಯಾರಿಂಜರ್ ಮತ್ತೊಂದು ತೂತನ್ನು ಆ ಗುಂಡಿಯ ಅಂಚಿನಿಂದ ಆಚೆ ಕೊರೆಯಲು ಶುರು ಮಾಡಿದ. ಅವನ ಬೈರಿಗೆಗೆ ಹಲವಾರು ಉಲ್ಕೆಯ ಚೂರುಗಳು ಸಿಕ್ಕವು. ಕೊಂಚ ಆಳ ಹೋಗುತ್ತಿದ್ದಂತೆಯೇ ಅವನ ಬೈರಿಗೆ ಉಲ್ಕೆಯ ದೊಡ್ಡ ದೊಡ್ಡ ಚೂರುಗಳಿಗೆ ಸಿಕ್ಕಿಕೊಂಡು ಮುರಿದೇ ಹೋಯ್ತು. ಏನು ಮಾಡಿದರೂ ಅದನ್ನು ಹೊರತೆಗೆಯಲು ಅವನಿಂದ ಸಾಧ್ಯವಾಗಲೇ ಇಲ್ಲ.

1928 ರಲ್ಲಿ ಆತ ಕಂಪೆನಿಯೊಂದನ್ನು ಮಾಡಿ ಸಾರ್ವಜನಿಕರಿಂದ ಷೇರ್ ಎತ್ತಿ ಮತ್ತೊಮ್ಮೆ ಕೆಲಸ ಪ್ರಾರಂಭಿಸಿದ. ಒಳನುಗ್ಗಿದ ಉಲ್ಕೆ ಇಲ್ಲಿಗೆ ತಲುಪಿರಬಹುದೆಂದು ತರ್ಕಿಸಿ ಈ ಗುಂಡಿಯಿಂದ ದಕ್ಷಿಣಕ್ಕೆ ಅರ್ಧಮೈಲು ದೂರದಲ್ಲಿ ಕೊರೆಯಕೊಡಗಿದ ಆದರೆ ಈ ಸಾರಿ ಆತನ ಲೆಕ್ಕಾಚಾರ ಸರಿ ಇರಲಿಲ್ಲ. ಸ್ವಲ್ಪ ಆಳ ಹೋಗುತ್ತಿದ್ದಂತೆಯೇ ಒಳಗೆ ಹರಿಯುತ್ತಿದ್ದ ಅಂತರ್ಗತ ಜಲದ ಸೆಲೆ ಸಿಕ್ಕು ಅವನಿಗೆ ಕೆಲಸ ಮುಂದುವರಿಸಲು ಸಾಧ್ಯವಾಗಲಿಲ್ಲ. ಈ ಗುಂಡಿಯ ಸಂಶೋಧನೆಯಲ್ಲೇ ತನ್ನ ಇಡೀ ಜೀವಮಾನವನ್ನು ಕಳೆದಿದ್ದ ಅವನು 1929 ರಲ್ಲಿ ತನ್ನ ಸಂಶೋಧನೆಯನ್ನು ಪೂರ್ಣಗೊಳಿಸದೆ ತೀರಿಕೊಂಡ.

ಉಳಿದಿದ್ದ ಅಲ್ಪಸ್ವಲ್ಪ ಹಣ ಬಳಸಿ ಅವನ ಮಕ್ಕಳು ಕೆಲಸ ಮುಂದುವರಿಸಿದರು. ಗಣಿ ವಿಜ್ಞಾನ ಕೊಂಚ ಮುಂದುವರಿದಿತ್ತು. ಅವನ ಮಕ್ಕಳು ಹೊಸ ಯಂತ್ರೋಪಕರಣಗಳ ಸಹಾಯದಿಂದ ಅಲ್ಲಿನ ಭೂಲಕ್ಷಣಗಳನ್ನು ಸರ್ವೇ ಮಾಡಿಸಿದರು. ಅಲ್ಲಿನ ಹಲವೆಡೆಗಳಲ್ಲಿ ನೆಲದಾಳದಲ್ಲಿ ಅಯಸ್ಕಾಂತ ಲಕ್ಷಣಗಳನ್ನು ತೋರಿಸುವ ಅದುರು ಇದ್ದುದು ಪತ್ತೆಯಾಯ್ತು. ಅಲ್ಲಿ ಮತ್ತೆರಡು ತೂತುಗಳನ್ನು ಕೊರೆದರು. ಎರಡು ಕಡೆಗಳಲ್ಲೂ ಮೊದಲು ಉಲ್ಕೆಯ ಚೂರುಗಳು ದೊರೆತರೂ ಅನಂತರ ಯಾವ

ಭೈರಿಗೆಯಿಂದಲೂ ಕೊರೆಯಲಾಗದ ಎಂಥದೋ ವಿಪರೀತ ಗಡಸು ಪದಾರ್ಥ ಸಿಕ್ಕು ಭೈರಿಗೆ ಸವೆದು ಹಾಳಾಗಲು ಶುರುವಾಯ್ತು. ಅವರೂ ಹತಾಶರಾಗಿ ಕೆಲಸ ಮುಂದುವರಿಸದೆ ನಿಲ್ಲಿಸಿದರು. ಆದರೆ ಸಂಶೋಧನೆ ಸಂಪೂರ್ಣ ನಿಲ್ಲಲಿಲ್ಲ.

ಅಲ್ಲಿ ಭೈರಿಗೆಗಳಿಗೆ ಕೊರೆಯಲಾಗದಷ್ಟು ಗಡುಸಾದ ಉಲ್ಕೆ ಅಡ್ಡಾಗಿದ್ದು ನಿಜವಾಗಿತ್ತು. ಭೂಗರ್ಭ ಶಾಸ್ತ್ರಜ್ಞರು ಅಲ್ಲಿ ಅಡ್ಡಾಗಿರುವ ವಸ್ತು ಕೊನೇ ಪಕ್ಷ ಹತ್ತು ಲಕ್ಷ ಟನ್ ತೂಕದ ವಸ್ತು ಎಂದು ಅಂದಾಜು ಮಾಡಿದ್ದಾರೆ. ನಿಕ್ಕಲ್ ಕಬ್ಬಿಣದ ಮಿಶ್ರಣ ಅತ್ಯುಷ್ಣ ಮತ್ತು ಅಗಾಧ ಒತ್ತಡದಲ್ಲಿ ಭೈರಿಗೆ ಸಹ ಕೊರೆಯಲಾರದಷ್ಟು ಗಡುಸಾದ ಅದಿರಾಗಿ ಮಾರ್ಪಾಡಾಗಿದ್ದರೂ ಇರಬಹುದು. ಅದನ್ನು ಯಾವ ರೀತಿಯಿಂದಲೂ ಅಗೆದು ತೆಗೆಯಲು ಬಾರದೆ ಕೊನೆಗೆ ಆ ಜಾಗವನ್ನು ಬ್ಯಾರಿಂಜರ್ ಮನೆತನದವರು ಪ್ರವಾಸಿ ಉದ್ಯಮಿಗಳಿಗೆ ಬಾಡಿಗೆ ಕೊಟ್ಟರು. ಇಪ್ಪತ್ತು ಸಾವಿರ ವರ್ಷಗಳ ಹಿಂದೆ ಇಲ್ಲಿಗೆ ಬಂದು ಡಿಕ್ಕಿ ಹೊಡೆದ ಬಾಹ್ಯಾಕಾಶ ವಸ್ತು ಮಾಡಿದ ಬೃಹತ್ ಗುಳಿಯನ್ನೂ, ಅಲ್ಲಿ ಪ್ರದರ್ಶನಕ್ಕಿಟ್ಟಿರುವ ಅದರ ಚೂರುಗಳನ್ನೂ ಸಂದರ್ಶಿಸಲು ಅಲ್ಲಿಗೆ ಈಗ ಪ್ರತಿವರ್ಷ ಸಹಸ್ರಾರು ಪ್ರವಾಸಿಗಳು ಬರುತ್ತಾರೆ. ಉಲ್ಕೆ ಡಿಕ್ಕಿ ಹೊಡೆದು ಆಗಿರುವ ಅಗಾಧ ಗುಂಡಿಯನ್ನು ನೋಡಿ ಚಕಿತರಾಗುತ್ತಾರೆ.

ಬ್ಯಾರಿಂಜರ್ ಗುಂಡಿಯನ್ನು ಅಧ್ಯಯನ ಮಾಡಿದ ಮೇಲೆ ಭೂಮಿಯ ಇತರೆಡೆಗಳಲ್ಲಿ ಉಲ್ಕೆಯ ಗುಂಡಿಗಳಿವೆಯೇ ಎಂದು ಅನ್ವೇಷಣೆ ಆರಂಭವಾಯಿತು. ಉಲ್ಕಾಪಾತಗಳಿಂದಾದ ಗುಂಡಿಗಳನ್ನು ಜಗತ್ತಿನಾದ್ಯಂತ ಅನೇಕ ದೇಶಗಳಲ್ಲಿ ಗುರುತಿಸಿದ್ದಾರೆ. ಆದರೆ ಅವು ಯಾವುದು ಬ್ಯಾರಿಂಜರ್ ಗುಂಡಿಯಂತೆ ಸ್ಪಷ್ಟ ಆಕಾರದಲ್ಲಿ ಇಲ್ಲ. ಒಂದು ಕಾಲದಲ್ಲಿ ಗುಂಡಿ ಇತ್ತೆನ್ನುವುದನ್ನು ಅಸ್ಪಷ್ಟವಾಗಿ ಗುರುತಿಸಬಹುದಷ್ಟೆ. ಖಗೋಲಶಾಸ್ತ್ರಜ್ಞರ ಪ್ರಕಾರ ಭೂಮಿಗೆ ಪ್ರತಿದಿನ ಈಗಲೂ ಒಂದು ಸಾವಿರ ಲಕ್ಷ ಉಲ್ಕೆಗಳು ಬಂದು ಬೀಳುತ್ತಿವೆ. ಇವುಗಳೆಲ್ಲ ಬಹುಪಾಲು ಗುಂಡುಸೂಜಿ ತಲೆಯ ಗಾತ್ರದಿಂದ ಮುಷ್ಟಿ ಗಾತ್ರದವು. ಇವು ಭೂಮಿಯ ವಾತಾವರಣವನ್ನು ತಾಗುತ್ತಿದ್ದಂತೆಯೆ ಸುಟ್ಟು ಭಸ್ಮವಾಗುತ್ತವೆ. ಇವುಗಳಲ್ಲಿ ಬಹು ದೊಡ್ಡ ಗಾತ್ರದವು ಮಾತ್ರ ಕೊಂಚ ದೂರದ ವರೆಗೆ ಉರಿಯುತ್ತಾ ನುಗ್ಗುವುದರಿಂದ ನಮಗೆ ಬೀಳುವ ನಕ್ಷತ್ರಗಳಂತೆ ಕಾಣಿಸುತ್ತವೆ. ಹೀಗೆ ಬೀಳುವ ಉಲ್ಕೆಗಳ ಒಟ್ಟು ಮೊತ್ತವೇ ಪ್ರತಿದಿನ ಸರಾಸರಿ ಐದು ಟನ್ ಆಗುತ್ತದೆ. ಈ ಉಲ್ಕೆಗಳಲ್ಲಿ ತುಂಬಾ ದೊಡ್ಡದಾದ ಲೋಹದ ವಸ್ತುಗಳಿಂದ ಕೂಡಿದ ಉಲ್ಕೆಗಳು ವಾತಾವರಣ ತಾಗುತ್ತಿದ್ದಂತೆಯೇ ಹೊತ್ತಿಕೊಂಡು ಪ್ರಜ್ವಲಿಸುತ್ತವಾದರೂ, ಅದರ ವಸ್ತು ಮೊತ್ತ ತುಂಬಾ ಹೆಚ್ಚಿರುವುದರಿಂದ ವಾತಾವರಣದಲ್ಲೇ ಆವಿಯಾಗದೆ ಬಂದು ಭೂಮಿಗೆ ಹೊಡೆಯುತ್ತದೆ.

ಕೆ.ಪಿ. ಪೂರ್ಣಚಂದ್ರ ತೇಜಸ್ವಿ

## ಕೆ.ಪಿ. ಪೂರ್ಣಚಂದ್ರ ತೇಜಸ್ವಿ



ಈ ಲೇಖನದ ಭಾಗವನ್ನು ಶ್ರೀ. ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ 'ಮಿಲೆನಿಮಯ್ –4 ಚಂದ್ರನ ಚೂರು' ಎಂಬ ಪುಸ್ತಕದಿಂದ ಆಯ್ದುಕೊಳ್ಳಲಾಗಿದೆ. ಶ್ರೀ. ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರು ಶಿವಮೊಗ್ಗ ಜಿಲ್ಲೆಯ ಕುಪ್ಪಳ್ಳಿಯಲ್ಲಿ 8.9.1938ರಂದು ಜನಿಸಿದರು. ಇವರು ರಾಷ್ಟ್ರಕವಿ ಕುವೆಂಪುರವರ ಸುಪುತ್ರರು. ಇವರ ತಾಯಿ ಹೇಮಾವತಿ. ಕತೆ, ಕವಿತೆ, ಕಾದಂಬರಿ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಅಪಾರ ಪ್ರತಿಭೆಯನ್ನು ತೋರಿದ್ದಾರೆ. 'ಪೂಚಂತೇ' ಇವರ ಕಾವ್ಯನಾಮ. 'ಸೋಮುವಿನ ಸ್ವಗತ ಲಹರಿ ಮತ್ತು ಇತರ ಕವನಗಳು', 'ಬೃಹನ್ನಳೆ'ಇವರ ಕವನ ಸಂಕಲನಗಳಾಗಿವೆ.

'ಅಬಚೂರಿನ ಪೋಸ್ಟಾಫೀಸ್', 'ಹುಲಿಯೂರಿನ ಸರಹದ್ದು', 'ಕಿರಿಗೂರಿನ ಗಯ್ಯಾಳಿಗಳು', 'ಕರ್ವಾಲೋ', 'ಚಿದಂಬರ ರಹಸ್ಯ' ಮೊದಲಾದವುದುಳು ಇವರು ಬರೆದ ಕಾದಂಬರಿಗಳು. 'ವ್ಯಕ್ತಿ ವಿಶಿಷ್ಟ ಸಿದ್ಧಾಂತ' ಇವರ ಒಂದು ವೈಜ್ಞಾನಿಕ ಕೃತಿಯಾಗಿದೆ. ತೇಜಸ್ವಿಯವರ 'ಅಬಚೂರಿನ ಪೋಸ್ಟಾಫೀಸ್' ಚಲನಚಿತ್ರವಾಗಿದೆ. 'ಕುಬಿ ಮತ್ತು ಇಯಾಲ' ಚಿತ್ರವು ರಾಷ್ಟ್ರ ಪ್ರಶಸ್ತಿ ಪಡೆದಿದೆ. 'ತಬರನ ಕಥೆ' ಅನೇಕ ಬಹುಮಾನಗಳನ್ನು ಪಡೆದಿದೆ. ಜುಗಾರಿ ಕ್ರಾಸ್, ಪರಿಸರ ಕಥೆಗಳು, ಸಹಜಕೃಷಿ, ಮಿಂಚುಳ್ಳಿ, ಅಲೆಮಾರಿ, ಅಂಡಮಾನ್ ಮುಂತಾದವು ಇತ್ತೀಚಿಗಿನ ಕೃತಿಗಳು. ಚಿದಂಬರ ರಹಸ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಇವರು 5.4.2007ರಂದು ನಿಧನರಾದರು.

## ಚಟುವಟಿಕೆಗಳು

### ❑ ಅರ್ಥ ಹುಡುಕಿರಿ

'ಬ್ಯಾರಿಂಜರ್ ಗುಂಡಿ' ಲೇಖನವನ್ನು ಓದಿದಿರಲ್ಲವೇ? ಈ ಲೇಖನದಲ್ಲಿ ಬರುವ ನವೀನ ಪದಗಳನ್ನು ಪಟ್ಟಿಮಾಡಿರಿ. ಅರ್ಥಕೋಶದ ಸಹಾಯದಿಂದ ಅರ್ಥವನ್ನು ಕಂಡುಕೊಳ್ಳಿರಿ.

### ❑ ಉತ್ತರ ಬರೆಯಿರಿ

- ಉಲ್ಕಾಪಾತದ ಗುಳಿಗಳು ಭೂಮಿಗಿಂತ ಹೆಚ್ಚು ಚಂದ್ರನಲ್ಲಿರಲು ಕಾರಣವೇನು?
- 'ಬ್ಯಾರಿಂಜರ್ ಗುಂಡಿ' ಎಂದರೇನು? ಇದು ಎಲ್ಲಿದೆ?
- 'ಬ್ಯಾರಿಂಜರ್ ಗುಂಡಿ' ಉಂಟಾದುದು ಹೇಗೆ? ಇದಕ್ಕೆ ಈ ಹೆಸರು ಬರಲು ಕಾರಣವೇನು?
- ಗುಂಡಿಯ ತಳದಲ್ಲಿ ಕಬ್ಬಿಣದ ಅದುರು ಸಿಗದಿದ್ದುದನ್ನು ಕಂಡು ಬ್ಯಾರಿಂಜರ್ ಏನು ಮಾಡಿದನು?
- ಯಾವ ರೀತಿಯಿಂದಲೂ ಅದುರನ್ನು ಅಗೆದು ತೆಗೆಯಲು ಸಾಧ್ಯವಾಗದ ಆ ಜಾಗವನ್ನು ಮುಂದೇನು ಮಾಡಲಾಯಿತು?
- ಭೂಮಿಗೆ ಬಂದು ಬೀಳುವ ಉಲ್ಕೆಗಳ ಬಗ್ಗೆ ಖಗೋಳಶಾಸ್ತ್ರಜ್ಞರು ಸಂಗ್ರಹಿಸಿದ ವಿವರಗಳೇನು?

### ❑ ಬಿಟ್ಟಸ್ಥಳ ತುಂಬಿಸಿರಿ

- ಕೊಡಲಾದ ಪದಗಳನ್ನು ಪಾಠದಲ್ಲಿ ಬಿಟ್ಟುಹೋದ ಸ್ಥಳಗಳಲ್ಲಿ ಸರಿಯಾಗಿ ತುಂಬಿರಿ.

(ಹತಾಶ, ಭೀಕರ, ಕ್ಷಣಮಾತ್ರ, ಬೃಹತ್, ಅಂತರ್ಗತ, ಅಪ್ಪಳಿಸು, ಸಂಶೋಧನೆ, ಅಗಾಧ, ಚಕಿತ.)

ಸಾಗರ ಭೂಕಂಪದಿಂದಾಗಿ ಸುನಾಮಿ ಉಂಟಾಗುವುದು ಎಂದು .................. ಗಳಿಂದ ತಿಳಿದು ಬರುತ್ತದೆ. ಸುನಾಮಿಯ ಸಂದರ್ಭದಲ್ಲಿ ಸಮುದ್ರದಿಂದ .................. ಗಾತ್ರದ ಅಲೆಗಳು ಕರೆಗೆ ಬಂದು.................. ವುವು. ಸಮುದ್ರದ ನೀರು .................. ದಲ್ಲಿ ನೆಲಭಾಗವನ್ನು ಆಕ್ರಮಿಸಿ ಎಲ್ಲವನ್ನೂ ಕೊಚ್ಚಿಕೊಂಡು ಹೋಗಿ .................. ನಾಶನಷ್ಟ, ಪ್ರಾಣಹಾನಿ ಸಂಭವಿಸುವುದು. ಸುನಾಮಿಯ .................. ದೃಶ್ಯಗಳನ್ನು ನೋಡಿದರೆ ಯಾರೇ ಆದರೂ .................. ಗೊಳ್ಳುತ್ತಾರೆ. ವಿಜ್ಞಾನಿಗಳು .................. ರಾಗದೆ ಸುನಾಮಿಯ ಬಗ್ಗೆ ಮುಂಚಿತವಾಗಿಯೇ ತಿಳಿಯುವುದಕ್ಕಿರುವ ಸಂಶೋಧನೆಗಳಲ್ಲಿ ನಿರತರಾಗಿದ್ದಾರೆ.

### ❑ ಹೊಂದಿಸಿ ಬರೆಯಿರಿ

'ಅ' ವಿಭಾಗದ ಪದಕ್ಕೆ ಸಮಾನ ಆಶಯವನ್ನು ನೀಡುವ ಪದಗಳನ್ನು 'ಇ' ಮತ್ತು 'ಉ' ಕೋಣೆಗಳಿಂದ ಆಯ್ದು ಹೊಂದಿಸಿರಿ.

| ಅ | ಇ | ಉ |
|---|---|---|
| ಡಿಕ್ಕಿ ಹೊಡೆಯು | ಅಪಾರ | ಗೋಚರಿಸು |
| ಅಗಾಧ | ಬಡಿಯು | ತುಂಬಾ |
| ಕಾಣಸಿಗು | ತಾಪ | ಗುಳಿ |
| ಗುಂಡಿ | ಪತ್ತೆಯಾಗು | ಅಪ್ಪಳಿಸು |
| ಉಷ್ಣ | ಹೊಂಡ | ಶಾಖ |

### ❑ ವಾಕ್ಯ ಹುಡುಕಿ ಬರೆಯಿರಿ

- ಹಾಗಿದ್ದರೆ ಇಲ್ಲಿ ಗಣಿಗಾರಿಕೆ ನಡೆಸಿ ಅಪಾರ ಪ್ರಮಾಣದಲ್ಲಿ ನಿಕ್ಕಲ್, ಕಬ್ಬಿಣ ಹೊರತೆಗೆಯಬಹುದೆಂದು ಊಹಿಸಿ ಆತ ಅಲ್ಲಿ ಗಣಿಗಾರಿಕೆಗಾಗಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಪರವಾನಿಗೆ ಪಡೆದನು. ಪಾಠಭಾಗದಲ್ಲಿರುವ ಈ ವಾಕ್ಯವನ್ನು ಈ ಕೆಳಗಿನಂತೆ ಸರಳ ವಾಕ್ಯಗಳಾಗಿ ಬರೆಯಬಹುದಲ್ಲವೇ?
- ಹಾಗಿದ್ದರೆ ಇಲ್ಲಿ ಗಣಿಗಾರಿಕೆ ನಡೆಸಬಹುದು. ಅಪಾರ ಪ್ರಮಾಣದಲ್ಲಿ ನಿಕ್ಕಲ್, ಕಬ್ಬಿಣ ಹೊರತೆಗೆಯಬಹುದು ಎಂದು ಆತನು ಊಹಿಸಿದನು. ಆತನು ಅಲ್ಲಿ ಗಣಿಗಾರಿಕೆಗಾಗಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದನು. ಪರವಾನಗಿ ಪಡೆದನು.
- ಈ ಸರಳ ವಾಕ್ಯಗಳನ್ನು ಒಳಗೊಂಡ ಸಂಯುಕ್ತ ವಾಕ್ಯವನ್ನು ಪಾಠಭಾಗದಿಂದ ಆರಿಸಿ ಬರೆಯಿರಿ.

ಆಕಾಶಕಾಯವು ವಾತಾವರಣದ ಘರ್ಷಣೆಗೆ ಕಾದಿತು. ಅದು ಬಿಳಿಯಾದ ಜ್ವಾಲೆಯನ್ನು ಹೊಮ್ಮಿಸಿತು. ಅದು ಅನೇಕ ಸಾವಿರ ಮೈಲು ವೇಗದಲ್ಲಿ ನುಗ್ಗಿತು. ಬಂದು

ಭೂಮಿಗೆ ಢಿಕ್ಕಿ ಹೊಡೆಯಿತು. ಆ ಕೂಡಲೇ ಅಲ್ಲಿ ಅತ್ಯುಷ್ಣ ಉಂಟಾಯಿತು. ಅದಷ್ಟು ಭಾಗ ಭೂಮಿಯೂ ಸೇರಿದಂತೆ ಎಲ್ಲವೂ ಅನಿಲೀಕರಣಗೊಂಡಿತು.

- ಪಾಠಭಾಗದಿಂದ ಇನ್ನಷ್ಟು ಸಂಯುಕ್ತ ವಾಕ್ಯಗಳನ್ನು ಕಂಡುಹಿಡಿಯಿರಿ.

## ❑ ಲೇಖನ ತಯಾರಿಸಿರಿ

- 'ಬ್ಯಾರಿಂಜರ್ ಗುಂಡಿ' ಒಂದು ಅದ್ಭುತ ಸೃಷ್ಟಿ. ಇದರ ಬಗ್ಗೆ ಸಂಶೋಧನೆ ನಡೆಸಿದಾಗಲೇ ಇದರ ರಹಸ್ಯ ತಿಳಿಯಿತು. ಹಾಗೆಯೇ ನಮ್ಮ ಕಣ್ಣಮುಂದೆ ಇಂತಹ ಅದ್ಭುತಗಳು ನಡೆಯುತ್ತಿವೆಯಷ್ಟೆ? ಉದಾಹರಣೆಗೆ ಮಳೆಗಾಲ ಆರಂಭವಾಗುವಾಗಲೂ ಕೊನೆಗೊಳ್ಳುವಾಗಲೂ ಮಿಂಚು ಗುಡುಗುಗಳು ನಮ್ಮನ್ನು ಹೆದರಿಸುತ್ತವೆ. ಇದರ ಕುರಿತು ಮಾಹಿತಿಗಳನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಲೇಖನವೊಂದನ್ನು ತಯಾರಿಸಿರಿ.

## ❑ ಸಂಧಿ ಪದಗಳನ್ನು ಬರೆಯಿರಿ

- ಪಾಠಭಾಗವಲ್ಲಿ ಬಂದಿರುವ ಲೋಪ ಮತ್ತು ಆಗಮ ಸಂಧಿಗಳಾಗುವ ಪದಗಳನ್ನು ಆರಿಸಿ ಬರೆಯಿರಿ.

| ಲೋಪಸಂಧಿ | ಆಗಮಸಂಧಿ |
|---|---|
| | |

## ❑ ವಿಭಕ್ತಿ ಪ್ರತ್ಯಯಗಳು

| ಪದ | ವಿಂಗಡಣೆ | ಸೇರಿಕೊಂಡ ಅಕ್ಷರಗಳು |
|---|---|---|
| ಕವಿಯು | ಕವಿ + ಉ | ಉ |
| ಕರುವನ್ನು | ಕರು + ಅನ್ನು | ಅನ್ನು |
| ಮನೆಯಿಂದ | ಮನೆ + ಇಂದ | ಇಂದ |
| ಮನೆಗೆ | ಮನೆ + ಗೆ | ಗೆ |
| ಕುರಿಯ | ಕುರಿ + ಅ | ಅ |
| ತಲೆಯಲ್ಲಿ | ತಲೆ + ಅಲ್ಲಿ | ಅಲ್ಲಿ |

ವಾಕ್ಯ ಮಾಡುವಾಗ ಪದಗಳಿಗೆ ಈ ಅಕ್ಷರಗಳನ್ನು ಸೇರಿಸುತ್ತೇವೆ.

ಉದಾ: ಕವಿಯು ಕಾವ್ಯವನ್ನು ಬರೆಯುತ್ತಾರೆ.

ಅಣ್ಣನು ಮನೆಯಿಂದ ಶಾಲೆಗೆ ಬಂದನು.

ಕುರಿಯ ಕಿವಿಯಲ್ಲಿ ಏನಿದೆ?

ಈ ಅಡಿಗೆರೆ ಎಳೆದ ಅಕ್ಷರಗಳನ್ನು 'ವಿಭಕ್ತಿ ಪ್ರತ್ಯಯ' ಎನ್ನುತ್ತಾರೆ. ನಾಮ ಪದಗಳೊಂದಿಗೆ ವಿಭಕ್ತಿ ಪ್ರತ್ಯಯವನ್ನು ಸೇರಿಸಿ ಬರೆದಾಗ ವಾಕ್ಯಗಳು ಹೆಚ್ಚು ಅರ್ಥ ಪೂರ್ಣವಾಗುತ್ತವೆ.

## ❑ ಸರಿಪಡಿಸಿ ಬರೆಯಿರಿ

- ಕೆಳಗಿನ ಪಾರಾವನ್ನು ಸೂಕ್ತ ವಿಭಕ್ತಿ ಪ್ರತ್ಯಯವನ್ನು ಸೇರಿಸಿ ಸರಿಪಡಿಸಿ ಬರೆಯಿರಿ.

ಅಂದು ಶಾಲೆ ಕಥಕಳಿ ಪ್ರದರ್ಶನವಿತ್ತು. ಹರೀಶ ಗೆಳೆಯನಾದ ಮಾಧವನೊಂದಿಗೆ ಪ್ರದರ್ಶನ ತೆರಳಿದನು. ಪ್ರದರ್ಶನ ಆರಂಭವಾಯಿತು. ವಿವಿಧ ವೇಷಗಳು ಕಂಡು ಹರೀಶ ಆಶ್ಚರ್ಯವಾಯಿತು. ದುರ್ಯೋಧನ ಕೊಲ್ಲುವ ಭೀಮ ಪಾತ್ರ ಆತ ಮನಸ್ಸು ಸೂರೆಗೊಂಡಿತು. ಸರೋವರ ನೀರು ದುರ್ಯೋಧನ ಎದ್ದುಬರುವ ದೃಶ್ಯವಂತೂ ಅದ್ಭುತವಾಗಿತ್ತು.

# ಕನಸು ನನಸಾಯಿತು

ಪ್ರೀತಿ, ಸ್ನೇಹ, ಸಹಕಾರ ಮನುಷ್ಯನಲ್ಲಿರಬೇಕಾದ ಸದ್ಗುಣಗಳು. ಅಸಹಾಯಕರಿಗೆ, ನಿರ್ಗತಿಕರಿಗೆ, ದೀನರಿಗೆ ಸಹಾಯ ಮಾಡುವುದರಿಂದ ಅವರ ಕಷ್ಟಗಳು ಪರಿಹಾರವಾಗುತ್ತವೆ. ಇದು ದೇವರ ಸೇವೆಗೆ ಸಮಾನ. ಇದರಿಂದ ನಮ್ಮ ಬದುಕು ಸಾರ್ಥಕವಾಗುತ್ತದೆ.

ರಷ್ಯಾ ದೇಶದ ಒಂದಾನೊಂದು ಪಟ್ಟಣ. ಅಲ್ಲೊಬ್ಬ ಸಮಗಾರನಿದ್ದನು. ಅವನ ಹೆಸರು ಮಾರ್ಟಿನ್ ಅವದೀಚ್ ಎಂದು. ಕೆಲಸದಲ್ಲಿ ಜಾಣ್ಮೆ, ಮಜೂರಿಯಲ್ಲಿ ಕ್ರಮ ಬದ್ಧತೆ, ಮಾತಿನಲ್ಲಿ ಸತ್ಯಸಂಧತೆ, ಇವು ಆತನ ಉದ್ಯಮದಲ್ಲಿದ್ದವು. ಆದುದರಿಂದಲೇ ಮಾರ್ಟಿನ್ ಆ ಪಟ್ಟಣದ ಜನರೆಲ್ಲರ ವಿಶ್ವಾಸಕ್ಕೆ ಪಾತ್ರನಾಗಿದ್ದನು.

ಈಗ ಮಾರ್ಟಿನ್ ಒಬ್ಬಂಟಿಗ. ಆತನ ಪತ್ನಿ ಹಾಗೂ ಮಕ್ಕಳು ಅವನನ್ನು ಬಿಟ್ಟು ಹೋಗಿದ್ದರು. ಅವನಿಗೆ ಜೀವನದಲ್ಲಿ ಜುಗುಪ್ಸೆ ಬಂದಿತ್ತು. ಒಂದೊಂದು ದಿನ ಮೆಟ್ಟು ಹೊಲಿಯುವುದನ್ನು ಬಿಟ್ಟು ಗಂಟೆಗಟ್ಟಳೆ ಏನನ್ನೋ ಯೋಚಿಸುತ್ತಾ ಕುಳಿತಿರುತ್ತಿದ್ದನು. ಕೆಲವೊಮ್ಮೆ ಅಸಹ್ಯವಾದ ನೋವಿನಿಂದ ಚಡಪಡಿಸುತ್ತಿದ್ದನು. ತನ್ನನ್ನು ವಿಧಿಯೇಕೆ ಒಯ್ಯುವುದಿಲ್ಲವೆಂದು ಕೊರಗುತ್ತ ದೇವರನ್ನು ಶಪಿಸುತ್ತಿದ್ದನು. ಇದರಿಂದಾಗಿ ಕ್ರಮೇಣ ಅವನು ಇಗರ್ಜಿಗೆ ಹೋಗುವುದನ್ನೂ ನಿಲ್ಲಿಸಿದನು.


ಒಂದು ದಿನ – ಪವಿತ್ರ ಸ್ಥಳಗಳನ್ನು ಸಂದರ್ಶಿಸಲು ಹೊರಟಿದ್ದ ಮಾರ್ಟಿನನ ಹಳೆಯ ಗೆಳೆಯನೊಬ್ಬನು ಬಂದನು. ತನ್ನಲ್ಲಿಗೆ ಬಂದ ಗೆಳೆಯನ ಯೋಗಕ್ಷೇಮವನ್ನು ವಿಚಾರಿಸಿದ ಮಾರ್ಟಿನ್ ತನ್ನ ದುಃಖವನ್ನು ಅವನ ಮುಂದೆ ತೋಡಿಕೊಂಡನು.

ಮಾರ್ಟಿನನಿಗೆ ಸಮಾಧಾನ ಹೇಳುತ್ತಾ ಆ ಗೆಳೆಯನು ಯೇಸುಕ್ರಿಸ್ತನ ಸುವಾರ್ತೆಗಳನ್ನು ಓದಲು ಉಪದೇಶವಿತ್ತನು. ಗೆಳೆಯನ ಮಾತು ಮಾರ್ಟಿನನ್ನು ಆಕರ್ಷಿಸಿತು. ಅಂದಿನಿಂದಲೇ ಸುವಾರ್ತೆಗಳನ್ನು ಓದತೊಡಗಿದನು. ಮಾರ್ಟಿನ್ ಯೇಸುಕ್ರಿಸ್ತನ ದಿವ್ಯ ಸಂದೇಶಗಳಿಂದ ಹೃದಯವನ್ನು ಹಗುರ ಮಾಡಿಕೊಂಡನು.

ಒಂದು ದಿನ ಮಾರ್ಟಿನ್ ಸುವಾರ್ತೆಯನ್ನು ಓದುತ್ತಾ ಓದುತ್ತಾ ನಿದ್ದೆ ಮಾಡುವುದನ್ನು ಮರೆತನು. "ಧನಿಕ ಯೆಹೂದಿಯು ಯೇಸು ಸ್ವಾಮಿಯನ್ನು ತನ್ನ ಮನೆಗೆ ಆಮಂತ್ರಿಸಿದನು. ಪಾಪಿಯಾದ ಹೆಂಗಸೊಬ್ಬಳು ತನ್ನ ಕಣ್ಣೀರಿನಿಂದ ಯೇಸುವಿನ ಪಾದಗಳನ್ನು ತೊಳೆದುದು, ಸ್ವಾಮಿಯು ಅವಳನ್ನು ಕ್ಷಮಿಸಿದುದು"–ಇದನ್ನು ಓದುತ್ತಾ ಈ ಬಗ್ಗೆ ಯೋಚಿಸುತ್ತಾ ಹಾಗೆಯೇ ತೋಳುಗಳ ಮೇಲೆ ತಲೆಯಿರಿಸಿ ಮಲಗಿದನು.

ಸ್ವಲ್ಪ ಹೊತ್ತಿನಲ್ಲಿಯೇ ಅವನಿಗೆ ತೂಕಡಿಕೆ ಹತ್ತಿತು. "ಮಾರ್ಟಿನ್" ಎಂದು ಯಾರೋ ಕೂಗಿದಂತಾಯಿತು. ಮಾರ್ಟಿನ್ ಎದ್ದು ನೋಡುತ್ತಾನೆ. ಯಾರೂ ಇಲ್ಲ. ಪುನಃ ಮಲಗಿಕೊಂಡನು.

"ಮಾರ್ಟಿನ್, ನಾಳೆ ನೀನು ನನ್ನನ್ನು ರಸ್ತೆಯಲ್ಲಿ ಕಾಣುವೆ" ಎಂಬ ದನಿ ಕೇಳಿಸಿತು. ಚಕಿತನಾದ ಮಾರ್ಟಿನ್ ದನಿ ಕೇಳಿಸಿದ ಕಡೆಗೆ ನೋಡಿದನು. ಯಾರೂ ಇಲ್ಲ. ಕೊಂಚ ಹೊತ್ತು ಕಾದು ದೀಪವಾರಿಸಿ ಮಲಗಿ ನಿದ್ದೆ ಹೋದನು.



ಮರುದಿನ ಬೆಳಕು ಹರಿಯುವ ಮೊದಲೇ ಮಾರ್ಟಿನ್ ಎದ್ದು ಪ್ರಾರ್ಥನೆಯನ್ನು ಮುಗಿಸಿ ಚಹಾ ತಯಾರಿಗೆ ನೀರಿಟ್ಟು ಕಿಟಕಿಯ ಬಳಿ ಕುಳಿತನು. ಕೆಲಸಕ್ಕೆ ಕುಳಿತಿರುವಾಗ ಹಿಂದಿನ ರಾತ್ರಿಯ ಸ್ವಪ್ನದ ವಿಚಾರ ನೆನಪಿನ ಸುಳಿಯಲ್ಲಿ ತೇಲಿಬಂತು. ಆದರೂ ಮಾರ್ಟಿನ್ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ, ತನ್ನ ಕೆಲಸದಲ್ಲಿ ಮಗ್ನನಾದನು. ಹೀಗಿದ್ದರೂ ಒಮ್ಮೊಮ್ಮೆ ಅವನ ದೃಷ್ಟಿ ರಾಜರಸ್ತೆಯ ಕಡೆಗೆ ಸಾಗುತ್ತಿತ್ತು. ರಸ್ತೆಯು ತಾನು ಕೆಲಸ ಮಾಡುತ್ತಿದ್ದ ಕೋಣೆಯ ಕಿಟಕಿಯ ಹತ್ತಿರವೇ ಇದ್ದುದರಿಂದ ರಸ್ತೆಯಲ್ಲಿ ತನಗೆ ಪರಿಚಯವಿಲ್ಲದ ಚಪ್ಪಲಿಗಳೇನಾದರೂ ಕಾಣಿಸುತ್ತವೇಯೋ ಎಂದು ನೋಡುತ್ತಿದ್ದನು.

ಮಾರ್ಟಿನನ ಕಣ್ಣುಗಳ ಮುಂದೆ ಹಲವರು ದಾಟಿ ಹೋದರು. ಎಲ್ಲರೂ ಅವನ ಪರಿಚಿತರೆ. ಒಂದೇ ಒಂದು ಹೊಸ ಚಪ್ಪಲಿ ಕಾಣಿಸಲಿಲ್ಲ. ಕೊಂಚ ಹೊತ್ತು ಸರಿಯಲು ಹಿಂದಿನ ಅರಸರ ಕಾಲದ ಮುದಿ ಸಿಪಾಯಿ ಸ್ಟೆಪಾನಿಚ್ ಹಾರೆ ಹಿಡಿದುಕೊಂಡು ಆ ದಾರಿಯಾಗಿ ಬಂದನು. ನೆರೆಯ ವ್ಯಾಪಾರಿಯೊಬ್ಬನು ಅವನನ್ನು ತನ್ನ ಮನೆಯಲ್ಲಿ ಕೆಲಸಕ್ಕಿರಿಸಿಕೊಂಡಿದ್ದನು. ಸ್ಟೆಪಾನಿಚ್ ಮಾರ್ಟಿನನ ಕಿಟಕಿಯ ಬಳಿ ಬಿದ್ದಿದ್ದ ಮಂಜನ್ನು ಕೂಡಿಹಾಕುತ್ತಿದ್ದನು. ಅವನನ್ನೇ ದಿಟ್ಟಿಸಿ ನೋಡಿದ ಮಾರ್ಟಿನ್ ತನ್ನ ಹುಚ್ಚುತನಕ್ಕೆ ನಗುತ್ತಾ ಪುನಃ ಕೆಲಸಕ್ಕೆ ತೊಡಗಿದನು. ಸ್ವಲ್ಪ ಹೊತ್ತಿನಲ್ಲಿ ಮಾರ್ಟಿನ್ ಮತ್ತೊಮ್ಮೆ ಹೊರಗಿಣಿಕಿ ನೋಡಿದನು. ಸ್ಟೆಪಾನಿಚ್ ಹಾರೆಯನ್ನು ಬದಿಗಿರಿಸಿ ಬಳಲಿ ಕುಳಿತಿದ್ದ. ಆ ಮುದುಕನನ್ನು ನೋಡಿ ಮಾರ್ಟಿನನಿಗೆ ಕಳವಳ ವಾಯಿತು.

"ಅವನನ್ನು ಕರೆದು ಒಂದಿಷ್ಟು ಚಹಾ ಕೊಟ್ಟರಾಗದೆ?" ಮಾರ್ಟಿನ್ ಯೋಚಿಸಿದನು. ಯೋಚನೆ ಹೊಳೆದದ್ದೇ ತಡ, ಮಾರ್ಟಿನ್ ಅವನ ಬಳಿಗೆ ಹೋಗಿ "ಗೆಳೆಯ ತುಂಬ ಬಳಲಿರುವೆ; ಅದಕ್ಕೂ ಮಿಗಿಲಾಗಿ ಚಳಿಯಿಂದ ನಡುಗುತ್ತಿರುವೆ. ನನ್ನಲ್ಲಿಗೆ ಬಂದು ಕೊಂಚ ಚಳಿ ಕಾಯಿಸಿಕೋ, ಒಂದು ಗ್ಲಾಸ್ ಚಹಾವನ್ನು ಕುಡಿದುಕೊ" ಎಂದೆನ್ನುತ್ತ ಪ್ರೀತಿಯಿಂದ ಅವನನ್ನು ಮನೆಗೆ ಕರೆದುಕೊಂಡು ಬಂದನು.

ಎರಡು ಗ್ಲಾಸುಗಳಲ್ಲಿ ಚಹಾ ತುಂಬಿ, ಒಂದನ್ನು ಅವನ ಕೈಯಲ್ಲಿರಿಸಿ ಮತ್ತೊಂದನ್ನು ತಾನೆತ್ತಿಕೊಂಡನು. ಇಬ್ಬರೂ ಚಹಾ ಕುಡಿದರು. ಸ್ಟೆಪಾನಿಚ್ ತನ್ನ ಕೃತಜ್ಞತೆಯನ್ನು ಅರ್ಪಿಸಿದನು. ಸ್ಟೆಪಾನಿಚನ ಬಳಲಿಕೆ ಇನ್ನೂ ಕಡಿಮೆಯಾಗಿಲ್ಲವೆಂಬುದನ್ನರಿತ ಮಾರ್ಟಿನ್ ಮತ್ತೊಂದು ಗ್ಲಾಸನ್ನು ಮುಂದೆ ಮಾಡಿದನು. ಅದನ್ನೂ ಸ್ಟೆಪಾನಿಚ್ ಬರಿದು ಮಾಡಿದನು.

ಸ್ಟೆಪಾನಿಚ್ ಚಹಾ ಕುಡಿಯುತ್ತಿದ್ದಾಗ ಮಾರ್ಟಿನ್ ಮಾತ್ರ ಹೊರಗೆ ನೋಡುತ್ತಲೇ ಇದ್ದನು.

ಗ್ಲಾಸನ್ನು ಕೆಳಗಿರಿಸುತ್ತ ಸ್ಟೆಪಾನಿಚ್ 'ನೀನು ಯಾರನ್ನಾದರೂ ಕಾಯುತ್ತಿರುವೆಯಾ?' ಎಂದು ಕೇಳಿದನು.

"ಹೌದು, ಆದರೆ ಹೇಳಲು ಸಂಕೋಚ. ನಿನ್ನೆ ರಾತ್ರೆ ಕೇಳಿದುದನ್ನು ತಲೆಯಿಂದ ದೂರಗೊಳಿಸುವುದೇ ಅಸಾಧ್ಯವಾಗಿದೆ. ನಾನು ನಿನ್ನೆ ತೂಕಡಿಕೆಯಲ್ಲಿದ್ದಾಗ ಯಾರೋ ನನ್ನನ್ನು 'ಮಾರ್ಟಿನ್ ನಿನಗಾಗಿ ನಾಳೆ ಬರುವೆನು' ಎಂದು ಹೇಳಿದಂತೆ ಕೇಳಿತು. ಆ ಮಾತು ನನ್ನ ತಲೆಯೊಳಗೆ ಹೂತುಹೋಗಿದೆ. ಅದನ್ನು ಮರೆಯಲು ಸಾಧ್ಯವಾಗದು. ನನ್ನ ಪ್ರೀತಿಯ ಸ್ವಾಮಿಯು ಎಲ್ಲಾದರೂ ಬಂದು ಬಿಡುವರೋ ಎಂಬ ಆಸೆ ಎದೆಯಾಳದಲ್ಲಿ ಅಂಕುರಿಸಿದೆ" ಎಂದು ಮಾರ್ಟಿನ್ ಉತ್ತರಿಸಿದನು.

ಸ್ಟೆಪಾನಿಚ್ ಏನನ್ನೂ ಆಡಲಿಲ್ಲ. ಮಾರ್ಟಿನ್ ಮತ್ತೊಂದು ಗ್ಲಾಸ್ ನೀಡಿದ. ಅದನ್ನೂ ಖಾಲಿ ಮಾಡಿದ ಸ್ಟೆಪಾನಿಚ್ ಮತ್ತೊಮ್ಮೆ ಧನ್ಯವಾದವನ್ನರ್ಪಿಸಿ ಅಲ್ಲಿಂದ ಹೊರಟನು.

ಒಂದು ಗಂಟೆ ದಾಟಿತು. ಮಾರ್ಟಿನ್ ಕಿಟಕಿಯ ಬಳಿಯಲ್ಲೇ ಇದ್ದನು. ಕೆಲಸದಲ್ಲಿ ಹುರುಪಿರಲಿಲ್ಲ. ಮನಸ್ಸಿನಲ್ಲಿ ನೆಮ್ಮದಿಯಿರಲಿಲ್ಲ. ಆ ದಾರಿಯಲ್ಲಿ ಹಲವರು ಸಾಗಿದರು. ದೂರದಲ್ಲಿ ಒಬ್ಬಾಕೆ ಹೆಂಗಸು ಕಾಣಿಸಿದಳು. ಅದೇ ದಾರಿಯಾಗಿ ಬರುತ್ತಿದ್ದಳು. ಮಾರ್ಟಿನ್ ಅತ್ತಲೇ ನೋಡಿದನು. ಆಕೆ ಕಿಟಕಿಯ ಬಳಿ ಬಂದಳು. ಅವಳು ತೀರಾ ಬಡವಿ. ಅವಳನ್ನೀವರೆಗೆ ಮಾರ್ಟಿನ್ ನೋಡಿರಲಿಲ್ಲ. ಆಕೆಯು ಮಗುವನ್ನೆತ್ತಿ ಕೊಂಡಿದ್ದಳು. ತನ್ನ ಹರಿದು ಹೋದ ಸೆರಗಿನಿಂದ ಮಗುವನ್ನು ಚಳಿಯಿಂದ ಕಾಪಾಡಲು ಯತ್ನಿಸುತ್ತಿದ್ದಳು. ಮಗುವು ಚಳಿಯಿಂದ ಚಡಪಡಿಸುತ್ತಿತ್ತು.

ಮಾರ್ಟಿನ್ ಆಕೆಯನ್ನು ಸಮೀಪಿಸಿ "ಅಮ್ಮ, ಇಲ್ಲಿ ನಿಲ್ಲಲು ನಿನಗೆ ಕಷ್ಟವಾಗುವುದು. ಒಳಗೆ ಬಾ" ಎಂದನು. ಅಪರಿಚಿತ ಮುದುಕನೊಬ್ಬನು ಕರುಣೆಗೊಂಡು ಕರೆಯುವುದನ್ನು ಕಂಡು ಆಕೆ ಮರುಮಾತನಾಡದೆ ಒಳಗೆ ಬಂದಳು. ಮಾರ್ಟಿನ್ ಆಕೆಯನ್ನು ಒಲೆಯ ಬಳಿಗೊಯ್ದು ಇಲ್ಲಿ ಕುಳ್ಳಿರು, ಚಳಿ ಕಾಯಿಸಿಕೋ, ಮಗುವಿಗೆ ಮೊಲೆಯುಣಿಸು' ಎಂದನು.

'ನಾನೆಂತು ಮೊಲೆಯುಣಿಸಲಿ? ನನಗೆ ಆಹಾರವಿಲ್ಲ' ಎಂದು ಕುಗ್ಗಿದ ದನಿಯಲ್ಲಾಕೆ ಹೇಳಿದಳು.

ಮಾರ್ಟಿನ್ ಕೂಡಲೇ ಬಟ್ಟಲಲ್ಲಿ ಸಾರು ಮತ್ತು ಒಂದು ತುಂಡು ಬ್ರೆಡ್ ಇವನ್ನು ಆಕೆಯ ಮುಂದಿರಿಸಿದನು. ಆಕೆಯ ಆಹಾರವನ್ನು ತೆಗೆದುಕೊಳ್ಳುತ್ತಿರುವಾಗ ಮಾರ್ಟಿನ್ ಅಳುತ್ತಿರುವ ಮಗುವನ್ನು ಆಡಿಸಲು ತೊಡಗಿದನು. ಅವನ ಪ್ರಶಾಂತವಾದ ಮುಖವನ್ನು ಕಂಡ ಮಗು ಕ್ರಮೇಣ ಅಳು ನಿಲ್ಲಿಸಿ ನಗತೊಡಗಿತು.

ಮಗುವನ್ನು ಆಡಿಸುತ್ತಿದ್ದಂತೆ ಮಾರ್ಟಿನ್ ಆಕೆಯ ಗೊತ್ತುಗುರಿಯನ್ನು ವಿಚಾರಿಸಿದನು. ಪತಿಯನ್ನು ಕಳೆದುಕೊಂಡ ತಾನೊಬ್ಬ ನಿರ್ಗತಿಕಳೆಂದೂ ಹೊಟ್ಟೆ ಹೊರೆಯಲು ಕೆಲಸಕ್ಕಾಗಿ ಅಲೆಯುತ್ತಿರುವೆನೆಂದೂ ದೇವರ ದಯೆಯಿಂದ ಇಲ್ಲಿಗೆ ಸಮೀಪದ ಮಹಿಳೆಯೊಬ್ಬರು ಒಂದು ವಾರದ ಬಳಿಕ ಕೆಲಸ ಕೊಡಲು ಒಪ್ಪಿರುವರೆಂದೂ ಅಲ್ಲಿಯ ವರೆಗೆ ದಿನಗಳು ದೂಡುವುದು ಕಷ್ಟವಾಗಿರುತ್ತ ಅಲ್ಲಲ್ಲಿ ಅಲೆಯುತ್ತಿರುವೆನೆಂದೂ ತಿಳಿಸಿ ಆಕೆ ಅಳತೊಡಗಿದಳು.

ಮಾರ್ಟಿನ್ ಆಕೆಯನ್ನು ಸಂತಯಿಸುತ್ತ "ಹಾಗಾದರೆ ಅಲ್ಲಿಯ ವರೆಗೆ ನೀನು ಇಲ್ಲಿಯೇ ಇರಬಹುದಲ್ಲ" ಎಂದನು.

"ದೇವರ ದಯೆಯಿಂದ ನನಗೆ ಕೆಲಸ ಕೊಡಲೊಪ್ಪಿದ ಮಹಿಳೆ ತನ್ನದೊಂದು ಗುಡಿಸಲಲ್ಲಿ ನನ್ನನ್ನು ಇರಗೊಟ್ಟಿದ್ದಾರೆ" ಎಂದಳು ಆ ಮಹಿಳೆ.

ಕೂಡಲೆ ಮಾರ್ಟಿನ್ ಚಳಿಯಿಂದ ನಡುಗುವ ಮಗುವಿಗೆ ಹೊದಿಸಲು ಬರುವಂತೆ ತನ್ನದೊಂದು ನಿಲುವಂಗಿಯನ್ನು ಕೊಟ್ಟು ವಾರದ ವರೆಗೆ ದಿನಗಳನ್ನು ತಳ್ಳಲು ಕೆಲವು ಪೆನ್ನಿಗಳನ್ನು ನೀಡಿ ಉಪಕರಿಸಿದನು.

ಆಕೆ ಕೈಮುಗಿದು "ದೇವರು ನಿನಗೆ ಒಳ್ಳೆಯದನ್ನು ಮಾಡಲಿ. ಕ್ರಿಸ್ತನೇ ನನ್ನನ್ನು ನಿನ್ನ ಬಳಿಗೆ ಕಳುಹಿಸಿರಬೇಕು " ಎಂದಳು. ಮಾರ್ಟಿನ್ ಮುಗುಳು ನಗುತ್ತಾ "ಯಾರಿಗೆ ಗೊತ್ತು ತಾಯಿ? ಎಲ್ಲವೂ ಅವನ ದಯೆ" ಎಂದನು.

ಆಕೆ ಮಗುವಿನ ನಿಲುವಂಗಿಯನ್ನು ಹೊದೆಸಿ ಮನೆಯ ಮೆಟ್ಟಲುಗಳನ್ನಿಳಿದು ರಸ್ತೆಯನ್ನು ಸೇರಿ ಮುಂದುವರಿದಳು.

ಮಾರ್ಟಿನ್ ಪುನಃ ಕೆಲಸದಲ್ಲಿ ತೊಡಗಿದನು.

ಕೊಂಚ ಹೊತ್ತಿನಲ್ಲಿ ಹಣ್ಣು ಮಾರುವ ಮುದುಕಿಯೊಬ್ಬಳು ಹಣ್ಣುಗಳನ್ನು ಗಟ್ಟಿಯಾಗಿ ಕೂಗಿ ಹೇಳುತ್ತಾ ಅದೇ ಕಿಟಕಿಯ ಬಳಿ ಬಂದಳು. ತನ್ನ ಕುಕ್ಕೆಯನ್ನು ಬಿಳಿಯ ಕಲ್ಲಿನ ಮೇಲೆ ಇರಿಸಿ ಆಯಾಸವನ್ನು ಪರಿಹರಿಸಲು ಅಲ್ಲೊಂದು ಕಂಬವನ್ನಾತು ನಿಂತಿದ್ದಳು. ಅಷ್ಟರಲ್ಲಿ ತುಂಟ ಹುಡುಗನೊಬ್ಬನು ಆಕೆಯ ಬುಟ್ಟಿಯಿಂದ ಒಂದು ಹಣ್ಣನ್ನು ಕದ್ದು ಓಡತೊಡಗಿದನು. ಮುದುಕಿಯು ಕೂಡಲೇ ಅವನನ್ನು ಹಿಡಿದು ಬೊಬ್ಬಿಡುತ್ತಾ ಬಡಿಯುತ್ತಾಳೆ ಎನ್ನುವಷ್ಟರಲ್ಲಿ ಮಾರ್ಟಿನ್ ಓಡಿಬಂದು "ಅವನು ಹೋಗಲಜ್ಜಿ; ಚಿಕ್ಕವನು; ದೇವರು ನಿನಗೆ ಒಳ್ಳೆಯದನ್ನು ಮಾಡುವನು" ಎಂದನು. ಮುದುಕಿಗೆ ಪಿತ್ತ ನೆತ್ತಿಗೇರಿತು. ಅವಳು ಸಿಟ್ಟಿನಿಂದ "ಬಿಡಬೇಕೇ? ಅವನನ್ನು ಪೋಲೀಸರ ಕೈಗೆ ಕೊಟ್ಟು ಬೆನ್ನಿಗೆ ನಾಲ್ಕು ಬೀಳಿಸದೆ ಬಿಡಲಾರೆ" ಎಂದಳು. ಮಾರ್ಟಿನ್ ಮುದುಕಿಯನ್ನು ಸಮಾಧಾನಗೊಳಿಸುತ್ತಾ ಹುಡುಗನ ಕಡೆಗೆ ನೋಡಿ "ಅಜ್ಜಿಯ ಕ್ಷಮೆ ಕೇಳು, ಇನ್ನೊಮ್ಮೆ ಹೀಗೆ ಮಾಡಬೇಡ" ಎಂದನು. ಹುಡುಗನು ಅಳುತ್ತಾ ಕ್ಷಮೆ ಕೇಳಿದನು. "ಮಾರ್ಟಿನ್ ಹುಡುಗನ ತಲೆಯನ್ನು ನೇವರಿಸುತ್ತಾ, ಕುಕ್ಕೆಯಿಂದ ಹಣ್ಣೊಂದನ್ನು ಎತ್ತಿ "ಅಜ್ಜಿ ಇದರ ಹಣವನ್ನು ನಾನೀಯುತ್ತೇನೆ" ಎಂದನು.

ಮುದುಕಿಯು ಸಿಟ್ಟಿನಿಂದ "ನಿಮ್ಮಂಥವರೇ ಹುಡುಗರನ್ನು ಹಾಳು ಮಾಡುವುದು, ಇವನಿಗೆ ಚಾಟಿಯೇಟು ಬೀಳಬೇಕಿತ್ತು" ಎಂದಳು. ಆಗ ಮಾರ್ಟಿನ್ ಯೇಸು ಕ್ರಿಸ್ತನ ಉದಾರತೆಯನ್ನು ತೋರುವ ಕತೆಯೊಂದನ್ನು ತಿಳಿಸಿದನು. ಮುದುಕಿ ಮಾರ್ಟಿನನ ಮಾತುಗಳನ್ನು ಕೇಳುತ್ತಾ ನಿಂತಿದ್ದಳು. ತಲೆಯನಲ್ಲಾಡಿಸಿ ನಿಟ್ಟುಸಿರೊಂದನ್ನು ಬಿಟ್ಟು, "ಈ ಹುಡುಗರು ಹೀಗೆ ಹಾಳಾಗುತ್ತಾರಲ್ಲಾ!" ಎಂದಳು. ಮಾರ್ಟಿನ್ ಕೂಡಲೇ "ಹಿರಿಯರಾದ ನಾವು ದಾರಿ ತೋರಬೇಕು. ಅವನದು ಕೇವಲ ಮಕ್ಕಳಾಟ. ದೇವರು ಅವನಿಗೆ ಸದ್ಬುದ್ಧಿಯನ್ನು ಕೊಡಲಿ" ಎಂದನು.

ಮೌನವಾಗಿದ್ದ ಮುದುಕಿಯನ್ನು ಮಾತಾಡಿಸಲು ಬೇರೇನೂ ದಾರಿಗಾಣದೆ ಮಾರ್ಟಿನ್ ಆಕೆಯ ಪರಿಚಯವನ್ನು ಕೇಳಿದನು. ಮುದುಕಿ ತನ್ನ ಪರಿಚಯವನ್ನು ಹೇಳುತ್ತಾ ಹೊರಡಲು ಸಿದ್ಧಳಾದಳು. ಆಗ ಆ ಹುಡುಗನು ಹಾರಿಬಂದು "ಅಜ್ಜಿ, ಕುಕ್ಕೆಯನ್ನು ನಾನು ಹೊರುತ್ತೇನೆ. ನಾನು ಹೋಗುವುದೂ ಇದೇ ದಾರಿಯಿಂದ" ಎಂದನು. ಮುದುಕಿಯು ಒಪ್ಪಿದಳು.

ಹುಡುಗನು ಬುಕ್ಕೆಯನ್ನು ಹೊತ್ತುಕೊಂಡನು. ಅವರಿಬ್ಬರೂ ಮುಂದೆ ಸಾಗಿದರು. ಮಾರ್ಟಿನ್ ಅವರನ್ನು ನೋಡುತ್ತಾ ಕೆಲವು ನಿಮಿಷಗಳ ಕಾಲ ಅಲ್ಲೇ ನಿಂತನು. ತನ್ನ ಕಣ್ಣುಗಳಿಂದವರು ಮರೆಯಾದ ಬಳಿಕ ತನ್ನ ಕೋಣೆಗೆ ಬಂದನು.

ಅಷ್ಟರಲ್ಲಿ ಕತ್ತಲಾಗುತ್ತ ಬಂತು. ಮಧ್ಯಾಹ್ನದ ಊಟವನ್ನೂ ಅವನು ಮರೆತಿದ್ದನು. ಈಗ ಜ್ಞಾಪಕಕ್ಕೆ ಬಂತು. "ಏನಿದ್ದರೂ ಇನ್ನೆಲ್ಲ ದೀಪ ಹಚ್ಚಿದ ಬಳಿಕ ಎಂದು ನಿರ್ಧರಿಸಿ ಒಳಗೆ ಬಂದು ದೀಪವುರಿಸಿದನು. ತಾನು ಕೆಲಸ ಮಾಡುವ ಕೋಣೆಯನ್ನು ಚೊಕ್ಕಮಾಡಿ, ಮೇಜಿನ ಬಳಿಬಂದು ಮಯಣದ ಬತ್ತಿಯನ್ನಿರಿಸಿ ಓದಲು ಪವಿತ್ರ ಗ್ರಂಥವನ್ನು ಎತ್ತಿಕೊಂಡನು. ಒಂದೆರಡು ಪುಟಗಳ ಓದು ಮುಗಿಯುತ್ತಿರುವಾಗಲೆ ಯಾರೋ ಹಿಂದಿನಿಂದ ಬಂದಂತಾಯಿತು. ಮಾರ್ಟಿನ್ ಹಿಂತಿರುಗಿ ನೋಡಿದನು. ಮೂಲೆಯಲ್ಲಿ ಕತ್ತಲೆಯಲ್ಲಿ ಆವರಣದಲ್ಲಿ ಒಂದು ಆಕೃತಿ ಸುಳಿಯಿತು. ಆದರೆ ಸ್ಪಷ್ಟವಾಗಲಿಲ್ಲ.

"ಮಾರ್ಟಿನ್, ನನ್ನ ಪರಿಚಯವಾಗಲಿಲ್ಲವೇ" ಎಂದಿತು ಆ ಆಕೃತಿ. "ನೀನು ಯಾರು? ನನಗೆ ನಿನ್ನನ್ನು ಅರಿಯದು" ಎಂದನು ಮಾರ್ಟಿನ್. ಮುಗುಳು ನಗುತ್ತ ಸ್ಟೆಪಾನಿಚ್ ಎದ್ದು ಬಂದು ಮೋಡದಂತೆ ಸರಿದು ಮಾಯವಾದನು.

"ನನ್ನನ್ನು ನೋಡು" ಪುನಃ ಅದೇ ಸ್ಥಳದಿಂದ ಹೆಣ್ಣಿನ ದನಿ. ಮಾರ್ಟಿನ್ ಅತ್ತ ನೋಡಿದಾಗ, ಮಗುವನ್ನೆತ್ತಿಕೊಂಡ ಮಹಿಳೆಯೊಬ್ಬಳು ಕಾಣಿಸಿಕೊಂಡಳು. ಅವಳೂ ನಿಮಿಷದಲ್ಲಿ ಮರೆಯಾದಳು.

ಪುನಃ ಸ್ವರ ಕೇಳಿಸಿತು. ಮಾರ್ಟಿನ್ ನೋಡುತ್ತಿದ್ದಂತೆ – ಮುದುಕಿ ಮತ್ತು ಹಣ್ಣಿನ ಬುಕ್ಕೆಯನ್ನು ತಲೆಯ ಮೇಲಿರಿಸಿಕೊಂಡ ಬಾಲಕ – ಕಾಣಿಸಿದರು. ಅವರೂ ಮಾಯವಾದರು.

ಮಾರ್ಟಿನ್ ಇವೆಲ್ಲವನ್ನೂ ಕಂಡು ಬೆರಗಾದರು. ಅಲ್ಲಿಂದಲೇ ಕ್ರಿಸ್ತನಿಗೆ ಕೈ ಮುಗಿದು ಪುನಃ ಓದತೊಡಗಿದನು. ಪುಟದ ಮೇಲ್ಭಾಗದಲ್ಲಿ ಕಾಣಿಸಿದ ಮಾತು ಮಾರ್ಟಿನನನ್ನು ಸೆಳೆದುವು.

'ನಾನು ಹಸಿದು ಬಳಲಿದ್ದೆ, ನೀನು ಆಹಾರ ನೀಡಿದೆ. ನಾನು ಬಾಯಾರಿಕೆಯಿಂದ ತತ್ತರಿಸಿದ್ದೆ, ನೀನು ನೀರಿತ್ತೆ, ನಾನು ಹೊಸಬನಾಗಿ ನಿನ್ನ ಬಳಿಗೆ ಬಂದೆನು ನೀನು ನನಗೆ ಆಶ್ರಯವಿತ್ತೆ. ಇವನ್ನೆಲ್ಲ ನೀನು ಸೋದರರಲ್ಲಿ ಯಾರಾದರೊಬ್ಬರ ಬಗ್ಗೆ ಮಾಡಿದರೆ ಅವು ನನ್ನನ್ನೇ ಸೇರುವುವು'

ಓದುತ್ತಿದ್ದಂತೆ ಮಾರ್ಟಿನನ ಆತ್ಮಕ್ಕೆ ಸಂತೋಷವಾಯಿತು. ಅವನು ಕುಳಿತಲ್ಲಿಂದ ಎದ್ದು ಗ್ರಂಥವನ್ನು ಕೈಯಲ್ಲಿ ಎತ್ತಿಕೊಂಡು 'ನನ್ನ ಕನಸು ನನಸಾಯಿತು' ಎನ್ನುತ್ತಾ ದೇವರಿಗೆ ತಲೆವಾಗಿದನು.

## ಚಟುವಟಿಕೆಗಳು

### ▫ ಉತ್ತರಿಸಿರಿ

- ಮಾರ್ಟಿನ್ ಅವದೀಚ್‌ನು ಪಟ್ಟಣದ ಜನರೆಲ್ಲರ ವಿಶ್ವಾಸಕ್ಕೆ ಪಾತ್ರನಾಗಿರಲು ಕಾರಣವೇನು?
- ಮಾರ್ಟಿನ್ ಗೆಳೆಯನ ಆಗಮನದಿಂದ ಯಾವ ರೀತಿ ಬದಲಾದನು?
- ಕೆಲಸ ಮಾಡುತ್ತಿದ್ದ ಮಾರ್ಟಿನನ ದೃಷ್ಟಿ ರಾಜರಸ್ತೆಯಲ್ಲಿ ಹೋಗುತ್ತಿದ್ದ ಚಪ್ಪಲಿಗಳ ಮೇಲೆಯೇ ಇತ್ತು. ಏಕೆ?
- ಮಾರ್ಟಿನನು ಹೆಂಗಸು ಮತ್ತು ಮಗುವನ್ನು ಹೇಗೆ ಸತ್ಕರಿಸಿದನು?
- ಮಾರ್ಟಿನ್‌ನ ಕನಸು ನನಸಾದದ್ದು ಹೇಗೆ?

- ಕೆಳಗಿನ ಪಾರಾದಲ್ಲಿ ಅಡಿಗೆರೆ ಎಳೆದ ಪದಗಳ ಬದಲು ಪಾಠದಲ್ಲಿ (ಕನಸು ನನಸಾಯಿತು–ಕತೆಯಲ್ಲಿ)ಬಂದಿರುವ – ಅವುಗಳ ಸಮಾನಾರ್ಥ ಕೊಡುವ ಪದಗಳನ್ನು ಬಳಸಿ ಬರೆಯಿರಿ.

ನಾನು ಚಿಕ್ಕಂದಿನಲ್ಲಿ ಕಂಡ ಕನಸು ನನಗೆ ಈಗ ನೆನಪಾಗುತ್ತಿದೆ. ಅದರ ವಿವರಣೆಯನ್ನು ಹೇಗೆ ಹೇಳಲು ಆರಂಭಿಸುವುದೆಂದು ತಿಳಿಯುವುದಿಲ್ಲ. ಅದೇಕೋ ಅಳುಕು! ಒಂದು ದಿನ ಏಕಾಂಗಿಯಾಗಿ ಓದಿನಲ್ಲಿ ತಲ್ಲೀನನಾಗಿದ್ದೆ. ಹೀಗೆ ಸ್ವಲ್ಪ ಹೊತ್ತು ಓದುತ್ತಿದ್ದ ನನಗೆ ನಿದ್ದೆ ಬಂತು. ನಿದ್ದೆಯಲ್ಲಿ ಅಸ್ಪಷ್ಟ ರೂಪವೊಂದು ಸಮೀಪದಲ್ಲಿ ಕಾಣಿಸಿದಂತಾಯಿತು. "ನಿನ್ನ ಪರೀಕ್ಷೆ ಅತೀ ಸುಲಭವಾಗಿರುತ್ತದೆ. ದನಿಯೊಂದು ಕೇಳಿಸಿತು". ಮರುಕ್ಷಣವೇ ಆ ಆಕೃತಿ ಅಲ್ಲಿಂದ ಕಾಣದಾಯಿತು. ಮರುದಿನ ಎದ್ದ ನಾನು ಏನೋ ಉಲ್ಲಾಸದಿಂದಿದ್ದೆ. ನೂರಕ್ಕೆ ನೂರು ಮಾರ್ಕು ತೆಗೆಯುವ ಆಸೆ ನನ್ನಲ್ಲಿ ಮೊಳಕೆಯೊಡೆಯಿತು.

## ▫ ನಾಮರೂಪಗಳನ್ನು ಬರೆಯಿರಿ

- ಕೆಳಗಿನ ವಾಕ್ಯಗಳ ಬಿಟ್ಟ ಸ್ಥಳಗಳಲ್ಲಿ ಕೋಣೆಯಲ್ಲಿರುವ ಕ್ರಿಯಾ ಪದಗಳ ನಾಮರೂಪಗಳನ್ನು ಬರೆಯಿರಿ.

ಉಣ್ಣು, ಅರಿಯು, ಆಮಂತ್ರಿಸು, ಪ್ರಾರ್ಥಿಸು, ಹೊಲಿಯು, ಒಪ್ಪು, ಕರುಣಿಸು, ಚಡಪಡಿಸು ಯೋಚಿಸು.

- ಮದುವೆ ಕಾರ್ಯಕ್ರಮಕ್ಕೆ ಬಂಧುಗಳಿಗೆ ..................... ನೀಡಿದೆನು.
- ಮದುವೆ ಕಾರ್ಯಕ್ರಮವನ್ನು ಸುಸೂತ್ರವಾಗಿ ನಡೆಸುವುದರ ಬಗ್ಗೆ .................... ಮಾಡಿದೆನು.
- ಕಾರ್ಯಕ್ರಮದಂದು ಉಡಲು ಬೇಕಾದ ಉಡುಪುಗಳಿಗಾಗಿ ದರ್ಜಿಯು ಬಟ್ಟೆಯನ್ನು ಕತ್ತರಿಸಿ ........... ಹಾಕಿ ಅಂದದ ಉಡುಪು ತಯಾರಿಸಿದನು.
- ಮನೆಗೆ ಬಂದ ಅತಿಥಿಯ ............... ಮಾಡಿ ನಿದ್ದೆ ಮಾಡಿದನು.
- ಕಾರ್ಯಕ್ರಮದ ಯಶಸ್ಸಿಗೆ ದೇವರ ............ ಎಂದು ಭಾವಿಸುತ್ತೇವೆ.
- ಪುರೋಹಿತರು ಕಾರ್ಯಕ್ರಮ ನೆರವೇರಿಸಲು .............. ನೀಡಿದರು.
- ಬಣ್ಣ ಬಣ್ಣದ ಬಲೂನುಗಳ .................... ಕ್ಕೆ ಒಳಗಾದ ಮಗು ಬಲೂನು ಬೇಕೆಂದು ಹಟಹಿಡಿಯಿತು.
- ಮದುವೆಯು ಮಂಗಳಕರವಾಗಿ ನಡೆಯುವಂತೆ ದೇವರಿಗೆ ...................... ಸಲ್ಲಿಸಿದೆನು.
- ಮದುವೆ ಕಾರ್ಯಕ್ರಮ ನಡೆಸುವುದರ ಕುರಿತಾದ ................... ನನಗೆ ಇಲ್ಲದಿರುವುದೇ ದೊಡ್ಡ ಸಮಸ್ಯೆಯಾಗಿದೆ.

## ▫ ಅನುಭವ ಕಥನ

- ಮಾರ್ಟಿನ್ ಅಸಹಾಯಕರಿಗೆ ಸಹಾಯ ಮಾಡಿದ ಹಾಗೆಯೇ ನೀವೂ ಸಹಾಯ ಮಾಡಿರಬಹುದು ಅಥವಾ ಸಹಾಯ ಪಡೆದಿರಬಹುದು. ಅಂತಹ ಸಂದರ್ಭವನ್ನು ಕತೆಯ ರೂಪದಲ್ಲಿ ಬರೆಯಿರಿ.

## ▫ ಸಂದೇಶ ಬರೆಯಿರಿ

- ಕನಸು ನನಸಾಯಿತು ಕಥೆಯು ನೀಡುವ ಸಂದೇಶವೇನು? ನಿಮ್ಮದೇ ಮಾತುಗಳಲ್ಲಿ ಬರೆಯಿರಿ.

## ▫ ವಾಕ್ಯ ರಚಿಸಿರಿ

- ಕೆಳಗಿನ ಪ್ರತಿಯೊಂದು ಕೋಣೆಗಳಲ್ಲಿರುವ ಅಕ್ಷರಗಳನ್ನು ಕ್ರಮಿಕರಿಸಿ ಬರೆಯಿರಿ. ಅವುಗಳಲ್ಲಿ ವೃತ್ತದೊಳಗೆ ಬರುವ ಅಕ್ಷರಗಳನ್ನು ಬಳಸಿ ಅರ್ಥಪೂರ್ಣ ವಾಕ್ಯವೊಂದನ್ನು ರಚಿಸಿರಿ.

| ಸಾ | ನಿ | ರ್ವ | ಜ | ಕ |
|---|---|---|---|---|
| ○ | | | | |

| ಪ | ಡ | ಸು | ಚ | ಡಿ |
|---|---|---|---|---|
| | | ○ | | |

| ನ | ಮಾಂ | ಚ | ರೋ |
|---|---|---|---|
| ○ | | | |

| ಯಂ | ಕ | ಪ | ತ್ರೋ | ರ | ಣ |
|---|---|---|---|---|---|
| | ○ | | | | |

| ಹಾ | ಯಿ | ಮ | ತಾ |
|---|---|---|---|
| | ○ | | |

| ವ | ತು | ರ್ಜ | ಮು |
|---|---|---|---|
| | ○ | | |

| ತ | ಮ | ನೆ | ನ |
|---|---|---|---|
| | | | ○ |

| ನ | ಮಾ | ವ | ಜೀ |
|---|---|---|---|
| ○ | | | |

| ಪ್ರಾ | ಶ | ಅ | ಸ್ನ | ನ |
|---|---|---|---|---|
| | | | ○ | ○ |

## ಕಲಿಕಾ ಸಾಧನೆಗಳು

- ಕಥೆ, ಕವಿತೆಗಳನ್ನು ಸೂಕ್ತವಾದ ಭಾವಾಭಿವ್ಯಕ್ತಿಯೊಂದಿಗೆ ಮಂಡಿಸುವುದು.
- ಕಥೆ, ಕವಿತೆ, ನಾಟಕ ಮೊದಲಾದ ಸೃಜನಾತ್ಮಕ ರಚನೆಗಳ ರಚನಾ ರೀತಿ, ಔಚಿತ್ಯ, ವೈವಿಧ್ಯ ಮೊದಲಾದವುಗಳನ್ನು ಪರಿಗಣಿಸಿಕೊಂಡು ಸ್ವಂತ ದೃಷ್ಟಿಕೋನಕ್ಕನುಸಾರವಾಗಿ ಆಸ್ವಾದಿಸಿ, ವಾಚಿಕವಾಗಿ ಮಂಡಿಸುವುದು ಮತ್ತು ಬರೆದು ಮಂಡಿಸುವುದು.
- ಕಥಾಪಾತ್ರಗಳ ಮಾನಸಿಕ ಸ್ಥಿತಿ, ಕತೆ/ಕವಿತೆಗಳಲ್ಲಿ ಅವುಗಳಿಗಿರುವ ಸ್ಥಾನ ಎಂಬಿವುಗಳನ್ನು ಕಂಡುಕೊಂಡು, ವಾಚಿಕವಾಗಿಯೂ ಲಿಖಿತರೂಪದಲ್ಲೂ 'ಪಾತ್ರಚಿತ್ರಣ' ಮಾಡುವುದು.
- ಓದಿದ ಸೃಜನಾತ್ಮಕ ರಚನೆಗಳನ್ನು ವಿಭಿನ್ನ ಮತ್ತು ಸೂಕ್ತ ರೀತಿಯಲ್ಲಿ ಪುನರಾವಿಷ್ಕರಿಸುವುದು.
- ಜನಪದ ಗೀತೆ, ಕವಿತೆಗಳಲ್ಲಿರುವ ತಾಳವೈವಿಧ್ಯಗಳನ್ನು ಗುರುತಿಸಿ, ಕಂಠಪಾಠಮಾಡಿ ಸೂಕ್ತ ತಾಳದೊಂದಿಗೆ ಹಾಡುವುದು.
- ವಿಷಯ ಮತ್ತು ಸಂದರ್ಭಕ್ಕೆ ಸೂಕ್ತವಾದ ಪದಗಳು, ಪ್ರಯೋಗಗಳು, ಶೈಲಿಗಳು ಎಂಬಿತ್ಯಾದಿಗಳನ್ನು ಸಂಭಾಷಣೆಯಲ್ಲಿ ಮತ್ತು ಬರವಣಿಗೆಯಲ್ಲಿ ಅಳವಡಿಸುವುದು.
- ಪದ ಶುದ್ಧಿ, ವಾಕ್ಯ ಶುದ್ಧಿ, ಲೇಖನ ಚಿಹ್ನೆ, ಪಾರಾ ಮೊದಲಾದ ಭಾಷಾ ನಿಯಮಗಳನ್ನು ಪಾಲಿಸಿಕೊಂಡು ರಚನೆಗಳನ್ನು ಉತ್ತಮಪಡಿಸುವುದು.
- ಪಾಠಭಾಗದಲ್ಲಿ ಬರುವ ಪದಗಳ ಅರ್ಥ ವ್ಯತ್ಯಾಸವಾಗದಂತೆ ಅವುಗಳನ್ನು ವಿಂಗಡಿಸಿ ಮತ್ತು ಜೋಡಿಸಿ ಬರೆಯುವ ಚಟುವಟಿಕೆಗಳನ್ನು ಮಾಡುವುದು.

# 6. ನಾಡು – ನುಡಿ

ನಮ್ಮ ಸಂಸ್ಕೃತಿ, ಪರಂಪರೆಯು ನಿತ್ಯನೂತನ. ಜಗತ್ತಿಗೇ ಮಾದರಿ. ಆಚಾರ – ವಿಚಾರ – ಅಭಿರುಚಿಗಳು ವಿಭಿನ್ನವಾದರೂ ವಿವಿಧತೆಯಲ್ಲಿ ಏಕತೆಯನ್ನು ಸಾರಿಹೇಳುವ ದೇಶ ನಮ್ಮದು. ಭವ್ಯ ಪರಂಪರೆಯನ್ನು ಪರಿಚಯಿಸುವ ಸಾಹಿತ್ಯ ಕೃತಿಗಳು ನಮಗೆ ದಾರಿದೀಪವಾಗಿವೆ. ಪುರಾತನ ಕಾವ್ಯಗಳಲ್ಲಿ ಉಲ್ಲೇಖಿಸಿದ ಅನೇಕ ವಿಚಾರಗಳು ಇಂದಿಗೂ ಮಾರ್ಗದರ್ಶಕವಾಗಿವೆ. ಇದರಂತೆಯೇ ಆಧುನಿಕ ಸಾಹಿತ್ಯ ಕೃತಿಗಳು ನಮಗೆ ಪೂರಕ ವಿಚಾರಗಳ ಕೈಗನ್ನಡಿಯಾಗಿವೆ. ಇಂತಹ ಅನೇಕ ಸಾಹಿತ್ಯ ರಚನೆಗಳನ್ನು ಕೊಡುಗೆಯಾಗಿ ನೀಡಿದ ನಮ್ಮ ನಾಡಿನ ಮಹಾನುಭಾವರ ಕುರಿತು ನಾವು ತಿಳಿದುಕೊಂಡು ಗೌರವಿಸುವುದು ನಮ್ಮ ಕರ್ತವ್ಯ.



# ದಾನವನ ಭೋಜನಕೆ ತಾಯ್ಕೊಟ್ಟಳು ಮಗನ

'ಪರೋಪಕಾರವೇ ಪರಮಧರ್ಮ; ಸಮಾಜದ ಒಳಿತೇ ನಮ್ಮ ಒಳಿತು' ಮೊದಲಾದ ಮಾತುಗಳು ಕೇವಲ 'ಮಾತು'ಗಳಾಗಿ ಉಳಿಯಬಾರದು. ಸಮಾಜಬಾಹಿರ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಮಾಜದ ಏಳಿಗೆಗೆ ತೊಡಕಾಗುವ ದುಷ್ಟಶಕ್ತಿಗಳ ನಾಶಕ್ಕೆ ಈ ಮಾತುಗಳು ಸ್ಫೂರ್ತಿಯಾಗಬೇಕು.

ಕಥಾ ಸಂದರ್ಭ :

ಪಾಂಡವರು ತಾಯಿ ಕುಂತಿಯ ಜೊತೆಯಲ್ಲಿ ಅರಗಿನ ಮನೆಯಿಂದ ಪಾರಾಗಿ ಅರಣ್ಯದಲ್ಲಿ ಸಂಚರಿಸುತ್ತಾರೆ. ಅವರ ಸಲಹೆಯಂತೆ ಏಕಚಕ್ರ ನಗರಕ್ಕೆ ಪ್ರಯಾಣ ಬೆಳೆಸುತ್ತಾರೆ. ಅಲ್ಲಿ ಬ್ರಾಹ್ಮಣವೇಷಧಾರಿಗಳಾಗಿ ಬ್ರಾಹ್ಮಣ ನೊಬ್ಬನ ಮನೆಯಲ್ಲಿ ವಾಸ ಮಾಡುತ್ತಾರೆ. ಭಿಕ್ಷಾಟನೆ ಮಾಡಿ ತಂದ ಆಹಾರವನ್ನು ತಾಯಿಯ ಕೈಗೆ ಕೊಡುತ್ತಾರೆ. ಆಕೆಯ ಅದನ್ನು ಎರಡು ಪಾಲು ಮಾಡಿ ಒಂದನ್ನು ಭೀಮನಿಗೆ ಕೊಟ್ಟು ಇನ್ನೊಂದನ್ನು ನಾಲ್ಕು ಮಕ್ಕಳಿಗೆ ಹಂಚಿಕೊಟ್ಟು ತಾನೂ ಸ್ವಲ್ಪ ತಿನ್ನುತ್ತಾಳೆ.

ಹೀಗಿರಲು ಒಂದು ದಿನ ಪಕ್ಕದ ಮನೆಯಿಂದ ಗೋಳಾಟ ಕೇಳಿಸುತ್ತದೆ. ಅದರ ಕಾರಣವನ್ನು ತಿಳಿಯಲು ಕುಂತಿ ಅಲ್ಲಿಗೆ ಹೋದಾಗ ಮನೆಯ ಯಜಮಾನನು ವಿಚಾರವನ್ನು ತಿಳಿಸುತ್ತಾನೆ. "ಈ ಅಗ್ರಹಾರದ ಸಮೀಪ ದುಷ್ಟನಾದ ಬಕಾಸುರನೆಂಬ ರಾಕ್ಷಸನಿದ್ದಾನೆ. ಅವನ ಹಾವಳಿ ತಪ್ಪಿಸುವುದಕ್ಕಾಗಿ ಈ ಊರಿನ ಎಲ್ಲ ಮನೆಯವರು ಸರದಿಯಂತೆ ಒಂದು ಬಂಡಿ ಅನ್ನ, ಅದಕ್ಕೆ ಕಟ್ಟಿದ ಕೋಣಗಳು ಮತ್ತು ಬಂಡಿ ಹೊಡೆದುಕೊಂಡು ಹೋಗುವವನನ್ನು ಆಹಾರವಾಗಿ ಕೊಡಬೇಕು. ನಾಳೆ ನಮ್ಮ ಸರದಿ." ಎಂದನು ಆಗ ಕುಂತಿಯು ಅವನನ್ನು ಸಮಾಧಾನಪಡಿಸಿ ತನ್ನ ಮಗನನ್ನು ಕಳುಹಿಸುವುದಾಗಿ ತಿಳಿಸುತ್ತಾಳೆ. ಭೀಮನು ಸಂತೋಷದಿಂದ ಬಂಡಿ ಅನ್ನದೊಂದಿಗೆ ಹೊರಡುತ್ತಾನೆ. ಆಗ ಊರ ಜನರೆಲ್ಲಾ ಬೆರಗಿನಿಂದ ನೋಡುತ್ತಾರೆ....)





ಪುರದೊಳಗೆ ಭಿಕ್ಷಾನ್ನದಿಂದೈ
ವರು ಮಹಾಪಂಡಿತರು ನಿರ್ಧನ
ಪುರುಷರವರೊಳಗೊಬ್ಬನನು ನಮ್ಮೂರ ದಾನವನ ।
ಪರಿವಿಡಿಯ ಭೋಜನಕೆ ತದ್ಭೂ
ಸುರನ ತಾಯ್ಕೊಟ್ಟಳು ಗಡೇನ
ಚ್ಚರಿಯೆನುತ ಪವನಜನ ಮುತ್ತಿತು ನೋಟಕರ ನೆರವಿ ॥೧॥
ಪೌರಜನವೈತರಲು ಬಂಡಿಯ
ನೂರ ಹೊರವಂಡಿಸಿದನೆಲ್ಲರು
ದೂರದಲ್ಲಿರಿ ಸಾವವನೆ ತಾ ಸಾಕು ದೈತ್ಯನಲಿ ।
ಸಾರಿ ನೀವೆಂದೆನುತ ಹೂಡಿದ
ಹೋರಿಗಳ ಹೊಯ್ದುಬ್ಬರಿಸಿ ರಣ
ಧೀರ ಮಾರುತಿ ಮಿಕ್ಕು ಹರಿಸಿದನಸುರನಿದ್ದೆಡೆಗೆ ॥೨॥
ಎಡೆಯಲೇ ಭಕ್ಷ್ಯಾದಿಗಳ ಬರಿ
ಹೆಡಗೆಯುಳಿದವು ಕೂಳೊಳರ್ಧವ
ಹೊಡೆದು ಸುರಿದನು ಹಾಲುತುಪ್ಪದ ಹರವಿಯೋಜೆಯಲಿ ।
ಕುಡಿದು ಪಕ್ಕಲೆ ನೀರನೊಯ್ಯನೆ
ನಡೆಸಿ ತಂದನು ಕಂಡು ದನುಜನ
ನುಡಿದನೆಲವೋ ಕುನ್ನಿ ಕೂಳಿದೆ ತಿನ್ನು ಬಾರೆನುತ ॥೩॥
ಎರಡು ಕೈಯನು ಬಲಿದು ಮುಷ್ಟಿಯೊ
ಳೆರಗಿದನು ಖಳ ಬೆನ್ನನೇನೆಂ
ದರಿಯನಿತ್ತಲು ಭೀಮ ಬಲುದುತ್ತುಗಳ ತೋಟಿಯಲಿ ।
ಮರನ ಮುರಿದೆರಗಿದರೆ ಪುನರಪಿ
ಮುರಿದು ನೋಡಿದು ಬಹೆನು ನಿಲ್ಲೆನು
ತರೆಗೆಲಸ ಪೂರೈಸಲೆಂದನು ನಗುತ ಕಲಿಭೀಮ ॥೪॥

ಹಿಡಿದರೊಬ್ಬರನೊಬ್ಬರುರದಲಿ
ಹೊಡೆದು ಹಿಂಗಿದರುಲಿದು ಹೆಮ್ಮರ
ನುಡಿಯೆ ಹೊಯ್ದಾಡಿದರು ತಿವಿದರು ತೋಳು ಬಲುಹಿನಲಿ ।
ಕೊಡಹಿದನು ಕಲಿಭೀಮನವನು
ಗ್ಗಡದ ಸತ್ವದಿಯುಂಡ ಕೂಳಿನ
ಕಡುಹ ತೋರೆಂದೊರಲಿ ತುಡುಕಿದನನಿಲನಂದನನ ॥೫॥

ಸಿಕ್ಕಿದನು ಕಲಿಭೀಮನೆನೆ ಕೈ
ಯಿಕ್ಕಿ ಕೊಟ್ಟನು ಮೈಯನಸುರನ
ಹೊಕ್ಕು ತಿವಿದನು ತಿರುಗಿ ಬದಿಯೆಲು ನುಗ್ಗಿ ನುಸಿಯಾಗೆ ।
ಬಿಕ್ಕುಳಿಯ ತಾಳಿಗೆಯ ಮೂಗಿನೊ
ಳೊಕ್ಕು ರುಧಿರದ ಧಾರೆ ಬಿಗಿದುರೆ
ಡೊಕ್ಕರಿಸಲಸು ನೀಗಿತಸುರನ ತನುವ ನಿಮಿಷದಲಿ ॥೬॥

ಗದುಗಿನ ನಾರಣಪ್ಪ

## ಗದುಗಿನ ನಾರಣಪ್ಪ

ಕರ್ನಾಟಕದ ರಾಜ್ಯದ ಈಗಿನ ಗದಗ ಜಿಲ್ಲೆಯ ಗದಗ ತಾಲ್ಲೂಕಿನಲ್ಲಿ ಕೋಳಿವಾಡ ಎಂಬುದು ಒಂದು ಊರು . ಅಲ್ಲಿ ಹದಿನೈದನೆಯ ಶತಮಾನದಲ್ಲಿ ಬಾಳಿದವನು ಗದುಗಿನ ನಾರಣಪ್ಪ. ಈತನು ಗದುಗಿನ ವೀರನಾರಾಯಣ ದೇವರ ಪರಮ ಭಕ್ತನಾಗಿದ್ದನು. ಸಂಸ್ಕೃತದಲ್ಲಿ ವೇದವ್ಯಾಸನು ರಚಿಸಿದ ಮಹಾಭಾರತದ ಮೊದಲ ಹತ್ತು ಪರ್ವಗಳ ಕಥೆಯನ್ನು ಆಯ್ದುಕೊಂಡು ಇವನು ಕನ್ನಡದಲ್ಲಿ ಮಹಾಕಾವ್ಯವನ್ನು ರಚಿಸಿದನು. ಭಾಮಿನೀ ಷಟ್ಪದಿಯಲ್ಲಿರುವ ಆ ಕೃತಿಗೆ 'ಕರ್ಣಾಟ ಭಾರತ ಕಥಾ ಮಂಜರಿ' ಎಂದು ಹೆಸರಿಟ್ಟಿದ್ದಾನೆ. ಅದರಲ್ಲಿ ನಾರಣಪ್ಪನು ತನ್ನನ್ನು 'ಕುಮಾರವ್ಯಾಸ'ಎಂದು ಕರೆದುಕೊಂಡಿದ್ದಾನೆ. ಆದುದರಿಂದ ಅದಕ್ಕೆ 'ಕುಮಾರ ವ್ಯಾಸ ಭಾರತ' ಎಂದೂ ಹೆಸರಿದೆ. 'ಗದುಗಿನ ಭಾರತ' ಎಂದೂ ಕರೆಯಲಾಗುವ 'ಕರ್ಣಾಟ ಭಾರತ ಕಥಾ ಮಂಜರಿ'ಯ ಆದಿ ಪರ್ವದ ಹತ್ತನೇ ಸಂಧಿಯಿಂದ ಈ ಭಾಗವನ್ನು ಆಯ್ದುಕೊಳ್ಳಲಾಗಿದೆ.

## ಚಟುವಟಿಕೆಗಳು

### ▫ ಆಯ್ದು ಬರೆಯಿರಿ

ಕೆಳಗೆ ಕೊಡಲಾದ ಆಶಯಕ್ಕೆ ಸಮಾನವಾದ ಭಾಗವನ್ನು ಕಾವ್ಯದಿಂದ ಆಯ್ದು ಬರೆಯಿರಿ.

- ಭೀಮನೂ ಬಕಾಸುರನೂ ಒಬ್ಬರನೊಬ್ಬರು ಹಿಡಿದುಕೊಂಡು ಎದೆಗೆ ಗುದ್ದಿ ಹಿಂದಕ್ಕೆ ಸರಿದರು. ಬೊಬ್ಬಿಡುತ್ತಾ ಮರಗಳನ್ನು ಕಿತ್ತು ಅವು ಮುರಿಯುವ ವರೆಗೆ ತಮ್ಮ ತೋಳಶಕ್ತಿಯಿಂದ ಕಾದಾಡಿದರು.
- "ನೀವೆಲ್ಲರೂ ದೂರ ಸರಿಯಿರಿ" ಎನ್ನುತ್ತಾ ಪರಾಕ್ರಮಿಯೂ ವಾಯುವಿನ ಮಗನೂ ಆದ ಭೀಮನು ಎತ್ತುಗಳಿಗೆ ಹೊಡೆದನು. ಸಂಭ್ರಮದಿಂದ ಬಂಡಿಯನ್ನು ರಾಕ್ಷಸನಿದ್ದ ಕಡೆಗೆ ನಡೆಸಿದನು.
- ರಾಕ್ಷಸನಾದ ಬಕನು ತನ್ನ ಎರಡೂ ಕೈಗಳನ್ನು ಮುಷ್ಟಿ ಹಿಡಿದು ಭೀಮನ ಬೆನ್ನಿಗೆ ಗುದ್ದಿದನು. ಆದರೆ ಊಟ ಮಾಡುವ ಭರದಲ್ಲಿದ್ದ ಭೀಮನಿಗೆ ಅದು ಗೊತ್ತಾಗಲೇ ಇಲ್ಲ.

- ಭೀಮನು ದಾರಿಯ ಮಧ್ಯದಲ್ಲಿಯೇ ಹೆಡಗೆಗಳಲ್ಲಿದ್ದ ಭಕ್ಷ್ಯಾದಿಗಳನ್ನು ತಿಂದು ಮುಗಿಸಿದನು. ಸಾಲಾಗಿ ಇರಿಸಿದ್ದ ಕೊಡಗಳಿಂದ ಹಾಲು ಮತ್ತು ತುಪ್ಪವನ್ನು ಸುರಿದುಕೊಂಡು ಬಂಡಿಯಲ್ಲಿದ್ದ ಅನ್ನದ ಅರ್ಧದಷ್ಟನ್ನು ತಿಂದನು.

### ▫ ಪದಗಳನ್ನು ವಿಂಗಡಿಸಿ ಬರೆಯಿರಿ

- ಪುರುಷರವರೊಳಗೊಬ್ಬನನು – ಪುರುಷರು + ಅವರೊಳಗೆ + ಒಬ್ಬನನು
- ಹರಿಸಿದನಸುರನಿದ್ದೆಡೆಗೆ –
- ಬೆನ್ನನೇನೆಂದರಿಯನಿತ್ತಲ –
- ಕಲಿಭೀಮನವನುಗ್ಗಡದ –
- ಬಲುದುತ್ತುಗಳ –
- ನಿಲ್ಲೆನುತರೆಗೆಲಸ –

▫ ಕೆಳಗಿನ ಪಟ್ಟಿಯನ್ನು ಗಮನಿಸಿರಿ.

| ವಿಂಗಡಣೆ | ಸಂಧಿ | ಬದಲಾವಣೆ |
|---|---|---|
| ಮಳೆ + ಕಾಲ | ಮಳೆಗಾಲ | ಕ ..... ಗ |
| ಮೈ + ತೊಳೆ | ಮೈದೊಳೆ | ತ ...... ದ |
| ಕಣ್ + ಪನಿ | ಕಂಬನಿ | ಪ ...... ಬ |

ಇಲ್ಲಿ ಪದಗಳು ಸಂಧಿಯಾಗುವಾಗ 'ಕ' ಕಾರದ ಜಾಗದಲ್ಲಿ 'ಗ' ಕಾರ ಬಂದಿದೆ 'ತ' ಕಾರದ ಜಾಗದಲ್ಲಿ 'ದ'ಕಾರ ಬಂದಿದೆ. 'ಪ' ಕಾರದ ಜಾಗದಲ್ಲಿ 'ಬ'ಕಾರ ಬಂದಿದೆ. ಹೀಗೆ ಒಂದು ಅಕ್ಷರದ ಜಾಗದಲ್ಲಿ ಮತ್ತೊಂದು ಅಕ್ಷರ ಬರುವ ರೀತಿಗೆ 'ಆದೇಶ ಸಂಧಿ' ಎನ್ನುತ್ತಾರೆ.

### ▫ ಪ್ರಶ್ನೆ ತಯಾರಿಸಿರಿ

ಕೆಳಗೆ ಕೊಡಲಾದ ಗದ್ಯಭಾಗವು ಉತ್ತರವಾಗಿ ಬರುವಂತೆ ಸೂಕ್ತವಾದ ಪ್ರಶ್ನೆಗಳನ್ನು ತಯಾರಿಸಿರಿ.

- ಭೀಮನು ರಾಕ್ಷಸನಿಗೆ ಸುಲಭದಲ್ಲಿ ಸಿಕ್ಕುವವನಂತೆ ಕೈಕೆಳಗೆ ಮಾಡಿ ಮೈಯನ್ನು ಕೊಟ್ಟನು. ಆದರೆ ಥಕ್ಕನೆ ವೇಗವಾಗಿ ನುಗ್ಗಿದನು. ಅವನ ಪಕ್ಕೆಲುಬುಗಳೇ ಪುಡಿಪುಡಿಯಾಗುವಂತೆ ತಿವಿದನು.
- "ನಮ್ಮ ಊರಿನಲ್ಲಿ ಐದು ಮಂದಿ ಕಡುಬಡವರಾದ ಮಹಾಪಂಡಿತರಿದ್ದಾರಂತೆ. ಅವರಲ್ಲಿ ಒಬ್ಬನನ್ನು ಈದಿನ ಸರದಿಯಲ್ಲಿ ರಾಕ್ಷಸನಿಗೆ ಆಹಾರವಾಗುವಂತೆ ತಾಯಿ ಕೊಟ್ಟಳಂತೆ. ಇದೇನಾಶ್ಚರ್ಯ!" ಎನ್ನುತ್ತ ಏಕಚಕ್ರ ನಗರದ ಜನಸಮೂಹ ನೋಡುತ್ತಾ ನಿಂತಿತು.
- ಕೊಪ್ಪರಿಗೆಯಲ್ಲಿದ್ದ ನೀರನ್ನು ಎತ್ತಿ ಕುಡಿದ ಭೀಮನು ಬಂಡಿಯನ್ನು ವೇಗವಾಗಿ ನಡೆಸಿಕೊಂಡು ಬಂದನು. ರಾಕ್ಷಸನ ಬಳಿಯಲ್ಲಿ ನಿಂತುಕೊಂಡು "ಎಲವೋ ಕುನ್ನಿ, ಕೂಳು ಈ ಬಂಡಿಯಲ್ಲಿದೆ ತಿನ್ನು ಬಾ" ಎಂದು ಕರೆದನು.
- ಭೀಮನು ಬಲವಾಗಿ ತಿವಿದಾಗ ಬಕಾಸುರನ ಗಂಟಲಿನಲ್ಲಿ ಬಿಕ್ಕಳಿಗೆ ಆರಂಭವಾಯಿತು. ಮೂಗಿನಲ್ಲಿ ರಕ್ತದ ಧಾರೆ ಹರಿಯಿತು. ಅವನ ಪ್ರಾಣ ಪಕ್ಷಿಯು ಅವನನ್ನು ಬಿಟ್ಟು ಹಾರಿಹೋಯಿತು.

### ▫ ಉತ್ತರ ಬರೆಯಿರಿ

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.

- ಭೀಮನು ಬಂಡಿಯನ್ನು ಪುರದಿಂದ ಹೊರಕ್ಕೆ ನಡೆಸುವ ಮೊದಲು ನಡೆದ ಘಟನೆಗಳೇನು?
- ಭೀಮನು ಬಕಾಸುರನೊಂದಿಗೆ ಹೇಗೆ ಹೋರಾಡಿದನು?
- ಪುರದಿಂದ ಹೊರಟ ಭೀಮನು ಏನೇನು ಮಾಡಿದನು?

### ▫ ಪಾತ್ರಚಿತ್ರಣ ಮಾಡಿರಿ

- ಬಂಡಿ ಅನ್ನದೊಂದಿಗೆ ಬಂದು ಭೀಮನು ಬಕಾಸುರನನ್ನು ಕೊಂದ ಪರಾಕ್ರಮಿಯಲ್ಲವೇ? ಅವನ ಪಾತ್ರ ಈ ಕಾವ್ಯಭಾಗದಲ್ಲಿ ಹೇಗೆ ಮೂಡಿಬಂದಿದೆ ಎಂದು ಅವಲೋಕಿಸಿ ಅವನ ಪಾತ್ರ ಚಿತ್ರಣ ಮಾಡಿರಿ.

### ▫ ವಾಚನ ಮಾಡಿರಿ

- ಈ ಕಾವ್ಯಭಾಗವನ್ನು ಸಹಪಾಠಿಗಳೊಂದಿಗೆ ವಾಚನ – ವ್ಯಾಖ್ಯಾನ ಮಾಡಿರಿ.

### ▫ ವರ್ಣಿಸಿರಿ

- ಕಾವ್ಯಭಾಗದಲ್ಲಿ ಬಂದಿರುವ ಬಕಾಸುರನ ಪಾತ್ರವನ್ನು ಊಹಿಸಿ ವರ್ಣಿಸಿರಿ.

# ಮರದ ಮಾಯಿ ಮಹಾ ತಾಯಿ

'ಈ ಇಳೆಯಲ್ಲಿ ಎಲ್ಲರೂ ಒಂದೇ'. ಇಲ್ಲಿ ಭೇದಭಾವ ಸಲ್ಲದು. ಆದರೆ ದೀನ–ದಲಿತರ ಮೇಲಿನ ಬಲ್ಲಿದರ ಸವಾರಿ ಅನಾದಿಕಾಲದಿಂದಲೇ ಮುಂದುವರಿಯುತ್ತಿರುವ ಒಂದು 'ಅಂಟುಜಾಡ್ಯ' ಇದರಿಂದ ಪ್ರಪಂಚವು ಮುಕ್ತವಾಗಬೇಕು.

ಒಂದಾನೊಂದು ಕಾಲದಲ್ಲಿ ಒಂದಾನೊಂದು ಹಳ್ಳಿಯ ಕೊನೇ ಓಣಿಯ ಕೊನೇ ಮನೆಯಲ್ಲಿ ಬಡ ತಾಯಿ, ಮಗ ಇದ್ದರು. ಬಡತನ ಅಂದರೆ ಅಷ್ಟಿಷ್ಟಲ್ಲ. ಸಾಲದ್ದಕ್ಕೆ ತಾಯಿ ಜಡ್ಡಾಗಿ ಮಲಗಿದ್ದಳು. ಮಗ ಬಲರಾಮನಿಗೆ ಏನು ಮಾಡಬೇಕೆಂದು ದಿಕ್ಕೇ ತೋಚದಾಯ್ತು. ದುಡಿದೇನೆಂದರೆ ಇದ್ದೊಂದು ಎಕರೆ ಹೊಲವನ್ನೂ ಸಾವ್ಕಾರನಲ್ಲಿ ಅಡವಿಟ್ಟು ಸಾಲ ತಂದಿದ್ದ. ಕೂಲಿಯ ಮಾಡೇನೆಂದರೆ ಊರಿನಲ್ಲಿ ಕೆಲಸ ಕೊಡಬಲ್ಲ ಸಾವ್ಕಾರ ಒಬ್ಬನೇ. ಅವನೋ ಜಿಪುಣ ಮತ್ತು ದುಡ್ಡಿಗೆ ದುಡ್ಡಿಡುವ ಬಡ್ಡಿಯವ. ತಾಯಿಯ ಜಡ್ಡಿಗೆ ಮದ್ದಿರಲಿ, ಅವಳಿಗೊಂದು ತುತ್ತು ಗಂಜಿಗೂ ಗತಿಯಿಲ್ಲದಾಗಿತ್ತು. ಕಡ ತರೋಣವೆಂದರೆ ಸಾವ್ಕಾರನಿಂದ ಕಡ ತಂದು ಹಿಂದಿರುಗಿಸಿರಲಿಲ್ಲವಾಗಿ ಅವನು ಪುನಃ ಕೊಡುವುದು. ಅನುಮಾನವೇ ಬೇರೆ ಉಪಾಯವೇ ಇಲ್ಲ. ಹೀಗೆಂದು ಚಿಂತಿಸುತ್ತ ಪ್ರಯತ್ನಿಸೋಣವೆಂದು ಎದ್ದ.

ತಾಯಿ : ಎಷ್ಟೂಂತ ಕೊಟ್ಟಾನು? ಹಿಂದೆ ಕೊಟ್ಟದ್ದನ್ನ ನಾವು ಹಿಂದಿರುಗಿಸಿದ್ದರಲ್ಲವೆ?

ಬಲರಾಮ : ಹಿಂತಿರುಗಿ ಕೊಡಲು ನಮ್ಮ ಹತ್ತಿರ ಏನಿದೆ? ಇದ್ದ ಹೊಲವನ್ನೂ ಅವನಲ್ಲೇ ಅಡವಿಟ್ಟುದಾಯ್ತು. ಇನ್ನಿದೊಂದು ಮನೆ. ಇದರ ಮೇಲೂ ಅವನು ಕಣ್ಣಿಟ್ಟಿದರೆ ಆಶ್ಚರ್ಯವಿಲ್ಲ. ದುಡಿದೇನೆಂದರೆ ಕೆಲಸ ಕೊಡುವ ಪುಣ್ಯಾತ್ಮರಿಲ್ಲ. ಏನು ಊರೋ! ಇದೊಂದು ಬಾರಿ ಹಿಟ್ಟನ್ನಂತೂ ಕೇಳ್ತೀನಿ.

ಎಂದು ಹೇಳಿ ಬಲರಾಮ ಬುಟ್ಟಿ ತಗೊಂಡು ಸಾವ್ಕಾರನ ಮನೆಗೆ ಹೊರಟ. ಕೋಲು ಹಿಡಿದುಕೊಂಡು ಆಳುಗಳಿಂದ ಅದು ಇದು ಕೆಲಸ ತೆಗೆಯುತ್ತ ನಿಂತಿದ್ದ. ಬಡವರಿಗೆ ಬಲ ಇರೋದಿಲ್ಲ. ಧೈರ್ಯವೂ ಇರೋದಿಲ್ಲ. ಅಲ್ಲವೆ? ಬಲರಾಮ ಹೆದರಿಕೊಂಡೇ ಹೋಗಿ ಸಾವ್ಕಾರನ ಮುಂದೆ ಬಾಗಿ ನಿಂತ. ಸಾವ್ಕಾರ ಕೇಳಿದ:

ಸಾವ್ಕಾರ : ಏನಯ್ಯಾ ಬಲರಾಮ ಮತ್ತೆ ಬಂದೆ?

ಬಲರಾಮ : ತಾಯಿ ಜಡ್ಡಾಗಿ ಮಲಗಿದ್ದಾಳೆ, ಒಂದು ಪಾವು ಹಿಟ್ಟು ಕಡ ಕೊಟ್ಟರೆ ಗಂಜೀನಾದರೂ ಕುದಿಸಿ ಕುಡಿಸಬಹುದು.

ಸಾವ್ಕಾರ : ಹೌದಯ್ಯ, ಕಡ ಅಂತ ಕೊಟ್ಟುದನ್ನು ಎಂದಾದರೂ ಹಿಂದಿರುಗಿಸಿ ಕೊಟ್ಟಿದ್ದೀಯ?

ಬಲರಾಮ : ವಾಪಸ್ ಮಾಡ್ತೀವಿ.

ಸಾವ್ಕಾರ : ಹಿಟ್ಟು ಕೊಡೋಣ. ಒಂದು ವಾರ ಮುಗಿದ ಮೇಲೆ ಹತ್ತು ಪಾವು ಹಿಟ್ಟು ಕೊಡಬೇಕು. ತಪ್ಪಿದರೆ ಹಿತ್ತಲು ಸಮೇತ ನಿನ್ನ ಮನೆ ಬರೆದುಕೊಡಬೇಕು. ಒಪ್ಪಿಗೆಯೋ? ಒಪ್ಪಿಗೆ ಇದ್ದರೆ ತಗೊಂಡು ಹೋಗು.

(ಒಂದು ಪಾವು ಹಿಟ್ಟಿಗೆ ಹಿತ್ತಲು ಸಮೇತ ಮನೆ ಬರೆದು ಕೊಡುವುದು ಅಂದರೆ ದುಬಾರಿಯಾಯಿತು. ಆದರೇನು ಮಾಡುವುದು? ತಾಯಿಯ ಜೀವವೂ ಮುಖ್ಯ ಅಲ್ಲವೆ? ಅಂತ ಯೋಚಿಸಿ)

ಬಲರಾಮ : ಆಯ್ತು ಸ್ವಾಮೀ ಕೊಡಿ.

ಎಂದು ಹೇಳಿ, ಸಾವ್ಕಾರನಿಂದ ತನ್ನ ಬುಟ್ಟಿಯಲ್ಲಿ ಒಂದು ಪಾವು ಹಿಟ್ಟು ಹಾಕಿಸಿಕೊಂಡು ಮನೆಗೆ ನಡೆದ.

ಇಂತೀ ರೀತಿಯಲ್ಲಿ ಬಲರಾಮ ಬುಟ್ಟಿಯಲ್ಲಿ ಹಿಟ್ಟು ತಗಂಡು ಬರುತ್ತಿರಲಾಗಿ ಮಾಯದ ಗಾಳಿ

ಬೀಸಿತು. ತರುಮರ ತೂಗಾಡಿ, ತರಗೆಲೆ ಹಾರಾಡಿ, ಬುಟ್ಟಿಯಲ್ಲಿಯ ಹಿಟ್ಟು ಧೂಳಿನೊಂದಿಗೆ ಒಂದಾಗಿ ಹಾರಿಹೋಯಿತು! ಬಲರಾಮನಿಗೆ ರುದ್ರಕೋಪ ಬಂತು. ಅಷ್ಟರಲ್ಲಿ ಚೆಂಡೆ, ಮೃದಂಗ, ಡೋಲು, ತಾಳಗಳ ದನಿ ಕೇಳಿಸಿ, ನೋಡಿದರೆ ವಾಯುವೇಗದಲ್ಲಿ ರಭಸದಿಂದ ಬರುತ್ತಿದ್ದಾರೆ! ರಥ ಎಳೆವ ಕುದುರೆಗಳು, ರಥದಲ್ಲಿ ವಾಯುದೇವರು, ಅವನ ಸಾರಥಿ ಕಂಡರು. ಬಿರುಗಾಳಿಯ ರಭಸಕ್ಕೆ ಬಲರಾಮ ತತ್ತರಿಸಿಹೋದ. "ಎಲಾ ಎಲಾ ಒಬ್ಬರ ನಗಿಸಿ ಒಬ್ಬರ ಅಳಿಸುವ ಇಬ್ಬಂದಿಕಾರ ಗಾಳಿಯೇ ಎಷ್ಟು ನಿನ್ನ ಸೊಕ್ಕು!"

ಎಂದು ಹೇಳುತ್ತ ಇವನೂ ವಾಯುದೇವರ ರಥದ ಬೆನ್ನುಹತ್ತಿ ಓಡತೊಡಗಿದ. ವಾಯುದೇವರ ರಥ ಬೆಟ್ಟ ಹತ್ತಿ ಹಳ್ಳ ಕೊಳ್ಳ ಇಳಿದು ನೀರುನಿಡಿ ದಾಟಿ ಓಡಿದರೆ ಇವನೂ ಓಡಿದ. ವಾಯುದೇವರು ಹಿಂದಿನಿಂದ ಓಡಿಬರುತ್ತಿರುವ ಬಲರಾಮನನ್ನು ನೋಡಿ ಬೆಟ್ಟದ ಬಳಿ ರಥವ ನಿಲ್ಲಿಸಿ–

ವಾಯುದೇವ : ಅದ್ಯಾಕೆ ಈ ಬಾಲಕ ಹೀಗೆ ನಮ್ಮೊಂದಿಗೆ ಓಡೋಡಿ ಬರುತ್ತಿದ್ದಾನೆ? ಅಗೋ ಇಲ್ಲಿಗೆ ಬಂದ ಅವನನ್ನು ವಿಚಾರಿಸು ಎಂದು ಸಾರಥಿಗೆ ಹೇಳಿದ.

ಸಾರಥಿ : ಅಯ್ಯಾ ಬಾಲಕ, ನೀನ್ಯಾಕೆ ನಮ್ಮೊಂದಿಗೆ ಸ್ಪರ್ಧೆಗೆ ಇಳಿದಂತೆ ಓಡಿ ಬರುತ್ತಿರುವೆ?

ಬಲರಾಮ : ಸ್ವಾಮಿ, ನಾನು ಬಡವ, ನನ್ನ ತಾಯಿ ಜಡ್ಡಾಗಿ ಮಲಗಿದ್ದಾಳೆ. ಒಂದಷ್ಟು ಹಿಟ್ಟು ಕಡ ತಂದು ತಾಯಿಗೆ ಗಂಜಿಯಾದರೂ ಕುದಿಸಿ ಹಾಕೋಣವೆಂದರೆ ನೀವಿದ್ದೀರಲ್ಲ, ನಿಮ್ಮ ಓಟದ ರಭಸಕ್ಕೆ ನನ್ನ ಬುಟ್ಟಿಯ ಹಿಟ್ಟೆಲ್ಲ ಹಾರಿಹೋಯಿತು. ಈಗ ನನ್ನ ತಾಯಿಯ ಗತಿಯೇನಾಗಬೇಕು? ನೀವೇ ಹೇಳಿ, ಸಾವ್ಕಾರನ ಸಾಲ ಹೇಗೆ ತೀರಿಸಬೇಕು?

ವಾಯುದೇವರಿಗೆ ಕರುಣೆ ಬಂತು. 'ಅಯ್ಯೊ ಮಗು' ಎಂದು ಹೇಳುತ್ತ ಬಲಗೈ ಚಾಚಿದಾಗ ಅವರ ಕೈಗೆ ಒಂದು ತೆಂಗಿನ ಸಸಿ ಬಂತು.

ವಾಯುದೇವ : ಇಗೋ ಈ ಸಸಿ ಇದೆಯಲ್ಲ, ಇದನ್ನು ನಿನ್ನ ಹಿತ್ತಿಲಲ್ಲಿ ನೆಡು, ಅದು ದೊಡ್ಡದಾಗಿ ಬೆಳೆದೊಡನೆ ಅದನ್ನು ಹತ್ತಿ ಹೋಗು. ಅಲ್ಲೇ ಮರದ ದೇವತೆ ಇರುತ್ತಾಳೆ. ಅವಳಲ್ಲಿ ನಿನಗೇನು ಬೇಕೊ ಅದನ್ನು ಕೇಳಿಕೋ ಕೊಡುತ್ತಾಳೆ ಎಂದು ಹೇಳಿ ಸಸಿಯನ್ನು ಅವನ ಕೈಗಿಟ್ಟು ವಾಯು ದೇವರು ತಮ್ಮ ಪ್ರಯಾಣವನ್ನು ಮುಂದುವರಿಸಿದರು. ಬಲರಾಮ ಸಸಿ ತಗೊಂಡು ಮನೆಗೆ ಬಂದ.



ತಾಯಿಗೆ ವಾಯುದೇವರು ಕೊಟ್ಟ ಸಸಿಯನ್ನು ತೋರಿಸಿ ಉತ್ಸಾಹಗೊಂಡ. ಹಿತ್ತಲಿಗೆ ಬಂದು ಸಸಿ ನೆಟ್ಟುಹಾಕಿದ್ದೇ ತಡ ಅದು ಕೂಡಲೇ ಸಣ್ಣ ಗಿಡವಾಗಿ, ಆಗಲೇ ಮರವಾಗಿ ಬೆಳೆಯತೊಡಗಿತು. ಇವನು ಮರ ಹತ್ತಿದ. ಮರ ಎತ್ತರೆತ್ತರ ಬೆಳೆಯಿತು. ಕೆಳಗಡೆ ತಾಯಿ ಆಶ್ಚರ್ಯಪಡುತ್ತ ನಿಂತಳು.

ಮರದ ತುದಿಯಲ್ಲೊಂದು ಪೊಟರೆಯಲ್ಲಿ ಒಬ್ಬ ಹಸಿರು ದೇವತೆ ನಗುತ್ತ ಕೂತಿದ್ದಳು. ಅವಳ ಕೈಯಲ್ಲಿ ಬಲರಾಮನ ಹಿಟ್ಟಿನಬುಟ್ಟಿಯಿತ್ತು. ಬಲರಾಮ ಕೈಮುಗಿದು ಕೇಳಿದ:

ಬಲರಾಮ : ವಾಯುದೇವರ ಅಪ್ಪಣೆಯಂತೆ ನಿನ್ನ ದರ್ಶನಕ್ಕೆ ಬಂದಿದ್ದೇನೆ ತಾಯಿ.

ದೇವತೆ : ಈ ಬುಟ್ಟಿ ನಿನ್ನದಲ್ಲವೆ?

ಬಲರಾಮ : ಹೌದು ತಾಯಿ.

ದೇವತೆ : ಇದನ್ನು ಈ ಮರದ ನೆರಳಿನಲ್ಲಿಟ್ಟು ನಿನಗೇನು ಬೇಕೋ ಅದನ್ನು ಕೇಳಿಕೊ, ಆದರೆ ದಿನಾಲೂ ಮರದ ಬೇರಿಗೆ ನೀರು ಹಾಕುವುದನ್ನು ಮಾತ್ರ ಮರೆಯಬೇಡ ಹೋಗು ಎಂದು ಬುಟ್ಟಿ ಕೊಟ್ಟು ಮಾಯವಾದಳು. ಬಲರಾಮ ಇಳಿದು ಬಂದು ಇನ್ನೂ ಆಶ್ಚರ್ಯದಲ್ಲಿಯೇ ನಿಂತಿದ್ದ ತಾಯಿಯನ್ನು ಮರದ ನೆರಳಲ್ಲಿ ಕೂರಿಸಿ, ಬುಟ್ಟಿಯನ್ನು ಮುಂದಿಟ್ಟು ಕೊಂಡು ನಮಸ್ಕರಿಸಿ ಕೇಳಿದ.

ಬಲರಾಮ : ಮರದ ಮಾಯೀ ಮಹಾ ತಾಯೀ ನನ್ನವ್ವನ ಹಸಿವೆ ಹಿಂಗಿ ಜಡ್ಡು ವಾಸಿಯಾಗುವಂಥ ಗಂಜಿ ಕೊಡು. ಹೀಗೆ ಕೇಳಿದ್ದೇ ಆಯ್ತು ಗಂಜಿ ತುಂಬಿದ ಪಾತ್ರೆ ಬುಟ್ಟಿಯಲ್ಲಿ ಕಾಣಿಸಿಕೊಂಡಿತು. ತಾಯಿ ಮರಕ್ಕೆ ಕೈಮುಗಿದು ಗಂಜಿ ಕುಡಿದಳು. ಮಿಕ್ಕುದನ್ನು ಮಗನೂ ಕುಡಿದ. ಇಬ್ಬರೂ ತೃಪ್ತರಾದರು. ತಾಯಿಯ ಜಡ್ಡೂ ವಾಸಿಯಾಯ್ತು. ಬಲರಾಮ ಇನ್ನೊಮ್ಮೆ ಕೈ ಮುಗಿದು ಕೇಳಿದ.

"ಮರದ ಮಾಯೀ ಮಹಾತಾಯೀ ಸಾವ್ಕಾರರಿಗೆ ಕೊಡೋದಕ್ಕೆ ಹತ್ತು ಪಾವು ಹಿಟ್ಟೂ ಕೊಡು." ಕೂಡಲೇ ಬುಟ್ಟಿಯಲ್ಲಿ ಹತ್ತು ಪಾವು ಹಿಟ್ಟು ಬಂತು. ಸಾವ್ಕಾರರಿಗೆ ಕೊಟ್ಟು ಬರ್ತೀನೆಂದು ಹೇಳಿ ಹಿಟ್ಟು ತಗೊಂಡು ಹೋದ.

ಸಾವ್ಕಾರನ ಮನೆಯಲ್ಲಿ ಆಳುಗಳು ಅದು ಇದು ಕೆಲಸ ಮಾಡುತ್ತಿದ್ದರು. ಸಾವ್ಕಾರ ಉಸ್ತುವಾರಿ ಮಾಡುತ್ತಿದ್ದ. ಅಷ್ಟರಲ್ಲಿ ಬಲರಾಮ ಹತ್ತು ಪಾವು ಹಿಟ್ಟನ್ನು ಚೀಲದಲ್ಲಿ ಹಾಕಿಕೊಂಡು ಬಂದದ್ದನ್ನು ನೋಡಿ ಚಕಿತನಾದ.

ಸಾವ್ಕಾರ : ಏನಯ್ಯಾ ಇಷ್ಟು ಬೇಗ ಬಂದೆ? ಬಲರಾಮ: ಕಡ ಒಯ್ದ ಹಿಟ್ಟನ್ನು ಹಿಂದಿರುಗಿಸಲು ಬಂದೆ ಸ್ವಾಮಿ.

ಸಾವ್ಕಾರ : ಹಿಟ್ಟು ವಾಪಸ್ಸು ಕೊಡ್ತೀಯಾ? ಏನಯ್ಯಾ ಸೂರ್ಯ ಇವತ್ತು ಪಶ್ಚಿಮದಲ್ಲಿ ಹುಟ್ಟಿದ ಹಾಗಿದೆ! ಏನಾದರೂ ನಿಧಿ ಸಿಕ್ಕಿತೇ?

ಬಲರಾಮ : ಇಲ್ಲ ಸ್ವಾಮಿ, ವಾಯುದೇವರು ವರಕೊಟ್ಟರು.

ಸಾವ್ಕಾರ : ವಾಯುದೇವ? ಅವನ್ಯಾರಯ್ಯಾ? ದೇವರ್‍ಯಾರಾದರೂ ವರ ಕೊಟ್ಟಿದ್ದರೆ ಶ್ರೀಮಂತನಾದ ನನಗೇ ಮೊದಲು ಕೊಡ್ತಿದ್ದ. ನನ್ನ ಬಿಟ್ಟು ದರಿದ್ರನಾದ ನಿನಗೆ ಹ್ಯಾಗೆ ಕೊಟ್ಟ ಅವನು?

ಬಲರಾಮ : ಗೊತ್ತಿಲ್ಲ ಸ್ವಾಮಿ. ಹತ್ತು ಪಾವು ಹಿಟ್ಟಿದೆ. ಇಟ್ಟಿದ್ದೇನೆ. ಅಮ್ಮ ಕಾಯ್ತಾಳೆ ಬರ್ತೀನಿ ಅಂತ ಹೇಳಿ ಬಲರಾಮ ಹೋಗಿಬಿಟ್ಟ. ಶ್ರೀಮಂತ ಅಸೂಯೆಯಿಂದ ಉರಿಯುತ್ತ ಕಾಲಿನಿಂದ ನೆಲ ಒದ್ದು ಶತಪಥ ತಿರುಗುತ್ತ ಪರಿತಪಿಸಿದ. ಆ ದಿನ ಅನ್ನಾಹಾರ ನಿದ್ರೆ ನೀರು ಬಿಟ್ಟು ದವಡೆಯಲ್ಲಿ ಸಿಟ್ಟನ್ನಿಟ್ಟು ಕೊಂಡು ಅಗಿಯುತ್ತ ಮಲಗಿದ. ಬೆಳಿಗ್ಗೆದ್ದವನೇ ಆಳುಗಳನ್ನಟ್ಟಿ ಬಲರಾಮ ಹಿಂದಿರುಗಿಸಿದ ಕಡದ ಹಿಟ್ಟಿನ ಮಾಹಿತಿ ತರಿಸಿಕೊಂಡ. ಆ ಕ್ಷಣವೇ ತನ್ನ ನರಿಬುದ್ಧಿಯನ್ನು ಜಾಗೃತಗೊಳಿಸಿಕೊಂಡು ಹೀಗೇ ಬಿಟ್ಟರೆ ಒಂದು ದಿನ ಸಾಲ ತೀರಿಸಿ ಹೊಲವನ್ನೂ ಬಿಡಿಸಿಕೊಂಡಾನೆಂದು ದೌಡಾಯಿಸಿ ಬಲರಾಮನ ಗುಡಿಸಲಿಗೆ

ಹೋದ. ಬಲರಾಮ ಮರದ ಬೇರಿಗೆ ನೀರು ಸುರಿಯುತ್ತಿದ್ದ.

ಸಾವ್ಕಾರ : ಏನು ಮಾಡುತ್ತೀದ್ದೀಯಾ ಬಲರಾಮ?

ಬಲರಾಮ : ಮರಕ್ಕೆ ನೀರು ಹುಯ್ಯುತ್ತಿದ್ದೇನೆ. ಬಾಯಾರಿಕೆಗೆ ಏನಾದರೂ ಕೊಡಲಾ ಸಾವ್ಕಾರ?

ಸಾವ್ಕಾರ : ಎಲಾ ಇವನ ಶ್ರೀಮಂತಿಕೆಯೇ! ಬಾಯಾರಿಕೆಗೆ ಏನು ಕೊಡಲಿ ಅಂತಾನಲ್ಲ? ಎಂದು ಸಾವ್ಕಾರ ಆಶ್ಚರ್ಯಪಟ್ಟು ಕೊಂಡು ಹುನ್ನಾರದಿಂದ ಹೇಳಿದ.

ಸಾವ್ಕಾರ : ತೆವಲಿಗೆ ಎಲಡಿಕೆ ಕೊಡು ಮಾರಾಯ ಸಾಕು.

ಬಲರಾಮ ನೀರು ಹುಯ್ಯುವುದನ್ನು ನಿಲ್ಲಿಸಿ ಬುಟ್ಟಿಯ ಹತ್ತಿರ ಬಂದು,

ಬಲರಾಮ : ಮರದ ಮಾಯೀ, ಮಹಾತಾಯೀ ಎಲಡಿಕೆ ಕೊಡು ಅನ್ನುವುದೇ ತಡ ಬುಟ್ಟಿಯಲ್ಲಿ ಒಂದು ದೊಡ್ಡ ಕಟ್ಟು ಎಲೆ, ಪುಷ್ಕಳ ಅಡಿಕೆ, ಸುಣ್ಣ ಕಾಚು ಬಂದವು! ಸಾವ್ಕಾರನಿಗೆ ಆಶ್ಚರ್ಯ ಆನಂದ ಎರಡೂ ಆದವು. ಆಶ್ಚರ್ಯ, ಯಾಕೆಂದರೆ ಬುಟ್ಟಿಯಲ್ಲಿ ನಿಜವಾದ ಎಲಡಿಕೆ ಬಂದವು. ಆನಂದ ಯಾಕೆಂದರೆ ಇನ್ನು ಮುಂದೆ ತಾನು ಅಂದುಕೊಂಡ ಕಾರ್ಯ ಯಶಸ್ವಿಯಾಗುತ್ತದೆಂಬ ವಿಶ್ವಾಸದಿಂದ.

ಸಾವ್ಕಾರ : ಇದೇನು ಪವಾಡ ಮಾಡಿದೆ ಮಾರಾಯಾ! ವಾಯುದೇವರು ವರ ಕೊಟ್ಟ ಅಂತಿದ್ದೆಯಲ್ಲ, ಇದೇನಾ?

ಬಲರಾಮ : ಹೌದು.

ಸಾವ್ಕಾರ : ಕೇಳಿದ್ದನ್ನೆಲ್ಲಾ ಕೊಡುತ್ತದೆಯೇ ಈ ಬುಟ್ಟಿ?

ಬಲರಾಮ : ಓಹೋ.

ಈಗ ಸಾವ್ಕಾರ ನಗೆಯನ್ನು ಅಭಿನಯಿಸುತ್ತ ಶಬ್ದಗಳಿಗೆ ಸಕ್ಕರೆ ಸವರುತ್ತ ಹೇಳಿದ.

ಸಾವ್ಕಾರ : ಅಯ್ಯಾ ಬಲರಾಮ ಮನೆಗೆ ಹತ್ತು ಜನ ನೆಂಟರು ಬಂದಿದ್ದಾರೆ. ನನ್ನ ಹೆಂಡತಿ ರೋಗಿ, ಅಡಿಗೆ ಮಾಡಲಾಗುತ್ತಿಲ್ಲ. ನಿನ್ನ ಹತ್ತಿರ ಆ ಬುಟ್ಟಿ ಇದೆಯಲ್ಲಾ ಅದೇ ಆ ವಾಯುದೇವರು ಕೊಟ್ಟಿದ್ದು. ಅದನ್ನ ಒಂದು ತಾಸಿನ ಮಟ್ಟಿಗೆ ಕೊಟ್ಟಿರು. ನೆಂಟರ ಊಟವಾದ ಮೇಲೆ ವಾಪಾಸ್ ಕೊಡುತ್ತೇನೆ.

ಬಲರಾಮ : ಆದರೆ ಈ ಬುಟ್ಟಿಯನ್ನ ಇನ್ನೊಬ್ಬರಿಗೆ ಕೊಡಲಾಗದು ಸಾವ್ಕಾರರೇ.

ಸಾವ್ಕಾರ : ಅಯ್ಯಾ ಒಬ್ಬರಿಗೊಬ್ಬರು ಸಹಾಯ ಮಾಡದೆ ಬದುಕಲಿಕ್ಕಾಗುತ್ತದ? ನಿನಗೆ ನಾನು ಎಷ್ಟೊಂದು ಸಹಾಯ ಮಾಡಿಲ್ಲವೆ? ಈಗ ನೀನು ಸಹಾಯ ಮಾಡಬೇಕಪ್ಪ. ಬೇಕಾದರೆ ಅರ್ಧ ತಾಸಿನಲ್ಲಿ ವಾಪಸ್ ಕೊಡ್ತೀನಿ. ಕೊಡು.

ಸಾವ್ಕಾರನ ವಾದ ಸರಿಯೆನಿಸಿ ಬಲರಾಮ ಬುಟ್ಟಿ ಕೊಟ್ಟ. ನೆಂಟರು ಕಾದಿರುತ್ತಾರೆಂದು ಸಾವ್ಕಾರ ಅವಸರದಲ್ಲಿ ಹೋದ.

ಅಷ್ಟೇ ಅವಸರದಲ್ಲಿ ಸಾವ್ಕಾರನ ಆಳು ಅದೇ ಬುಟ್ಟಿ ತಗೊಂಡು ವಾಪಸ್ ಬಂದ.

ಆಳು : ಅಣ್ಣಾ ಬಲರಾಮ, ನಿನ್ನ ಬುಟ್ಟಿ ಸಾವ್ಕಾರರಲ್ಲಿ ಕೆಲಸ ಮಾಡಲಿಲ್ಲವಂತೆ. ಅದಕ್ಕೇ ಸಾವ್ಕಾರ್ರು ಹಿಂದಿರುಗಿ ಕಳಿಸಿದರಪ್ಪ.

ಬಲರಾಮ : ಕೊಡು ಮಾರಾಯ. ಆಗಲೇ ನನ್ನಮ್ಮನಿಗೆ ಗಂಜಿ ಕೊಡುವ ಸಮಯವಾಯಿತು.

ಬುಟ್ಟಿ ಕೊಟ್ಟು ಸೇವಕ ಅವಸರದಲ್ಲಿ ಮರೆಯಾದ. ಬಲರಾಮ ಬುಟ್ಟಿಯನ್ನ ಮರದ ನೆರಳಲ್ಲಿಟ್ಟು –

"ಮರದ ಮಾಯಿ ಮಹಾತಾಯೀ ಅವ್ವನಿಗೂ ನನಗೂ ಗಂಜಿ ಕೊಡು" ಅಂದ.

ಬುಟ್ಟಿಯಲ್ಲೇನೂ ಮೂಡಲಿಲ್ಲ. ಗಾಬರಿಯಾದ. ಬುಟ್ಟಿಯನ್ನೆತ್ತಿ ಪರೀಕ್ಷಿಸುತ್ತಿದ್ದಾಗ ತಾಯಿ ಬಂದಳು. ಅವಳು ಕೇಳಿದರೂ ಬುಟ್ಟಿ ಏನನ್ನೂ ಕೊಡಲಿಲ್ಲ. ತಾಯಿ ಬುಟ್ಟಿಯನ್ನು ಪರೀಕ್ಷಿಸಿ ನೋಡಿದಾಗ ಗೊತ್ತಾಯಿತು.

"ಸಾಹ್ಕಾರನನ್ನ ನಂಬಿ ಬುಟ್ಟಿ ಕೊಟ್ಟಿದ್ದು ತಪ್ಪು ಕಣಪ್ಪ. ಇದು ನಮ್ಮ ಬುಟ್ಟಿ ಅಲ್ಲ. ಸಾಹ್ಕಾರ್ರು ಬೇರೆ ಬುಟ್ಟಿ ಕೊಟ್ಟಿದ್ದಾರೆ. ಹೋಗಿ ಅವರ ಬುಟ್ಟಿ ಕೊಟ್ಟು ನಮ್ಮ ಬುಟ್ಟಿ ಇಸಿದುಕೊಂಡು ಬಾ."

ಮಾಯಿಯ ಮಾತಿನಂತೆ ಬಲರಾಮ ಸಾಹ್ಕಾರನ ಮನೆಗೇನೋ ಬಂದ. "ಕೊಟ್ಟವ ಕೋಡಂಗಿ ಇಸಿಕೊಂಡವ ಈರಭದ್ರ" ಅಂತ ಹಿರಿಯರು ಗಾದೆ ಮಾಡಿದ್ದು ಸುಳ್ಳಾದೀತೆ?

ನಾವಂದುಕೊಂಡಂತೆ ಸಾಹ್ಕಾರ ಬುಟ್ಟಿ ಕೊಡಲಿಲ್ಲ. ಮಾತ್ರವಲ್ಲ ಆಳುಗಳೊಂದಿಗೆ ನಗಾಡುತ್ತ ಬಲರಾಮನನ್ನ ತಳ್ಳಿಬಿಟ್ಟ. ನಿರಾಸೆಯಿಂದ ಹಿಂದಿರುಗಿ ಬಂದು ಮರದ ಬುಡದಲ್ಲಿ ಚಿಂತಿಸುತ್ತ ಕೂತ. ಕೊನೆಗೆ ಏನೂ ಹೊಳೆಯದೆ "ಮರದ ತಾಯೀ ಮಹಾತಾಯೀ ನೀನೇ ಗತಿ" ಎಂದು ಕೈಮುಗಿದ. ಮನುಷ್ಯ ಬಿಟ್ಟರೂ ಮರ ಕೈಬಿಟ್ಟೀತೇ? ಬಲರಾಮನ ಮುಂದೊಂದು ಹಲಗೆ ಕಂಡಿತು. ಮರದ ದೇವತೆಯ 'ಮಗನೇ' ಎಂಬ ದನಿ ಕೇಳಿಸಿ ನೋಡಿದ. ಮರದ ದೇವತೆ ಪ್ರತ್ಯಕ್ಷಳಾಗಿ ಹೇಳಿದಳು.

ದೇವತೆ : ಮಗನೇ ಈ ಹಲಗೆ ತಗೊಂಡು ಟಾಂ ಟಾಂ ಬಾರಿಸುತ್ತ ನಿನಗೆ ಅನ್ಯಾಯವಾದದ್ದನ್ನ ಹೇಳಿ ನ್ಯಾಯ ಬೇಕಂತ ಜನರಲ್ಲಿ ಹೇಳಿಕೊ. ಯಾರೋ ಪುಣ್ಯಾತ್ಮರು ಮುಂದೆ ಬಂದು ನ್ಯಾಯ ಸಿಗುವಂತೆ ಮಾಡಬಹುದು.

ಈಗ ಅದು ಬಿಟ್ಟು ಬೇರೆ ದಾರಿ ಇಲ್ಲವಲ್ಲ. ಬುಟ್ಟಿ ತಗೊಂಡು ಸಾಹ್ಕಾರನ ಮನೆ ಕಡೆಗೆ ಹೊರಟ. ಜನ ಕಂಡ ಕೂಡಲೇ "ನನಗೆ ಸಾಹ್ಕಾರ್ರು ಅನ್ಯಾಯ ಮಾಡಿದ್ದಾರೆ. ನನ್ನ ಬುಟ್ಟಿಯನ್ನ ತಗೊಂಡು ಹೋಗಿ ಅದನ್ನಿಟ್ಟುಕೊಂಡು ಬೇರೆ ಬುಟ್ಟಿ ಕೊಟ್ಟಿದ್ದಾರೆ. ನನಗೆ ನನ್ನ ಬುಟ್ಟಿ ಸಿಗೋತನಕ ಬಿಡೋದಿಲ್ಲ" ಎಂದು ಸಾರಿ ಸಾರಿ ಹೇಳಿ ಹಲಗೆ ಬಾರಿಸತೊಡಗಿದ. ಆಶ್ಚರ್ಯ!

ಹಲಗೆ ದನಿ ಕೇಳಿಸಿದವರೆಲ್ಲ ಕುಣಿಯತೊಡಗಿದರು. ಅಡುಗೆ ಮನೆಯಲ್ಲಿದ್ದ ಹೆಂಗಸರು ಅಡುಗೆ ಮಾಡುತ್ತಲೇ, ಪಕ್ಕದ ಹೊಲ ಗದ್ದೆಗಳಲ್ಲಿ ಗೇಯುವವರು ಗೇಯುತ್ತಲೇ, ನೋಡುವವರು, ನೋಡುತ್ತಲೇ ಆಡುವ ಮಕ್ಕಳು ಆಡುತ್ತಲೇ, ಕೋಲೂರುವ ಮುದುಕರು ಕೋಲೂರಿಕೊಂಡೇ ಕುಣಿಯಲಾರಂಭಿಸಿದರು. ಇದರಿಂದ ಹುರುಪಾದ ಬಲರಾಮ ಇನ್ನಷ್ಟು ಜೋರಿನಿಂದ ಬಾರಿಸುತ್ತಾ ಸಾಹ್ಕಾರನ ಮನೆಯ ಕಡೆಗೆ ನಡೆದ. ಕುಣಿಯುವ ಜನ ಇನ್ನಷ್ಟು ರಭಸದಿಂದ ಕುಣಿಯುತ್ತ ಕುಣಿಯುತ್ತ ಅವನ ಬೆನ್ನುಹತ್ತಿದರು. ಮೆರವಣಿಗೆ ಸಾಹ್ಕಾರನ ಮನೆಗೇ ಬಂತು. ಬಲರಾಮ ಹಲಗೆ ಬಾರಿಸುವುದನ್ನು ನಿಲ್ಲಿಸಿ ಕೇಳಿದ.

ಬಲರಾಮ : ನನ್ನ ಬುಟ್ಟಿ ನನಗೆ ಕೊಡ್ರಿ ಸಾಹ್ಕಾರ್ರೆ.

ಜನರು : ಹೌದು ಹೌದು ಕೊಡ್ರಿ ಸಾಹ್ಕಾರ್ರೇ. (ಆದರೆ ಸಾಹ್ಕಾರನಿಗೆ ಹಲಗೆಯ ಮಹಿಮೆ ತಿಳಿದಿರಲಿಲ್ಲ. ಕೊಬ್ಬಿನಿಂದ)

ಸಾಹ್ಕಾರ : ಯಾವ ಬುಟ್ಟೀನಯ್ಯಾ? ನಿನ್ನ ಬುಟ್ಟಿಯನ್ನು ನಿನಗೆ ಆಗಲೇ ಕೊಟ್ಟಾಗಿದೆ. ಅಗೋ ಆ ಸೇವಕನೇ ಕೊಟ್ಟು ಬಂದ. ಅಲ್ಲವೇನಯ್ಯಾ?

ಸೇವಕ : ಹೌದು ನನ್ನೊಡೆಯ.

ಬಲರಾಮ : ನನ್ನ ಬುಟ್ಟಿ ಇಟ್ಕೊಂಡು ಬೇರೆ ಬುಟ್ಟಿ ಕೊಟ್ಟಿರೋದು. ಸುಳ್ಳು ಹೇಳಬೇಡಿ. ನನ್ನ ಬುಟ್ಟಿ ನನಗೆ ಕೊಟ್ಟರೆ ಸರಿ. ಇಲ್ಲದಿದ್ದರೆ... (ಈಗ ಸಾಹ್ಕಾರನ ಕೊಬ್ಬು ನೆತ್ತಿಗೇರಿತು.)

ಸಾಹ್ಕಾರ : ಕೊಡದಿದ್ದರೇನು ಮಾಡುತ್ತೀಯೋ ಬೇಕೂಫ! ಬೆದರಿಕೆ ಹಾಕುತ್ತೀಯೋ ಹೋಗು ಕೊಡೋದಿಲ್ಲ.

ಬಲರಾಮ : ಹೀಗೋ? ಹಾಗಿದ್ದರೆ ಕುಣಿಯಿರಿ ಎಂದು ಹಲಗೆ ಬಾರಿಸತೊಡಗಿದ. ಎಲ್ಲರೂ ಕುಣಿಯತೊಡಗಿದರು. ಸಾಹ್ಕಾರನ ಕೊಬ್ಬು ಹೆಚ್ಚಿದ್ದರಿಂದ ಅವನು ಎಲ್ಲರಿಗಿಂತ ಹೆಚ್ಚು ಹಾರಾಡಿ ಕುಣಿಯತೊಡಗಿದ. ದಣಿದವರು ಕುಣಿಯುತ್ತಲೇ "ಬಲರಾಮನ ಬುಟ್ಟಿ ಕೊಡಿ ಸ್ವಾಮೀ" ಎಂದು ಗೋಗರೆದರು. ಬಲರಾಮನ ರಭಸ ಹೆಚ್ಚಿದಂತೆ ಇವರು "ಯೋ ಸಾಹ್ಕಾರ ಬಲರಾಮನ ಬುಟ್ಟಿ ಕೊಡಯ್ಯಾ" ಎಂದು ಕುಣಿದರು. ಇನ್ನೂ ರಭಸ ಹೆಚ್ಚಿ, "ಬಲರಾಮನ ಬುಟ್ಟಿ

ಕೊಡ್ತೀಯೋ ಇಲ್ಲಾ ನಿನ್ನ ಮನೆಗೆ ಬೆಂಕಿ ಇಡೋಣವೇ?" ಎನ್ನುತ್ತ ಕುಣಿದರು. ಸಾವ್ಕಾರನ ರೋಗಿ ಹೆಂಡತಿ, "ಅಯ್ಯೋ ಬೇಗ ಬುಟ್ಟಿ ಕೊಡಬಾರದೇ?" ಎಂದು ಕುಣಿದಳು. ಸುಸ್ತಾಗಿ ಬಿದ್ದೂ ಎದ್ದೂ ಕುಣಿದಳು. ಅದೂ ಸಾಕಾಗಿ ಸಾವ್ಕಾರನ ಕಾಲ ಮೇಲೆ ಬಿದ್ದಳು. ಆಗಲೇ ಸಾವ್ಕಾರನಿಗೂ ಕುಣಿದು ಕುಣಿದು ಸಾಕಾಗಿತ್ತು. ಜನ ಕುಣಿಯುತ್ತಲೇ ಸಾವ್ಕಾರನ ಮೇಲೆ ಏರಿ ಹೋದರು. ಸಾವ್ಕಾರ ಕುಣಿಯುತ್ತಲೇ ಹೆದರಿ ಓಡಿಹೋಗಿ ಬುಟ್ಟಿ ತಂದುಕೊಟ್ಟ. ಬಲರಾಮ ನ್ಯಾಯ ಕೊಡಿಸಿದ್ದಕ್ಕೆ ಹಲಗೆ ಬಾರಿಸುವುದನ್ನು ನಿಲ್ಲಿಸಿ ಎಲ್ಲರಿಗೂ ಕೃತಜ್ಞತೆ ಹೇಳಿ ನಮಸ್ಕಾರ ಮಾಡಿ ಮನೆಗೆ ಹೋದ.

ಈ ಕಥೆ ನಿಜವೋ ಸುಳ್ಳೋ ಗೊತ್ತಿಲ್ಲ. ಇಷ್ಟಂತೂ ನಿಜ; ಇದು ನಿಜವಾಗಿ ನಡೆದದ್ದೆಂದು ನಂಬುವವರು ಈಗಲೂ ಇದ್ದಾರೆ. ಅವರ ಪ್ರಕಾರ ಇದು ಸತ್ಯದಷ್ಟೇ ಸತ್ಯವಾದ ಕಥೆಯಂತೆ.

ಡಾ. ಚಂದ್ರಶೇಖರ ಕಂಬಾರ

## ಡಾ। ಚಂದ್ರಶೇಖರ ಕಂಬಾರ



ಡಾ। ಚಂದ್ರಶೇಖರ ಕಂಬಾರರು ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಘೋಡಗೇರಿ ಗ್ರಾಮದಲ್ಲಿ 02–01–1938 ರಂದು ಜನಿಸಿದರು. ತಂದೆ ಬಸವಣೆಪ್ಪ ಕಂಬಾರ, ತಾಯಿ ಚೆನ್ನವ್ವ. ಇವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿ ಸ್ನಾತಕೋತ್ತರ ಪದವಿ ಹಾಗೂ ಡಾಕ್ಟರೇಟ್ ಪದವಿ ಪಡೆದರು. ಇವರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದು, ಹಂಪಿ ಕನ್ನಡ ವಿಶ್ವವಿದ್ಯಾಲಯದ ಪ್ರಥಮ ಉಪಕುಲಪತಿಗಳಾಗಿದ್ದರು. ಜಾನಪದ ವಿದ್ವಾಂಸರಾಗಿ ಪ್ರಸಿದ್ಧರಾದ ಡಾ।ಕಂಬಾರರು 2010ರಲ್ಲಿ ಜ್ಞಾನ ಪೀಠ ಪ್ರಶಸ್ತಿಯನ್ನು ಪಡೆದಿದ್ದಾರೆ. ಚಕೋರಿ, ಸಂಗ್ಯಾಬಾಳ್ಯಾ, ಜೋಕುಮಾರ ಸ್ವಾಮಿ, ಸಿರಿಸಂಪಿಗೆ, ಶಿವರಾತ್ರಿ, ಕರಿಮಾಯಿ, ಸಿಂಗಾರವ್ವ ಮತ್ತು ಅರಮನೆ, ಶಿಖರ ಮೊದಲಾದವು ಇವರ ಪ್ರಸಿದ್ಧ ಕೃತಿಗಳಾಗಿವೆ.

## ಚಟುವಟಿಕೆಗಳು

### □ ಉತ್ತರಿಸಿರಿ

- ಪವಾಡದ ಬುಟ್ಟಿ ಸಿಗುವುದಕ್ಕಿಂತ ಮೊದಲು ಬಲರಾಮನ ಸ್ಥಿತಿ ಹೇಗಿತ್ತು?
- ವಾಯುದೇವನು ಬಲರಾಮನಿಗೆ ತೆಂಗಿನ ಸಸಿಯನ್ನು ಕೊಟ್ಟು ಏನೆಂದು ಹೇಳಿದನು?
- ಬಲರಾಮನು ಹತ್ತು ಪಾವು ಹಿಟ್ಟನ್ನು ಹಿಂದಿರುಗಿಸಿದಾಗ ಸಾವ್ಕಾರನು ಏನು ಮಾಡಿದನು?
- ಮರದ ದೇವತೆ ಕೊಟ್ಟ ಹಲಗೆಯನ್ನು ತೆಗೆದುಕೊಂಡ ಬಲರಾಮನು ಟಾಂ ಟಾಂ ಬಾರಿಸಿದಾಗ ಏನಾಯಿತು?

### □ ವಾಕ್ಯ ರಚಿಸಿರಿ

ಅಡಿಗೆರೆ ಎಳೆದ ಭಾಷಾ ಪ್ರಯೋಗವನ್ನು ಬಳಸಿಕೊಂಡು ಬೇರೆ ಬೇರೆ ವಾಕ್ಯಗಳನ್ನು ರಚಿಸಿರಿ.

- ಓಟದಲ್ಲಿ ಪ್ರಥಮ ಸ್ಥಾನ ಗಳಿಸಿದಾಗ ಫಿಲೋಮಿನಾಳಿಗೆ ಆದ ಸಂತೋಷ ಅಷ್ಟಿಷ್ಟಲ್ಲ.
- ಶಾಲೆಯ ಜಗಲಿಯಲ್ಲಿ ಜಗಳ ಮಾಡುತ್ತಿದ್ದ ಬಾಲಕರನ್ನು ಕಂಡು ಅಧ್ಯಾಪಕರಿಗೆ ರುದ್ರಕೋಪ ಬಂತು.
- ಪೇಟೆಯ ಮಧ್ಯದಲ್ಲಿ ತನ್ನ ಸಂಬಂಧಿಕರ ಮನೆಯನ್ನು ಗುರುತಿಸಲಾಗದೆ ಶತಪಥ ತಿರುಗುತ್ತಿದ್ದ ಹರೀಶನನ್ನು ಹಿರಿಯರೊಬ್ಬರು ಕರೆದು ವಿಚಾರಿಸಿದರು.

- ದರೋಡೆಯ ಸುದ್ದಿ ಕೇಳಿದ ತಕ್ಷಣ ಕಾರ್ಯನಿರತರಾದ ಪೋಲೀಸರು ದರೋಡೆಕೋರರ ಬೆನ್ನು ಹತ್ತಿ ಹಿಡಿದೇ ಬಿಟ್ಟರು.

## ❑ ಶೀರ್ಷಿಕೆ ಕೊಡಿರಿ

- ಈ ಕಥೆಗೆ ಸೂಕ್ತವಾದ ಇನ್ನೊಂದು ಶೀರ್ಷಿಕೆಯನ್ನು ಕೊಡಿರಿ. ಆ ಶೀರ್ಷಿಕೆಯನ್ನು ಕೊಡಲು ಕಾರಣವನ್ನು ಸಮರ್ಥಿಸಿರಿ.

## ❑ ಸಂಭಾಷಣೆ ಬರೆಯಿರಿ

- ಗದ್ಯಭಾಗವನ್ನು ಸಂಭಾಷಣೆಯಾಗಿ ಪರಿವರ್ತಿಸಿ ಬರೆಯಿರಿ.

ಬೇಗ ಬೇಗನೆ ನಡೆದು ಹೋಗುತ್ತಿದ್ದ ಚಾಕರಿಯವನನ್ನು ಬೀರಬಲ್ಲನು ತಡೆದನು. ಸುಡುಬಿಸಿಲಿನಲ್ಲಿ ಅಷ್ಟು ಅವಸರದಿಂದ ಹೋಗುವುದಾದರೂ ಎಲ್ಲಿಗೆ ಎಂದು ವಿಚಾರಿಸಿದನು. ತಾನು ಖಾವಂದರಿಗಾಗಿ ಎರಡು ಸೇರು ಸುಣ್ಣ ತರಲು ಪೇಟೆಗೆ ಹೋಗುತ್ತಿರುವುದಾಗಿ ಅವನು ಹೇಳಿದನು. ಆಗ ಬೀರಬಲನು ಸುಣ್ಣವನ್ನು ತರಲು ಹೇಳಿದಾಗ ಖಾವಂದರು ಏನು ಮಾಡುತ್ತಿದ್ದರೆಂದು ಪ್ರಶ್ನಿಸಿದರು. ಬಾದಶಹನು ಆಗತಾನೇ ಊಟ ಮುಗಿಸಿದ್ದರು; ಅವರಿಗೆ ತಿನ್ನಲು ವೀಳ್ಯವನ್ನು ಕೊಟ್ಟೆ ಎಂದು ಚಾಕರಿಯವನು ಹೇಳಿದನು. ತಕ್ಷಣ ಬೀರಬಲನು ಅವನ ಮೂರ್ಖತನಕ್ಕೆ ನಕ್ಕನು. ಕೊಟ್ಟ ವೀಳ್ಯದಲ್ಲಿ ಸುಣ್ಣ ಹೆಚ್ಚಾಗಿದ್ದರಿಂದ ಅವನಿಗೆ ಸುಣ್ಣ ತಿನ್ನುವ ಶಿಕ್ಷೆ ವಿಧಿಸುವುದಕ್ಕಾಗಿ ಅದನ್ನು ತರಲು ಹೇಳಿದ್ದಾರೆ ಎಂದನು. ಚಾಕರಿಯವನಿಗೆ ಭಯವಾಯಿತು. ಆ ಸಂಕಟದಿಂದ ಪಾರಾಗುವುದು ಹೇಗೆಂದು ಕೇಳಿದನು. ಬೀರಬಲನು ಸ್ವಲ್ಪ ಯೋಚಿಸಿ ಸುಣ್ಣದಷ್ಟೇ ಬೆಣ್ಣೆಯನ್ನೂ ತರಲು ಸೂಚಿಸಿದನು. ಅದೇಕೆಂದು ಚಾಕರಿಯವನಿಗೆ ತಿಳಿಯಲಿಲ್ಲ. ಅದೆರಡನ್ನೂ ಮಿಶ್ರಮಾಡಿ ಖಾವಂದರಿಗೆ ಕೊಡಲು ಹೇಳಿದನು. ಹಾಗೆ ಮಾಡಿದರೆ ಶಿಕ್ಷೆ ಇಲ್ಲದಾಗುವುದೇ ಎಂಬ ಅನುಮಾನವನ್ನು ಚಾಕರಿಯವನು ಬೀರಬಲನ ಮುಂದಿಟ್ಟನು. ಶಿಕ್ಷೆ ಕೊಟ್ಟರೂ ಸುಣ್ಣದಷ್ಟೇ ಬೆಣ್ಣೆ ಇರುವುದರಿಂದ ತಿಂದಾಗ ಏನೂ ಅಪಾಯ ಬರಲಾರದೆಂದು ಬೀರಬಲನು ಸಮಾಧಾನ ಪಡಿಸಿದನು. ಚಾಕರಿಯವನು ಬೀರಬಲನಿಗೆ ಧನ್ಯವಾದ ಹೇಳಿ ಪೇಟೆಗೆ ಹೋದನು.

## ❑ ಗಾದೆಯನ್ನು ವಿಸ್ತರಿಸಿ ಬರೆಯಿರಿ

'ಕೊಟ್ಟವ ಕೋಡಂಗಿ, ಇಸಕೊಂಡವ ಈರಭದ್ರ' ಎಂಬ ಗಾದೆಯನ್ನು ಪಾಠದಲ್ಲಿ ನೋಡಲಿಲ್ಲವೇ? ಅದನ್ನು ಹೀಗೆ ವಿಸ್ತರಿಸಬಹುದು. ಕೋಡಂಗಿ ಎಂಬ ಪದಕ್ಕೆ ಮೂರ್ಖ ಎಂದು ಅರ್ಥವಿದೆ. ಶಿವನ ಗಣದಲ್ಲಿ ಒಬ್ಬನಾದ ವೀರಭದ್ರನನ್ನೇ ಈರಭದ್ರ ಎನ್ನುತ್ತಾರೆ. ಅವನು ಪರಾಕ್ರಮಿ, ಬುದ್ಧಿವಂತ. ಇಲ್ಲಿ ಯಾವುದೇ ಒಂದು ವಸ್ತುವನ್ನು ಆಲೋಚಿಸದೆ ಇನ್ನೊಬ್ಬನಿಗೆ ಕೊಟ್ಟವನನ್ನು ಮೂರ್ಖ ಎಂದು ಗಾದೆ ಸಾರುತ್ತದೆ. ನಾವು ಏನನ್ನಾದರೂ ಇತರರಿಗೆ ಕೊಡಬೇಕಾದರೆ ಮೊದಲು ಚೆನ್ನಾಗಿ ಚಿಂತನೆ ನಡೆಸಬೇಕು. 'ಅದು ಸಕಾಲಕ್ಕೆ ಹಿಂದಿರುಗಿ ಸಿಗಬಹುದೇ; ಪಡಕೊಂಡವನು ಅದನ್ನು ಸರಿಯಾಗಿ ಬಳಸಲು ಯೋಗ್ಯನೇ' ಇತ್ಯಾದಿ ವಿಚಾರಗಳ ಬಗ್ಗೆ ಗಮನ ಹರಿಸದೆ ಕೊಡಬಾರದು. ಕೊಟ್ಟರೆ ಜಾಣನಾದವನು ಅದನ್ನು ಹಿಂದಿರುಗಿಸದೆ ತನ್ನಲ್ಲೇ ಇಟ್ಟುಕೊಂಡು ಅದರ ಪ್ರಯೋಜನವನ್ನು ಪಡೆಯುವನು. ಆದುದರಿಂದ ನಮ್ಮಲ್ಲಿರುವ ವಸ್ತುವನ್ನು ಇನ್ನೊಬ್ಬರು ಕೇಳಿದ ಕೂಡಲೇ ಕೊಟ್ಟು ಬಿಡಬಾರದು. ಮಾತ್ರವಲ್ಲ ಕೆಲವೊಂದು ಸಂದರ್ಭಗಳಲ್ಲಿ ಹಿಂದೆ ಸಹಾಯ ಮಾಡಿದವರೋ, ಸಲಹೆ ನೀಡಿದವರೋ ಆಗಿರಬಹುದು ಹಾಗಂತ ನಮ್ಮಲ್ಲಿರುವುದನ್ನು ಕೊಡ ಬೇಕಾದರೆ ಜಾಗ್ರತೆ ವಹಿಸಬೇಕು ಎಂದು ಗಾದೆ ನಮಗೆ ಹಿತನುಡಿಯನ್ನು ಹೇಳುತ್ತದೆ.

ಈಗ ನೀವು ಒಂದೆರಡು ಗಾದೆಗಳನ್ನು ಆಯ್ದುಕೊಂಡು ವಿಸ್ತರಿಸಿ ಬರೆಯಿರಿ.

ಉದಾ:

ಜಾಣನಿಗೆ ಮಾತಿನ ಪೆಟ್ಟು, ಕೋಣನಿಗೆ ದೊಣ್ಣೆಯ ಪೆಟ್ಟು.

## ❑ ಪದ ಹುಡುಕಿ ಬರೆಯಿರಿ

- ಪಾಠದಲ್ಲಿ ಬಂದಿರುವ ವಸ್ತುಗಳು ಕೋಣೆಗಳಲ್ಲಿ ಅಡಗಿ ಕುಳಿತಿವೆ. ಅವುಗಳನ್ನು ಹುಡುಕಿ ಬರೆಯಿರಿ.

| | | | | | | | | |
|---|---|---|---|---|---|---|---|---|
| ಮ | ದಂ | ಣ್ಣ | ಲ | ಡಿ | ಹ | ಪಾ | ಟ್ಟಿ | ಗ |
| ಗೆ | ಅ | ಟ್ಟು | ಕ್ಕ | ಲು | ಬು | ಮ್ಯ | ರೆ | ಕೋ |
| ಸ | ಸು | ಪಾ | ಬೇ | ವು | ದ್ದು | ಕೆ | ಹಿ | ತ್ರೆ |

## ▫ ಸಂದರ್ಭ ತಿಳಿಸಿರಿ

- ಕೆಳಗಿನ ಮಾತುಗಳನ್ನು ಯಾರು, ಯಾರಿಗೆ, ಯಾವಾಗ, ಹೇಳಿದರು ಎಂಬುದನ್ನು ಬರೆಯಿರಿ.
    - "ಒಂದು ಪಾವು ಕಡಕೊಟ್ಟರೆ ಗಂಜಿನಾದರೂ ಕುದಿಸಿ ಕುಡಿಯಬಹುದು."
    - ಅದ್ಯಾಕೆ ಬಾಲಕ ಹೀಗೆ ನಮ್ಮೊಂದಿಗೆ ಓಡೋಡಿ ಬರುತ್ತಿದ್ದಾನೆ?
    - ಕೇಳಿದ್ದನ್ನೆಲ್ಲಾ ಕೊಡುತ್ತದೆಯೇ ಈ ಬುತ್ತಿ?
    - "ಮಗನೇ ಈ ಹಲಗೆ ತಗೊಂಡು ಟಾಂ... ಟಾಂ ಬಾರಿಸುತ್ತಾ ನಿನಗೆ ಅನ್ಯಾಯವಾದುದ್ದನ್ನು ಹೇಳಿ ನ್ಯಾಯ ಬೇಕಂತ ಜನರಲ್ಲಿ ಹೇಳಿಕೊ."

## ▫ ನಾಟಕ ರಚಿಸಿರಿ

- ಈ ಕಥೆಯನ್ನು ನಾಟಕರೂಪದಲ್ಲಿ ಬರೆದು ಸಾಹಿತ್ಯ ಸಭೆಯಲ್ಲಿ ಅಭಿನಯಿಸಿರಿ.

## ▫ ಸಂಧಿ ಬಿಂಗಡಿಸಿ ಬರೆಯಿರಿ

| ಪದಗಳು | ಬಿಂಗಡಣೆ | ಸಂಧಿ |
|---|---|---|
| ಮಳೆಗಾಲ | ಮಳೆ + ಕಾಲ | ಆದೇಶ |
| ಮನೆಯಲ್ಲಿ | | |
| ಹೊಲವನ್ನು | | |
| ಅವಳಿಗೊಂದು | | |
| ಊರುಗೋಲು | | |

# ರಾಷ್ಟ್ರಕವಿ ಗೋವಿಂದ ಪೈ

ವೈವಿಧ್ಯಮಯವಾದ ಸದಭಿರುಚಿಯ ಸಾಹಿತ್ಯಗಳ ಓದು ಮಾನವರನ್ನು ಪ್ರಬುದ್ಧರನ್ನಾಗಿಸುತ್ತವೆ. ಕನ್ನಡಾಂಬೆಯ ಮಡಿಲಿಗೆ ಶ್ರೇಷ್ಠ ಕೃತಿಗಳನ್ನಿತ್ತ ಮಹಾನುಭಾವರ ಸಾಧನೆಗಳು ನಮಗೆಲ್ಲ ದಾರಿದೀಪವಾಗಲಿ.

ತಾಯೆ ಬಾರೆ ಮೊಗವ ತೋರ ಕನ್ನಡಿಗರ ಮಾತೆಯೆ
ಹರಸು ತಾಯೆ ಸುತರ ಕಾಯೆ ನಮ್ಮ ಜನ್ಮ ದಾತೆಯೆ
ನಮ್ಮ ತಪ್ಪನೆನಿತೊ ತಾಳ್ದೆ
ಅಕ್ಕರೆಯಿಂದೆಮ್ಮನಾಳ್ದೆ
ನೀನೆ ಕಣಾ ನಮ್ಮ ಬಾಳ್ವೆ
ನಿನ್ನ ಮರೆಯಲಮ್ಮೆವು
ತನು ಕನ್ನಡ ಮನ ಕನ್ನಡ ನುಡಿ ಕನ್ನಡವೆಮ್ಮವು



ಈ ಕವನವನ್ನು ಬರೆದವರು ಯಾರು ಗೊತ್ತೇ? ಅವರೇ ನಮ್ಮ ಹೆಮ್ಮೆಯ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ. ಇವರು ಪ್ರಖ್ಯಾತ ಕವಿ, ಸಮರ್ಥ ಅನುವಾದಕ ಹಾಗೂ ಶ್ರೇಷ್ಠ ಸಂಶೋಧಕರು. ಹಾಗೂ ಮಹಾನ್ ಚಿಂತಕರಾಗಿದ್ದರು.

ಗೋವಿಂದ ಪೈಗಳು 1883 ಮಾರ್ಚ್ ತಿಂಗಳ 23ನೇ ತಾರೀಕಿನಂದು ಮಂಗಳೂರಿನಲ್ಲಿ ಜನಿಸಿದರು. ಅವರ ತಾಯಿ ದೇವಕಿ ಅಮ್ಮ, ತಂದೆ ತಿಮ್ಮ ಪೈ. ಗೋವಿಂದ ಪೈಗಳಿಗೆ ಮೂವರು ತಮ್ಮಂದಿರೂ, ಮೂವರು ತಂಗಿಯರೂ ಇದ್ದರು. ಮಾಳಪ್ಪ ಎಂಬ ಪ್ರೀತಿಯ ಹೆಸರೂ ಅವರಿಗಿತ್ತು.

ಅವರು ತಮ್ಮ ಬದುಕಿನ ಬಹುಭಾಗವನ್ನು ತಾಯಿಯ ತವರೂರಾದ ಮಂಜೇಶ್ವರದಲ್ಲಿ ಕಳೆದರು.

ಬಾಲ್ಯದಲ್ಲಿಯೇ ಪೈಗಳಿಗೆ ಸಾಹಿತ್ಯದಲ್ಲಿ ಬಹಳವಾದ ಆಸಕ್ತಿಯಿದ್ದಿತು. ಮಂಗಳೂರಿನಲ್ಲಿ ಶಾಲೆಗೆ ಹೋಗುತ್ತಿದ್ದ ಅವರು ರಜೆ ಬಂದಾಗಲೆಲ್ಲ ಮಂಜೇಶ್ವರದಲ್ಲಿದ್ದ ತನ್ನ ಅಜ್ಜಿಯ ಮನೆಗೆ ಬರುತ್ತಿದ್ದರು. ಜುಳು ಜುಳು ಹರಿಯುವ ನದಿ, ಸದಾ ಮೊರೆಯುತ್ತಿರುವ ಅರಬೀ ಸಮುದ್ರ, ಆ ಎಳೆಯ ಮನಸ್ಸಿಗೆ ಮುದ ನೀಡುತ್ತಿತ್ತು. ಬೇಸಗೆಯ ದಿನಗಳಲ್ಲಿ ಮಂಜೇಶ್ವರದಲ್ಲಿ ನಡೆಯುತ್ತಿದ್ದ ಯಕ್ಷಗಾನ ಬಯಲಾಟಗಳನ್ನು ಅವರು ಅಪಾರ ಆಸಕ್ತಿಯಿಂದ ನೋಡುತ್ತಿದ್ದರು. ಚೆಂಡೆ, ಮದ್ದಳೆ ಹಾಗು ಜಾಗಟೆಗಳ ನಿನಾದದೊಂದಿಗೆ ಭಾಗವತರ ಹಾಡು ಅವರನ್ನು ಪುರಾಣ ಲೋಕಕ್ಕೆ ಕೊಂಡೊಯ್ಯುತ್ತಿದ್ದಿತು.

ಗೋವಿಂದ ಪೈಗಳು ಪ್ರೌಢ ಶಾಲೆಯಲ್ಲಿ ಶಿಕ್ಷಣ ಪಡೆಯುತ್ತಿದ್ದಾಗಲೇ ಕವನಗಳನ್ನು ಬರೆಯಲು ತೊಡಗಿದರು. ಜೈಮಿನಿ ಭಾರತ ಗದುಗಿನ ಭಾರತ ಮುಂತಾದ ಮಹಾಕಾವ್ಯಗಳನ್ನು ಓದಿ ಅವುಗಳಲ್ಲಿ ಪ್ರಯೋಗವಾಗಿರುವ ವಿವಿಧ ಛಂದಸ್ಸುಗಳನ್ನು ಅಭ್ಯಾಸ ಮಾಡಿದರು. ಆ ಮಾದರಿಗಳಲ್ಲಿ ಕವಿತೆಗಳನ್ನು ರಚಿಸಲಾರಂಭಿಸಿದರು.

ಒಮ್ಮೆ ಸ್ವಾರಸ್ಯಕರವಾದ ಒಂದು ಪ್ರಸಂಗ ಜರಗಿತು. ಪೈಗಳು ಕವನ ರಚನೆ ಮಾಡುತ್ತಿದ್ದ ವಿಷಯ ಅವರ ಹೆತ್ತವರಿಗೆ ಮೊದಲು ತಿಳಿದಿರಲಿಲ್ಲ. ಒಂದು ದಿನ ಅಣ್ಣತಮ್ಮಂದಿರೊಳಗೆ ಜಗಳ ಹತ್ತಿ ಮಾಳಪ್ಪ ಕವನ ಬರೆಯುತ್ತಿದ್ದ ವಿಷಯವನ್ನು ಯಾರೋ ತಾಯಿಗೆ ದೂರು ಹೇಳಿದರು. ಕವನ ಬರೆದರೆ ಹುಚ್ಚು ಹಿಡಿಯುತ್ತದೆಯೆಂದು ದೇವಕಿಯಮ್ಮ ನಂಬಿದ್ದರು. ಪದ್ಯ ಬರೆಯುವ ಗೀಳು ಬಿಡಿಸುವುದಕ್ಕಾಗಿ ಮಾಳಪ್ಪನಿಗೆ ಆ ದಿನ ಸರಿಯಾದ ದಂಡನೆಯಾಯಿತು. ಆದರೂ ಗೋವಿಂದ ಪೈಯವರು ದಾರಿಯಲ್ಲೋ, ಶಾಲೆಯಲ್ಲಿ ಬಿಡುವಾದಾಗಲೋ ಕವಿತೆಗಳನ್ನು ಬರೆಯುತ್ತಿದ್ದರು.

ಗೋವಿಂದ ಪೈಗಳು ಪ್ರಖ್ಯಾತ ಸಾಹಿತಿಗಳಾಗಿದ್ದ ಪಂಜೆ ಮಂಗೇಶರಾಯರ ಶಿಷ್ಯರಾಗಿದ್ದರು. ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಕವಿಗಳಾದ ಬಿ. ವಾಮನ ಬಾಳಿಗ ಮತ್ತು ಎಂ.ಎನ್.ಕಾಮತರು ಅವರ ಕನ್ನಡ ಅಧ್ಯಾಪಕರಾಗಿದ್ದರು. ಇವರೆಲ್ಲರೂ ಪೈಗಳ ಮೇಲೆ ಪ್ರಭಾವ ಬೀರಿದ್ದರು. ಅವರ ಪ್ರೌಢ ಶಿಕ್ಷಣ ಕೆನರಾ ಹೈಸ್ಕೂಲಿನಲ್ಲೂ ಇಂಟರ್ ಮೀಡಿಯೇಟ್ ಶಿಕ್ಷಣ ಮಂಗಳೂರಿನ ಸರಕಾರಿ ಕಾಲೇಜಿನಲ್ಲಿಯೂ ನಡೆಯಿತು. ಮುಂದೆ ಮದರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಬಿ.ಎ.ಪದವಿಗೆ ಸೇರಿದರು. ಆದರೆ ತಂದೆಯವರ ಅನಾರೋಗ್ಯದ ಕಾರಣದಿಂದ ವ್ಯಾಸಂಗವನ್ನು ಅರ್ಧಕ್ಕೆ ನಿಲ್ಲಿಸಿ ಊರಿಗೆ ಹಿಂದಿರುಗಿದರು.

ಊರಿಗೆ ಮರಳಿದ ಪೈಗಳು ಮಂಜೇಶ್ವರದಲ್ಲಿ ನೆಲೆನಿಂತರು. ಈಗ ಅವರ ಸಾಹಿತ್ಯಾಭ್ಯಾಸಕ್ಕೆ ಅನುಕೂಲಕರವಾದ ವಾತಾವರಣ ಲಭಿಸಿತು. ಕೃಷ್ಣಾಬಾಯಿ ಎಂಬವರೊಂದಿಗೆ ಅವರ ವಿವಾಹ ನಡೆಯಿತು. ನಿತ್ಯ ಜೀವನದ ಅನುಭವಗಳು, ವಿವಿಧ ಭಾಷೆ ಗಳ ಮಹಾಗ್ರಂಥಗಳ ಅಧ್ಯಯನ ಅವರನ್ನು ಕನ್ನಡ ಸಾಹಿತ್ಯದ ಬಹುದೊಡ್ಡ ವಿದ್ವಾಂಸರನ್ನಾಗಿ ಬೆಳೆಸಿತು.

1904ರ ಹೊತ್ತಿಗೆ ಅವರು ಕವಿತಾ ರಚನೆಯಲ್ಲಿ ಕುಶಲರೆನಿಸಿದ್ದರು. ಅವರ ಮೊದಲ ಕವನ ಮಂಗಳೂರಿನ 'ಸುವಾಸಿನಿ' ಪತ್ರಿಕೆಯಲ್ಲಿ ಪ್ರಕಟವಾಗಿದ್ದಿತು.

ಸ್ವಾತಂತ್ರ್ಯ ಹೋರಾಟದಲ್ಲಿಯೂ ಪೈಗಳು ಭಾಗವಹಿಸಿದರು. ಹಿರಿಯ ಹೋರಾಟಗಾರ ಕಾಕಾ ಕಾಲೇಲ್ಕರ್ ಅವರ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಸದಸ್ಯರಾಗಿ ಅದರ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಭಾಗಿಯಾದರು. ಅದಕ್ಕಾಗಿ ಅವರು ನೌಸಾರಿಗೆ ಪ್ರಯಾಣ ಬೆಳೆಸಿದರು. ಆದರೆ ಪತ್ನಿಯ ಅಸೌಖ್ಯದ ನಿಮಿತ್ತ ಅವರು ತಮ್ಮ ಕಾರ್ಯಕ್ಷೇತ್ರವಾದ ಬರೋಡಾವನ್ನು ಬಿಟ್ಟು ಊರಿಗೆ ಮರಳಬೇಕಾಯಿತು.

1925ರಲ್ಲಿ ಅವರ ಪತ್ನಿ ತೀರಿ ಹೋದರು. ಗೃಹಸ್ಥ ಜೀವನದಿಂದ ಅವರ ಬದುಕು ದೂರವಾಯಿತು; ಸಾಹಿತ್ಯಾಭ್ಯಾಸಕ್ಕೆ ಅವರ ಜೀವನ ಮುಡಿಪಾಯಿತು.

ಒಮ್ಮೆ ಕಾಲೇಲ್ಕರ್ ಅವರು ದಕ್ಷಿಣ ಕನ್ನಡಕ್ಕೆ ಬಂದರು.



ಆ ಸಂದರ್ಭದಲ್ಲಿ ಅವರು ತಮ್ಮ ಹಳೆಯ ಜತೆಗಾರ ಪೈಯವರ ಮನೆಯಲ್ಲಿ ಒಂದು ದಿನ ತಂಗಿದ್ದರು. ಅದರ ಸವಿನೆನಪಿಗಾಗಿ ಪೈಗಳು ತಮ್ಮ ಹಿರಿಯರು ಉಪಯೋಗಿಸುತ್ತಿದ್ದ ಊರುಗೋಲನ್ನು ಕಾಲೇಲ್ಕರ್ ಅವರಿಗೆ ಕಾಣಿಕೆಯಾಗಿ ಕೊಟ್ಟರು. ಆ ಊರುಗೋಲನ್ನು ಮುಂದೆ ದಂಡಿಯಾತ್ರೆಯ ಸಂದರ್ಭದಲ್ಲಿ ಕಾಲೇಲ್ಕರ್ ಅವರು ಮಹಾತ್ಮಾ ಗಾಂಧಿಯವರಿಗೆ ನೀಡಿದರು. ಇಂದು ಆ ಊರುಗೋಲು ಗಾಂಧೀಜಿ ಬಳಸಿದ ವಸ್ತುಗಳು ಇರುವ ಸಂಗ್ರಹಾಲಯದಲ್ಲಿದೆ.

ಗೋವಿಂದ ಪೈಗಳ ಸಾಹಿತ್ಯ ಸೇವೆಯನ್ನು ಮನ್ನಿಸಿ ಮದರಾಸು ಸರಕಾರವು 1949 ರಲ್ಲಿ ಅವರಿಗೆ 'ರಾಷ್ಟ್ರಕವಿ' ಬಿರುದನ್ನು ನೀಡಿ ಗೌರವಿಸಿತು. ಆ ಪ್ರಶಸ್ತಿಯನ್ನು ಸ್ವೀಕರಿಸುವಾಗಲೂ ಪೈಗಳು ತಮ್ಮ ಸದ್ಗುಣವನ್ನು ಮೆರೆದರು. ತಮ್ಮ ಜತೆಗಿನ ಇತರ ಪುರಸ್ಕೃತರನ್ನು ಮೊದಲು ಪ್ರಶಸ್ತಿ ಸ್ವೀಕರಿಸಲು ವೇದಿಕೆಗೆ ಕಳುಹಿಸಿ ತಾವು ಕೊನೆಯದಾಗಿ ಅದನ್ನು ಸ್ವೀಕರಿಸಿದರು. ಪ್ರಶಸ್ತಿಯ ಜತೆಗೆ ದೊರೆತ ಹಣವನ್ನು ಸಾರ್ವಜನಿಕ ಸೇವಾ ಕಾರ್ಯಗಳಿಗೆ ದೇಣಿಗೆ ನೀಡಿದರು.

1951ರಲ್ಲಿ ಮುಂಬಯಿಯಲ್ಲಿ ಜರಗಿದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ಪೈಗಳು ಅಲಂಕರಿಸಿದರು. ಅದು ಅವರ ಸಾಹಿತ್ಯ ಸೇವೆಗೆ ಸಂದ ಮತ್ತೊಂದು ಗೌರವವಾಗಿದೆ.

ಗೋವಿಂದ ಪೈಗಳು ತಮ್ಮ ಜೀವನವನ್ನು ಪೂರ್ಣವಾಗಿ ಸಾಹಿತ್ಯ ಸೇವೆಯಲ್ಲಿ ಕಳೆದರು. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಅವರು ಕೃತಿ ರಚನೆ ಮಾಡಿದ್ದಾರೆ. ಅವರ 'ಗಿಳಿವಿಂಡು', 'ನಂದಾದೀಪ' ಮತ್ತು 'ಹೃದಯರಂಗ'ಎಂಬ ಕವನ

ಸಂಗ್ರಹಗಳು ಪ್ರಕಟವಾಗಿವೆ. 'ಚಿತ್ರಭಾನು ಅಥವಾ 1942' ಮತ್ತು 'ಹೆಬ್ಬೆರಳು' ಅವರು ಬರೆದ ನಾಟಕಗಳು. ಜಪಾನಿ ಭಾಷೆಯ 'ನೋ' ನಾಟಕಗಳನ್ನು ಅವರು ಅನುವಾದಿಸಿದ್ದಾರೆ; 'ಕನ್ನಡದ ಮೊರೆ' ಎಂಬ ಲೇಖನ ಸಂಕಲನವನ್ನೂ 'ಗೋಲ್ಗೊಥಾ', 'ವೈಶಾಖಿ', 'ಪ್ರಭಾಸ', 'ದೆಹಲಿ' ಎಂಬ ಖಂಡ ಕಾವ್ಯಗಳನ್ನೂ ಬರೆದಿದ್ದಾರೆ. ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿನ ಅವರ ಸಂಶೋಧನಾ ಲೇಖನಗಳು ಬೃಹತ್ ಸಂಪುಟಗಳಾಗಿ ಈಗ ಪ್ರಕಟಗೊಂಡಿವೆ.

ಸುತ್ತುಮುತ್ತಲಿನ ಮಕ್ಕಳಿಗೆಲ್ಲ ಅವರು ಪ್ರೀತಿಯ 'ಗೋವಿಂದ ಮಾಮಾ'. ತಮ್ಮ ಹುಟ್ಟು ಹಬ್ಬಕ್ಕೆ ದೇವರ ಪ್ರಸಾದವನ್ನೂ ತಿಂಡಿಯನ್ನೂ ತುಂಬು ಮನಸ್ಸಿನ ಆಶೀರ್ವಾದವನ್ನೂ ಕೊಡುತ್ತಿದ್ದ ಮಾಮನೆಂದರೆ ಅವರಿಗೆಲ್ಲ ತುಂಬ ಅಕ್ಕರೆ.

ಗೋವಿಂದ ಪೈಗಳೆಂದರೆ ನಡೆದಾಡುವ 'ವಿಶ್ವಕೋಶ'ವಿದ್ದ ಹಾಗೆ. ಅವರು ಸುಮಾರು 22 ಭಾಷೆಗಳನ್ನು ಬಲ್ಲವರಾಗಿದ್ದರು. ಜಗತ್ತಿನ ಎಲ್ಲ ವಿಷಯಗಳನ್ನು ತಿಳಿದುಕೊಳ್ಳುವ ಅದಮ್ಯ ಕುತೂಹಲ ಅವರಿಗಿತ್ತು. ಅವರು ಎಷ್ಟು ದೊಡ್ಡವರೋ ಅಷ್ಟೇ ಸರಳ ವ್ಯಕ್ತಿಯೂ ಆಗಿದ್ದರು. ಆಸಕ್ತರು ಕೇಳಿದ ಪ್ರಶ್ನೆಗಳಿಗೆ ಅವರು ಆಳವಾಗಿ ಚಿಂತಿಸಿ ಉತ್ತರ ಕೊಡುತ್ತಿದ್ದರು. ಸಾಮಾನ್ಯವಾಗಿ ನೇರಳೆ ಬಣ್ಣದ ಶಾಯಿಯನ್ನು ಬಳಸಿ ಅಂಚೆ ಕಾರ್ಡಿನಲ್ಲಿ ಅವರು ಪತ್ರ ಬರೆಯುತ್ತಿದ್ದರು.

ದೊರಗು ಖಾದಿಯ ಅಗಲ ಕಿರಿದಾದ ಪಂಚೆ, ಅಂಥದೇ ಬಟ್ಟೆಯ ತುಂಡುಕೈಯ ಅಂಗಿ, ತಲೆಯ ಮೇಲೆ ಒರಟು ಬಿಳಿಗೂದಲು; ಮುಖದಲ್ಲಿ ಬಿಳಿಯ ಬೆಳ್ಳಿ ಮೀಸೆ, ಅಷ್ಟೇನೂ ಎತ್ತರವಿಲ್ಲದ ಶರೀರ – ಇದು ಗೋವಿಂದ ಪೈಗಳ ಬಾಹ್ಯ ರೂಪ.

ಗೋವಿಂದ ಪೈಗಳು ಸ್ವಂತ ಗ್ರಂಥ ಭಂಡಾರವೊಂದನ್ನು ಮನೆಯಲ್ಲಿಯೇ ಮಾಡಿಕೊಂಡಿದ್ದರು. ಅದರಲ್ಲಿ ಕನ್ನಡ, ಇಂಗ್ಲಿಷ್ ಮೊದಲಾದ ಸುಮಾರು ನಲುವತ್ತು ಭಾಷೆಗಳ 4334 ಗ್ರಂಥಗಳಿದ್ದವು. ಅವೆಲ್ಲವೂ ಈಗ ಉಡುಪಿಯಲ್ಲಿರುವ ರಾಷ್ಟ್ರಕವಿ 'ಗೋವಿಂದ ಪೈ ಸಂಶೋಧನ ಕೇಂದ್ರದಲ್ಲಿದೆ'.

ಎಂಬತ್ತೊಂದು ವರ್ಷಗಳ ತುಂಬು, ಸಾರ್ಥಕ ಜೀವನ ನಡೆಸಿದ ಗೋವಿಂದ ಪೈಗಳು 1963 ಇಸವಿ ಸೆಪ್ಟೆಂಬರ್ ತಿಂಗಳ 3 ರಂದು ಇಹಲೋಕ ಯಾತ್ರೆಯನ್ನು ಮುಗಿಸಿದರು. ಆ ಮಹಾವ್ಯಕ್ತಿ ಬದುಕಿ ಬಾಳಿ, ಸಾಹಿತ್ಯ ಸಾಧನೆ ನಡೆಸಿದ ಮನೆ ಈಗಲೂ ಮಂಜೇಶ್ವರದಲ್ಲಿದೆ. ಅದು 'ಗೋವಿಂದ ಪೈ ಸ್ಮಾರಕ'ವೆಂಬ ಹೆಸರಿನಿಂದ ಇಂದು ನಮಗೆಲ್ಲ ಪವಿತ್ರ ಕ್ಷೇತ್ರವೆನಿಸಿದೆ. ಅವರ ಸ್ಮರಣೆಗಾಗಿ ಕೇರಳ ಸರಕಾರವು ಮಂಜೇಶ್ವರದಲ್ಲಿ ಗೋವಿಂದ ಪೈ ಸ್ಮಾರಕ ಕಾಲೇಜನ್ನು ಸ್ಥಾಪಿಸಿದೆ. ಹೀಗೆ ರಾಷ್ಟ್ರಕವಿ ಗೋವಿಂದ ಪೈಗಳ ಹೆಸರು ಸಾಹಿತ್ಯ ರೂಪದಲ್ಲೂ ಸ್ಮಾರಕ ರೂಪದಲ್ಲೂ ಚಿರಸ್ಥಾಯಿಯಾಗಿದೆ.

## ಚಟುವಟಿಕೆಗಳು

### ❑ ಪ್ರಶ್ನೆಗಳನ್ನು ಉತ್ತರಿಸಿರಿ

- ಗೋವಿಂದ ಪೈಗಳ ಬಾಲ್ಯದಲ್ಲಿ ನಡೆದ ಸ್ವಾರಸ್ಯಕರ ಪ್ರಸಂಗ ಯಾವುದು?
- ಗೋವಿಂದ ಪೈಗಳು ರಚಿಸಿದ ಕೃತಿಗಳು ಯಾವುವು?
- ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಅವರು ರಾಷ್ಟ್ರಕವಿ ಪ್ರಶಸ್ತಿ ಪಡೆದ ಸಂದರ್ಭದಲ್ಲಿ ನಡೆದುಕೊಂಡ ರೀತಿ ಹೇಗೆ?

### ❑ ಆತ್ಮಕಥೆಯಾಗಿ ಬರೆಯಿರಿ

'ಸ್ವಾತಂತ್ರ್ಯ ಹೋರಾಟದಲ್ಲಿಯೂ ಪೈಗಳು ಭಾಗವಹಿಸಿದರು. ಹಿರಿಯ ಹೋರಾಟಗಾರ ಕಾಕಾ ಕಾಲೇಲ್ಕರ್ ಅವರ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಸದಸ್ಯರಾಗಿ ಅದರ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಭಾಗಿಯಾದರು. ಅದಕ್ಕಾಗಿ ಅವರು ನೌಸಾರಿಗೆ ಪ್ರಯಾಣ ಬೆಳೆಸಿದರು. ಆದರೆ ಪತ್ನಿಯ ಅಸೌಖ್ಯದ ನಿಮಿತ್ತ ಅವರು ತಮ್ಮ ಕಾರ್ಯಕ್ಷೇತ್ರವಾದ ಬರೋಡಾವನ್ನು ಬಿಟ್ಟು ಊರಿಗೆ ಮರಳಬೇಕಾಯಿತು.' ಎಂಬ ಭಾಗವನ್ನು ಆತ್ಮಕಥೆಯಾಗಿ ಹೀಗೆ ಬರೆಯಬಹುದು.

ನಾನೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದೆ. ಹಿರಿಯ ಹೋರಾಟಗಾರ ಕಾಕಾ ಕಾಲೇಲ್ಕರ್ ಅವರ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಸದಸ್ಯನಾಗಿ ಅದರ ಕ್ರಾಂತಿಕಾರಿ ಚಟುವಟಿಕೆಗಳಲ್ಲಿ ಭಾಗಿಯಾದೆನು. ಅದಕ್ಕಾಗಿ ನಾನು ನೌಸಾರಿಗೆ ಪ್ರಯಾಣ ಬೆಳೆಸಿದೆನು. ಆದರೆ ಪತ್ನಿಯ ಅಸೌಖ್ಯದ ನಿಮಿತ್ತ ನಾನು ನನ್ನ ಕಾರ್ಯಕ್ಷೇತ್ರವಾದ ಬರೋಡಾವನ್ನು ಬಿಟ್ಟು ಊರಿಗೆ ಮರಳ ಬೇಕಾಯಿತು.

ಇದೇ ರೀತಿ ನೀವು ಪಾಠದಿಂದ ನಿಮಗಿಷ್ಟವಾದ ಎರಡು ಭಾಗಗಳನ್ನು ಆಯ್ದುಕೊಂಡು ಆತ್ಮಕಥೆಯಾಗಿ ಬರೆಯಿರಿ.

## ❑ ವ್ಯಕ್ತಿ ಪರಿಚಯ ಬರೆಯಿರಿ

ಒಬ್ಬ ಪ್ರಸಿದ್ಧ ಕವಿಯ ಮಾಹಿತಿಯನ್ನು ಕೆಳಗೆ ಕೊಡಲಾಗಿದೆ. ಅದರ ಆಧಾರದಲ್ಲಿ ಅವರ ವ್ಯಕ್ತಿಪರಿಚಯ ಬರೆಯಿರಿ.

| | | |
|---|---|---|
| ಹೆಸರು | : | ಡಾ। ಶಿವರಾಮ ಕಾರಂತ |
| ಜನನ ದಿನಾಂಕ | : | 10.10. 1902 |
| ಜನ್ಮಸ್ಥಳ | : | ಉಡುಪಿ ಸಮೀಪದ ಕೋಟ |
| ತಂದೆ | : | ಶೇಷ ಕಾರಂತ |
| ತಾಯಿ | : | ಲಕ್ಷ್ಮಿಅಮ್ಮ |
| ಸಾಧನೆಗಳು | : | ಸಾಹಿತ್ಯ ರಚನೆ, ಮಕ್ಕಳ ಶಿಕ್ಷಣ, ಚಲನಚಿತ್ರ ನಿರ್ಮಾಪಕ. |
| ಪ್ರಧಾನ ಕೃತಿಗಳು | : | ಅದ್ಭುತಜಗತ್ತು, ಬಾಲಪ್ರಪಂಚ, ಮರಳಿಮಣ್ಣಿಗೆ, ಬೆಟ್ಟದ ಜೀವ, ಬತ್ತದ ತೊರೆ, ಕುಡಿಯರ ಕೂಸು, ಚೋಮನದುಡಿ, ಮೂಕಜ್ಜಿಯ ಕನಸುಗಳು. |
| ಸಂದ ಪ್ರಶಸ್ತಿಗಳು | : | ಜ್ಞಾನಪೀಠ ಪ್ರಶಸ್ತಿ, ಪಂಪಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ. |
| ನಿಧನ | : | 9.12.1997. |

## ❑ ಗದ್ಯ ರಚಿಸಿರಿ

- ಅಡಿಗೆರೆ ಎಳೆದ ಪದಗಳ ಪರ್ಯಾಯ ಪದವನ್ನು ಉಪಯೋಗಿಸಿಕೊಂಡು ಬೇರೊಂದು ಗದ್ಯಭಾಗವನ್ನು ರಚಿಸಿರಿ.

ತೆಳ್ಳಗಿನ ಶರೀರದವರಾಗಿದ್ದ ಆನಂದರಾಯರು ತುಂಬ ಹಾಸ್ಯ ಪ್ರಿಯರಾಗಿದ್ದರು. ಬಾಲ್ಯದಲ್ಲಿಯೇ ಅವರಿಗೆ ಪುಸ್ತಕಗಳನ್ನು ಓದುವುದರಲ್ಲಿ ಆಸಕ್ತಿ. ಆದುದರಿಂದ ಉನ್ನತ ಮಟ್ಟದ ವರೆಗೆ ವ್ಯಾಸಂಗ ಮಾಡಲು ಸಾಧ್ಯವಾಯಿತು. ಈ ಮಧ್ಯೆ ಹಾಸ್ಯಚಟಾಕಿ ಹಾರಿಸಿ ಬಂದವರೆಲ್ಲ ಮುದಗೊಳ್ಳುವಂತೆ ಮಾಡುತ್ತಿದ್ದರು. ನೆಂಟರಿಗೆ ಪತ್ರ ಬರೆಯುವಾಗಲೂ ಅವರ ಹಾಸ್ಯ ಪ್ರಜ್ಞೆ ಎಚ್ಚರದಿಂದ ಇರುತ್ತಿತ್ತು. ಜೊತೆಗೆ ಚಿಕ್ಕ ಚಿಕ್ಕ ಕವಿತೆಗಳನ್ನೂ ಬರೆಯುತ್ತಿದ್ದರು. ಸದ್ಯ ಸ್ವರ್ಗಸ್ಥರಾಗಿರುವ ಆನಂದರಾಯರ ಸ್ಮರಣೆಗಾಗಿ ಸಭಾಭವನ ನಿರ್ಮಾಣಗೊಂಡಿದೆ.

## ❑ ಕಾವ್ಯನಾಮ ಬರೆಯಿರಿ

- ಕನ್ನಡ ಪ್ರಸಿದ್ಧಕವಿಗಳ ಹೆಸರು ಮತ್ತು ಕಾವ್ಯನಾಮವನ್ನು ಸಂಗ್ರಹಿಸಿ ಬರೆಯಿರಿ.

ಉದಾ:

- ನಾಡೋಜ ಡಾ। ಕಯ್ಯಾರ ಕಿಞ್ಞಣ್ಣ ರೈ–ದುರ್ಗಾದಾಸ.
- 
- 
- 

## ಕಲಿಕಾ ಸಾಧನೆಗಳು

- ಕಥೆ, ಕವಿತೆಗಳನ್ನು ಸೂಕ್ತವಾದ ಭಾವಾಭಿವ್ಯಕ್ತಿಯೊಂದಿಗೆ ಮಂಡಿಸುವುದು.
- ಕಥೆ, ಕವಿತೆ, ನಾಟಕ ಮೊದಲಾದ ಸೃಜನಾತ್ಮಕ ರಚನೆಗಳ ರಚನಾ ರೀತಿ, ಔಚಿತ್ಯ, ವೈವಿಧ್ಯ ಮೊದಲಾದವುಗಳನ್ನು ಪರಿಗಣಿಸಿಕೊಂಡು ಸ್ವಂತ ದೃಷ್ಟಿಕೋನಕ್ಕನುಸಾರವಾಗಿ ಆಸ್ವಾದಿಸಿ, ವಾಚಿಕವಾಗಿ ಮಂಡಿಸುವುದು ಮತ್ತು ಬರೆದು ಮಂಡಿಸುವುದು.
- ಜನಪದ ಗೀತೆ, ಕವಿತೆಗಳಲ್ಲಿರುವ ತಾಳವೈವಿಧ್ಯಗಳನ್ನು ಗುರುತಿಸಿ, ಕಂಠಪಾಠಮಾಡಿ ಸೂಕ್ತ ತಾಳದೊಂದಿಗೆ ಹಾಡುವುದು.
- ವಿಷಯ ಮತ್ತು ಸಂದರ್ಭಕ್ಕೆ ಸೂಕ್ತವಾದ ಪದಗಳು, ಪ್ರಯೋಗಗಳು, ಶೈಲಿಗಳು ಎಂಬಿತ್ಯಾದಿಗಳನ್ನು ಸಂಭಾಷಣೆಯಲ್ಲಿ ಮತ್ತು ಬರವಣಿಗೆಯಲ್ಲಿ ಅಳವಡಿಸುವುದು.
- ಪದ ಶುದ್ಧಿ, ವಾಕ್ಯ ಶುದ್ಧಿ, ಲೇಖನ ಚಿಹ್ನೆ, ಪಾರಾ ಮೊದಲಾದ ಭಾಷಾ ನಿಯಮಗಳನ್ನು ಪಾಲಿಸಿಕೊಂಡು ರಚನೆಗಳನ್ನು ಉತ್ತಮಪಡಿಸುವುದು.
- ಮೌಲ್ಯನಿರ್ಣಯ ಸೂಚಕಗಳನ್ನು ಸ್ವಯಂ ಕಂಡುಕೊಂಡು ತನ್ನ ಮತ್ತು ಇತರರ ರಚನೆಗಳ ಮೌಲ್ಯನಿರ್ಣಯ ಮಾಡುವುದು.
- ಪರಿಚಿತವಾದ ಕವಿತೆಗಳಲ್ಲಿರುವ ಚಮತ್ಕಾರ, ಬಿಂಬಕಲ್ಪನೆ, ವರ್ಣನೆ ಎಂಬಿವುಗಳನ್ನು ಗುರುತಿಸಿ, ವಿಶ್ಲೇಷಿಸಿ, ಆಸ್ವಾದನ ಟಿಪ್ಪಣಿ, ತೌಲನಿಕ ಟಿಪ್ಪಣಿ, ವರ್ಣನೆ ಎಂಬಿತ್ಯಾದಿಗಳನ್ನು ರಚಿಸುವುದು.
- ಪಾಠಭಾಗಗಳಿಂದ ಆರ್ಜಿಸಿದ ಭಾಷಾಪರವೂ ಆಶಯಪರವೂ ಆದ ಸಾಮರ್ಥ್ಯಗಳನ್ನು ಉಪಯೋಗಿಸಿಕೊಂಡು ಸ್ವತಂತ್ರವಾದ ಸೃಜನಾತ್ಮಕ ರಚನೆಗಳನ್ನು ಮಾಡುವುದು.
- ತಾವು ಓದಿದ ಬೇರೆ ಬೇರೆ ಬರಹಗಾರರ ಕೃತಿಗಳ ಸಹಾಯದಿಂದ ವಿಭಿನ್ನ ಕಾಲಘಟ್ಟದ ಬರಹಗಾರರ ಭಾಷೆ, ಸಂಸ್ಕೃತಿ ಇತ್ಯಾದಿಗಳನ್ನು ವಿಶ್ಲೇಷಣೆ ಮಾಡುವುದು.
- ತನ್ನ ಅಭಿರುಚಿಗೆ ಹೊಂದಿಕೆಯಾಗುವ ಪುಸ್ತಕಗಳನ್ನು ಓದಿ ಅನುಭವಗಳನ್ನು ವಿಭಿನ್ನವಾಗಿ ಆವಿಷ್ಕರಿಸುವುದು.

# ಅರ್ಥಕೋಶ

ಅ

ಅಕಸ್ಮಾತ್ – ಇದ್ದಕ್ಕಿದ್ದಂತೆ, ಹಠಾತ್ತಾಗಿ

ಅಕ್ಕರೆ – ಪ್ರೀತಿ

ಅಗ್ರಮಾನ್ಯ – ಪ್ರಮುಖ, ಶ್ರೇಷ್ಠ

ಅಚ್ಚರಿ – ಆಶ್ಚರ್ಯ

ಅಡವಿಡು – ಒತ್ತೆಯಿಡು

ಅನಾಥ – ದಿಕ್ಕಿಲ್ಲದವನು

ಅನಿವಾರ್ಯ – ಅವಶ್ಯಕ, ತಪ್ಪಿಸಲಾಗದ

ಅನುಗ್ರಹ – ಕೃಪೆ, ದಯೆ

ಅನುಪಮ – ಅಸಮಾನವಾದ, ಹೋಲಿಕೆಗೆ ಮೀರಿದ, ಶ್ರೇಷ್ಠ

ಅಪಕಾರ – ಕೆಡುಕು

ಅಪರಂಜಿ – ಚೊಕ್ಕಚಿನ್ನ. ಅತ್ಯುತ್ತಮ

ಅಪಾಯ – ಕೇಡು, ಹಾನಿ

ಅಪ್ಪಣೆ – ಆಜ್ಞೆ

ಅಪೂರ್ವ – ಹಿಂದೆಂದೂ ಕಾಣದ, ಶ್ರೇಷ್ಠವಾದ

ಅಬ್ಬೆ – ತಾಯಿ, ಅಮ್ಮ

ಅರಸು – ದೊರೆ, ರಾಜ

ಅರಿವು – ತಿಳುವಳಿಕೆ, ಪ್ರಜ್ಞೆ

ಅವಿನಾಭಾವ – ಒಂದನ್ನೊಂದು ಅಗಲದೆ ಇರುವುದು

ಅವಿಭಾಜ್ಯ – ವಿಭಾಗಿಸಲು ಆಗದ, ತುಂಡರಿಸಲಾಗದ

ಅಶಕ್ಯ – ಸಾಧ್ಯವಾಗದ, ಮಾಡಬಾರದ

ಅಸಹಜ – ಕೃತಕವಾದ

ಅಸುನೀಗು – ಸಾಯು, ಮರಣಹೊಂದು

ಅಸೂಯೆ – ಹೊಟ್ಟೆಕಿಚ್ಚು

ಅಳಿದವರು – ನಾಶವಾದವರು

ಆ

ಆಧುನಿಕತೆ – ಹೊಸತನ

ಆಶ್ರಯತಾಣ – ವಸತಿಸ್ಥಳ

ಆಳ – ಗಾಢತೆ

ಇ

ಇಣುಕು – ಮರೆಯಲ್ಲಿ ನಿಂತು ನೋಡು

ಇನಿಸು – ಇಷ್ಟು, ಸ್ವಲ್ಪ

ಇಳೆ – ಭೂಮಿ

ಉ

ಉತ್ಪತ್ತಿ – ಜನನ, ಹುಟ್ಟುವಳಿ

ಉದ್ಯುಕ್ತ – ತೊಡಗಿದ

ಉದ್ಯಮ – ಉದ್ಯೋಗ

ಉಪವನ – ಉದ್ಯಾನ

ಉಲ್ಕೆ – ಆಕಾಶದಿಂದ ಬೀಳುವ ತೇಜಃ ಪುಂಜವಾದ ಒಂದು ವಸ್ತು

ಋ

ಋಣ – ಸಾಲ, ಹಂಗು

ಒ

ಒಡನೆ – ಕೂಡಲೇ, ಜೊತೆಯಲ್ಲಿ

ಒಡಲುರಿ – ದುಃಖ, ಹೊಟ್ಟೆಕಿಚ್ಚು

ಒಡೆಯ – ಯಜಮಾನ

ಕ

ಕಗ್ಗತ್ತಲೆ – ದಟ್ಟವಾದ ಕತ್ತಲು

ಕಡವರ – ಹೂಳಿಟ್ಟ ನಿಧಿ, ಚಿನ್ನ

ಕಣಜ – ಧಾನ್ಯ ಸಂಗ್ರಹಾಗಾರ

ಕಪೋಲ – ಕೆನ್ನೆ

ಕರುಣೆ – ಮರುಕ, ಕನಿಕರ

ಕಲುಷಿತ – ಕದಡಿದ

ಕಶ್ಮಲ – ಕೊಳೆ, ಪಾಪ

ಕಾತರ – ಕಳವಳ, ಉತ್ಸುಕತೆ

ಕಾಲಾಂತರ – ಕಾಲಾನುಕ್ರಮ

ಕಾಯಕ – ಕೆಲಸ

ಕಾಯಿಲೆ – ರೋಗ

ಕಿರಣ – ರಶ್ಮಿ

ಕುಗ್ಗು – ಚಿಕ್ಕದಾಗು

ಕೃತಜ್ಞತೆ – ಉಪಕಾರ ಸ್ಮರಣೆ

ಕೆಡು – ಹಾಳಾಗು, ಇಲ್ಲವಾಗು

ಕೈವಾಡ – ಕೈಚಳಕ

ಕೊಠಡಿ – ಕೋಣೆ

ಕೊರತೆ – ದೋಷ

ಕೊಳೆ – ಕೆಟ್ಟು ನಾರು

ಕಂತೆ – ಕಟ್ಟು, ಚಿಂದಿಬಟ್ಟೆ

ಕ್ಷಣಾರ್ಧ – ಸ್ವಲ್ಪಕಾಲದಲ್ಲಿಯೇ, ಕೂಡಲೇ

ಗ

ಗಡಸು – ಒರಟು, ಬಿರುಸು

ಗಬ್ಬ – ಗರ್ಭ, ಬಸಿರು

ಗರಿಮೆ – ಹಿರಿಮೆ, ಭಾರ

ಗರ್ವ – ಜಂಭ, ಗತ್ತು

ಗಿರಿ – ಶಿಖರ

ಗ್ರಹಿಸು – ಸ್ವೀಕರಿಸು, ತಿಳಿದುಕೊಳ್ಳು

ಘ

ಘರ್ಷಣೆ – ಜಗಳ, ಯುದ್ಧ

ಘಾಸಿ – ತೊಂದರೆ, ದಣಿವು

ಚ

ಚಣ – ಸ್ವಲ್ಪಹೊತ್ತು

ಚಡಪಡಿಸು – ಕಳವಳಗೊಳ್ಳು, ಒದ್ದಾಡು

ಚಿತ್ತ – ಮನಸ್ಸು

ಚೀರು – ಕೂಗು, ಅರಚು

ಚೋದ್ಯ – ಆಶ್ಚರ್ಯ ಸೋಜಿಗದ ವಿಷಯ

ಜ

ಜಗ – ಲೋಕ

ಜಯಘೋಷ – ಗೆಲುವನ್ನು ಕೂಗಿ ಹೇಳುವಿಕೆ

ಜೀಯ – ಒಡೆಯ, ಪ್ರಭು

ಝ

ಝರಿ – ಬೆಟ್ಟದ ಕೊರಕಲಿನಲ್ಲಿ ಹರಿಯುವ ನೀರು

ತ

ತನು – ಶರೀರ

ತವರು – ಹುಟ್ಟಿದ ಮನೆ

ತತ್‌ಕ್ಷಣ – ಕೂಡಲೇ

ತ್ಯಾಜ್ಯ – ಬಿಡತಕ್ಕುದು

ತುರು – ದನ, ಹಸು

ತುತ್ತಾಗು – ಈಡಾಗು

ತೃಪ್ತ – ಸಮಾಧಾನ ಹೊಂದಿದವನು

ತೆನೆ – ಕದಿರು

ತೊಡಕು – ತೊಂದರೆ

ತೋಷ – ಆನಂದ, ತೃಪ್ತಿ

ತಂಬೆಲರು – ತಂಪಾದ ಗಾಳಿ

ದ/ಧ

ದನುಜ – ರಾಕ್ಷಸ

ದರ್ಬಾರು – ಒಡ್ಡೋಲಗ, ಆಸ್ಥಾನ

ದವಡೆ – ಆಹಾರ ಜಗಿಯುವ ಭಾಗ

ದಾನವ – ರಾಕ್ಷಸ

ದಿಗಿಲು – ಭಯ, ಹೆದರಿಕೆ

ದೃಢ – ಭದ್ರವಾದ, ಬಲಿಷ್ಠ

ದೃಶ್ಯ – ಕಾಣುವ

ದೇಣಿಗೆ – ಕೊಡುಗೆ

ದೈತ್ಯ – ರಾಕ್ಷಸ

ದೊರೆ – ಅರಸ, ಭೂಪತಿ

ದೌಡಾಯಿಸು – ವೇಗವಾಗಿ ಓಡು

ದಂಡನಾಯಕ – ಸೇನಾನಿ

ದಂಡನೆ – ಶಿಕ್ಷೆ

ದಂಡೆ – ದಡ, ಹತ್ತಿರ

ಧನ್ಯ – ಕೃತಾರ್ಥ, ಪುಣ್ಯವಂತ

ಧಾರೆ – ಒಂದೇ ಸಮನೆ ನೀರು ಸುರಿಯುವಿಕೆ

ನ

ನರಕ – ಅತಿಯಾದ ಕಷ್ಟ

ನಾಥ – ಒಡೆಯ, ಗಂಡ, ನಾಯಕ

ನಿರ್ಗತಿಕ – ಗತಿಯಿಲ್ಲದವನು

ನಿರಾಶೆ(ಸೆ) – ಆಶಾಭಂಗ

ನಿರಾಳ – ನೆಮ್ಮದಿ, ಚಿಂತೆಯಿಲ್ಲದ

ನಿರ್ಜನ – ಜನವಾಸ ಇಲ್ಲದ

ನಿಸರ್ಗ – ಪ್ರಕೃತಿ, ಸಹಜವಾದುದು

ನೆತ್ತರು – ರಕ್ತ

ನೆತ್ತಿಗೇರು – ತಲೆಗೆ ಹತ್ತು

ನೆಲೆನಿಲ್ಲು – ವಾಸಮಾಡು

ನೆಮ್ಮದಿ – ಸಮಾಧಾನ

ನೋಟಕ – ನೋಡುವವನು, ಪ್ರೇಕ್ಷಕ

ನಾಂದಿ – ಆರಂಭ, ಕಾರ್ಯಾರಂಭದ ಪ್ರಾರ್ಥನೆ

ಪ/ಫ

ಪಥ – ದಾರಿ

ಪರಮ – ಪವಿತ್ರ

ಪರದೇಶ – ವಿದೇಶ

ಪರವಾನಗಿ – ಒಪ್ಪಿಗೆ

ಪರಿವಾರ – ಸುತ್ತಲಿನ ಜನ

ಪರಿವರ್ತಿಸು – ಬದಲಾಯಿಸು

ಪವಾಡ – ಆಶ್ಚರ್ಯಕರವಾದ ಘಟನೆ

ಪಾಳ್ನೆಳ - ಬಂಜರು ಭೂಮಿ
ಪೀಳಿಗೆ - ತಲೆಮಾರು
ಪುಣ್ಯಾತ್ಮ - ಪುಣ್ಯವಂತ
ಪುನರಪಿ - ಮತ್ತೊಮ್ಮೆ
ಪ್ರತಿರೂಪ - ಪ್ರತಿಬಿಂಬ
ಪ್ರಭಾವ - ಹಿರಿಮೆ, ವರ್ಚಸ್ಸು
ಪ್ರಜ್ವಲಿಸು - ಪ್ರಕಾಶಿಸು
ಪ್ರಶಸ್ತಿ - ಹೊಗಳಿಕೆ, ಗೌರವಸೂಚಕ ಬಿರುದು
ಪ್ರಶಾಂತ - ಕೀರ್ತಿವಂತ, ಹೆಸರುಪಡೆದ, ಹೆಸರುವಾಸಿಯಾದ
ಪ್ರಸ್ತುತ - ಈಗಿನ
ಪೊಟರೆ - ಮರದ ಟೊಳ್ಳು
ಪೌರಜನ - ಊರ ಜನರು
ಪಂಜು - ದೀವಟಿಗೆ
ಫಲ - ಹಣ್ಣು

ಬ / ಭ

ಬಣವೆ - ಮೆದೆ, ರಾಶಿ
ಬಲುಹು - ಸಾಮರ್ಥ್ಯ
ಬವರ - ಯುದ್ಧ
ಬಳುವಳಿ - ಉಡುಗೊರೆ
ಬಾಹ್ಯ - ಹೊರ
ಬಿರುಕು - ಒಡಕು, ವೈಮನಸ್ಯ
ಭಿಕ್ಷಾಟನೆ - ಭಿಕ್ಷೆ ಬೇಡುವುದು
ಬುವಿ - ಭೂಮಿ
ಬೆರಗು - ಆಶ್ಚರ್ಯ
ಬೇಗೆ - ಸೆಕೆ, ಉರಿ
ಬೇಡಿಕೆ - ಕೋರಿಕೆ
ಬೆಂಗದಿರ - ಸೂರ್ಯ, ರವಿ
ಭರವಸೆ - ಆಶ್ವಾಸನೆ
ಭೀಕರ - ಭಯವನ್ನುಂಟುಮಾಡುವ. ಭಯಾನಕ

ಮ

ಮಜೂರಿ - ಕೂಲಿ
ಮನುಜ - ಮನುಷ್ಯ
ಮಮತೆ - ಮಮಕಾರ, ಪ್ರೀತಿ
ಮರುಕ - ದುಃಖ, ಅನುಕಂಪ
ಮರೆ - ರಹಸ್ಯ, ಹಿಂಬದಿ
ಮಾನ್ಯ - ಗೌರವಸ್ಥ,ಗೌರವಾನ್ವಿತ
ಮಿಗಿಲು - ಹೆಚ್ಚು, ಅಧಿಕ
ಮಿಡಿಯು - ಸ್ಪಂದಿಸು
ಮಿತವಾದ - ಹದವಾದ,ಎಲ್ಲೆಯೊಳಗಿನ
ಮಿತಿಮೀರು - ಎಲ್ಲೆದಾಟು
ಮುದ - ಸಂತಸ
ಮುನಿಯು - ಸಿಟ್ಟಾಗು
ಮೂಡು - ಪೂರ್ವದಿಕ್ಕು, ಉದಯಿಸು
ಮೋರೆ - ಮುಖ

ಯ

ಯಾತನೆ - ನೋವು
ಯುಕ್ತಿ - ಉಪಾಯ

ರ

ರಣರಂಗ - ಯುದ್ಧಕ್ಷೇತ್ರ
ರವಾನೆ - ಕಳುಹಿಸುವುದು

ರಭಸ – ವೇಗ

ರಮಣೀಯ – ಸೌಂದರ್ಯದಿಂದ ಕೂಡಿದ, ಮನೋಹರವಾದ

ರೊಕ್ಕ – ಹಣ

ರೋಮಾಂಚನ – ಮೈನವಿರೇಳು

ರಂಗಭೂಮಿ – ರಂಗಸ್ಥಳ

### ಲ

ಲಸಿಕೆ – ಪ್ರತಿರೋಧಕ ಚುಚ್ಚುಮದ್ದು

ಅಣಕ – ಕುಚೋದ್ಯ

ಲೋಪ – ಕುಂದುಕೊರತೆ

ಲಂಘಿಸು – ಮೀರಿನಡೆ, ಹಾರು

ವತ್ಸ – ಮಗ, ಪುತ್ರ

ವರಹ – ಚಿನ್ನದ ನಾಣ್ಯ

ವ್ಯಾಸಂಗ – ಅಧ್ಯಯನ

ವಿದ್ವಾಂಸ – ಪಂಡಿತ

ವಿನಯ – ನಮ್ರತೆ

ವ್ಯರ್ಥ – ನಿರುಪಯುಕ್ತ

ವಿಪರೀತ – ಅತಿಯಾದ, ವಿರುದ್ಧವಾದ

ವಿಷಯುಕ್ತ – ವಿಷದಿಂದ ಕೂಡಿದ

ವೈಭವ – ಆಡಂಬರ, ಐಶ್ವರ್ಯ

ವೈವಿಧ್ಯ – ವಿವಿಧತೆಯಿಂದ ಕೂಡಿದ

ವಂದನೆ – ನಮಸ್ಕಾರ, ಧನ್ಯವಾದ

### ಶ

ಶಕ್ತಿಗುಂದು – ಬಲಕಡಿಮೆಯಾಗು

ಶತ್ರು – ವೈರಿ

ಶರಣ – ಭಕ್ತ, ಜಂಗಮ

ಶ್ರೇಷ್ಠ – ಅತ್ಯುತ್ತಮ

### ಸ

ಸಮರ್ಥ – ಬುದ್ಧಿವಂತ, ಗಟ್ಟಿಗ

ಸರದಿ – ಪಾಳಿ, ಬಾರಿ

ಸಲಹೆ – ಬುದ್ಧಿವಾದ, ಸೂಚನೆ

ಸರಳ – ಸುಲಭವಾದ, ನೇರವಾದ

ಸವೆಯು – ಉಜ್ಜು, ಅರೆಯು, ತೇಯು

ಸಾಗರ – ಸಮುದ್ರ, ಕಡಲು

ಸಾಟಿ – ಸಮಾನ, ಎಣೆ

ಸಾತ್ವಿಕ – ಸತ್ವಗುಣದಿಂದ ಕೂಡಿದ, ಪ್ರಾಮಾಣಿಕ

ಸಾರಥಿ – ರಥ ನಡೆಸುವವನು

ಸಾರ್ವಭೌಮ – ಚಕ್ರವರ್ತಿ

ಸಾಮ್ರಾಜ್ಯ – ಚಕ್ರಾಧಿಪತ್ಯ

ಸಾಹಸ – ಪರಾಕ್ರಮ

ಸಾರ್ಥಕ – ಸಫಲ

ಸಿರಿ – ಸಂಪತ್ತು, ಐಶ್ವರ್ಯ

ಸುವಾರ್ತೆ – ಶುಭವಾರ್ತೆ, ಒಳ್ಳೆಯಸುದ್ದಿ

ಸುಳಿ – ಚಕ್ರಾಕಾರವಾಗಿ ತಿರುಗು

ಸುಶ್ರಾವ್ಯ – ಕೇಳಲು ಹಿತಕರವಾದ

ಸುರ – ದೇವತೆ, ಅಮರ

ಸುರಕ್ಷಿತ – ಚೆನ್ನಾಗಿ ಕಾಪಾಡಿದ, ರಕ್ಷಿಸಿದ

ಸೂಚನೆ – ತಿಳಿಸುವುದು, ಸುಳಿವು ನೀಡು

ಸೂಸು – ಚಿಮ್ಮು, ತುಳುಕು

ಸೆಳೆಯು – ಎಳೆಯು

ಸೋಲು – ಅಪಜಯ, ದಣಿವು

ಸೌರಭ – ಪರಿಮಳ, ಸುವಾಸನೆ

ಸಂಶೋಧನೆ – ಅನ್ವೇಷಣೆ

ಸಂತೃಪ್ತಿ – ಸಮಾಧಾನ

| | | | |
|---|---|---|---|
| ಸಂಕ್ಷಿಪ್ತ | – ಕುಗ್ಗಿಸಲ್ಪಟ್ಟ, ಚಿಕ್ಕದಾದ | ಹಸ್ತಮುದ್ರೆ | – ಕೈಗಳ ಅಭಿವ್ಯಕ್ತಿ |
| ಸಂಪತ್ತು | – ಐಶ್ವರ್ಯ, ಸಿರಿವಂತಿಕೆ | ಹಾವಳಿ | – ತೊಂದರೆ, ಕಾಟ |
| ಸಂತತಿ | – ವಂಶ, ಸಂತಾನ | ಹಿರಿತನ | – ದೊಡ್ಡತನ, ಶ್ರೇಷ್ಠ |
| | | ಹಿರಿಮೆ | – ಹೆಚ್ಚುಗಾರಿಕೆ |
| | ಹ | ಹಿಂಸೆ | – ತೊಂದರೆ |
| ಹಗುರ | – ಭಾರವಿಲ್ಲದುದು | ಹುನ್ನಾರ | – ಉಪಾಯ, ಚಾತುರ್ಯ |
| ಹತಾಶೆ | – ನಿರಾಶೆ | ಹುರುಪು | – ಉತ್ಸಾಹ |
| ಹರವಿ | – ಮಣ್ಣಿನ ಕೊಡ | ಹೂಳು | – ಹುಗಿಯು, ತಳದಲ್ಲಿ ತುಂಬಿಕೊಳ್ಳು, ಕೆಸರು. |
| ಹರಸು | – ಆಶೀರ್ವಾದ ಮಾಡು, ಹಾರೈಸು | | |

***

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ, ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಚರಿಸುತ್ತಿದೆ. ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳ ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

### ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


*ಸಂಪರ್ಕಿಸಬೇಕಾದ ವಿಳಾಸ*

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್‌ರೋಸ್ ಜಂಕ್ಷನ್, ತಿರುವನಂತಪುರ – 34

ಫೋನ್ : 0471–2346602, 2346603

E-mail : keralachildrights@gmail.com. website : www.kescpcr.kerala.gov.in.


**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**
**ಕೇರಳ ಪೋಲೀಸ್ ಸಹಾಯವಾಣಿ : 0471 - 3243000/44000/45000**

Visit : nireekshana.org.in (CRTE monitoring system)

**State Council of Educational Research & Training (SCERT)**
Vidyabhavan, Poojappura, Thiruvananthapuram,
Kerala - 695 012 Website www.scert.kerala.gov.in
e-mail scertkerala@gmail.com

KBPS

Printed by the Managing Director
**Kerala Books and Publications Society**
(An Undertaking of the Government of Kerala)
Kakkanad, Kochi-682 030